ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 3, 2010 ರೂ. 12/-

ಲಿಂಗಾಯತರಿಗೆ
ವಿಸಿ
ಹುದ್ದೆ



ಕ್ಕ
ರಾಜ
ರಾಣಿ

ನಿನ್ನ ಕೈಯೊಳಗೆ ಹಿಡಿ ಮಣ್ಣು ಜನರ ಬಾಯೊಳಗೆ!

ನಂತ್ ಸಿಎಂ-ರೆಡ್ಡಿ ಡಿಸಿಎಂ ಅಂತೆ

ಪರೇಷನ್ ಕಮಲ ಭಾಗ-3

ಂ ಕೋಟಿ+ಮಂತ್ರಿಗಿರಿ

ೈಸೂರು ವಿಕೃತಕಾಮಿ ಗಿರೀಶ್

ನಕಲ್ ಶರಣಾಗತಿ
ಸರ್ಕಾರಕ್ಕೇ ವಂಚಿಸಿದ ಪೊಲೀಸ್

ರ್ಪದ ಜೊತೆ ಮಲ್ಲಿಕಾ ಸರಸ



ರಂಜನೆ | ಬೋಧನೆ | ಪ್ರತೋದನೆ ಲಂಕೇಶ್

ರಾಜಕೀಯವೇ ಅಸಹ್ಯ ಹುಟ್ಟಿಸುತ್ತಿರುವ ಈ ಹೊತ್ತಿನಲ್ಲಿ...

ಈಗಲಾದರೂ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳೋಣವೇ?



ಕರ್ನಾಟಕದ ರಾಜಕಾರಣ ದಿನೇದಿನೇ ರಾಜಕೀಯ ಮತ್ತು ನೈತಿಕ ಅವನತಿಯ ಎಲಾ ಮೈಲಿಗಲ್ಲುಗಳನ್ನು ದಾಟುತ್ತಾ ರಸಾತಳ-ಪಾತಾಳವನ್ನು ಮುಟ್ಟುತ್ತಿದೆ. ಅತ್ಯಂತ ಸಭ್ಯ ಸಂಸ್ಕೃತಿಯ ರಾಜ್ಯ ಎಂದೆಲ್ಲಾ ಹೆಸರು ಪಡೆದಿದ್ದ ರಾಜ್ಯದಲ್ಲಿ ಶಿಸ್ತುಬದ್ಧ ಪಕ್ಷ ಎಂದು ಕೊಚ್ಚಿಕೊಳ್ಳುತ್ತಿದ್ದ ಬಿಜೆಪಿ ನಡೆಸಿರುವ ಅವಾಂತರಗಳು ಕಳೆದ ಮೂರು ತಿಂಗಳಲ್ಲಿ ಕರ್ನಾಟಕಕ್ಕೆ ದೇಶದ ಸಂಸದೀಯ ರಾಜಕಾರಣದಲ್ಲೇ ಅತ್ಯಂತ ಕಳಂಕಿತ ರಾಜ್ಯವೆಂಬ ಹೆಗ್ಗಳಿಕೆಯನ್ನು ತಂದುಕೊಟ್ಟಿದೆ.

2008ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲೂ ಇಡೀ ದೇಶದಲ್ಲೇ ಅತ್ಯಂತ ಹೆಚ್ಚು ಚುನಾವಣಾ ಭ್ರಷ್ಟಾಚಾರ ನಡೆದ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿತ್ತು. ಅದರಲ್ಲೂ ಇಡೀ ದೇಶದಲ್ಲೇ ಅತಿಹೆಚ್ಚು ಭ್ರಷ್ಟಾಚಾರ ನಡೆದ ಕ್ಷೇತ್ರಗಳು ರೆಡ್ಡಿ ರಿಪಬ್ಲಿಕ್‌ನ ಬಳ್ಳಾರಿ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪನವರ ಸ್ವಕ್ಷೇತ್ರವಾದ ಶಿವಮೊಗ್ಗವಾಗಿತ್ತು. ಈ ಎರಡು ಕ್ಷೇತ್ರಗಳಲ್ಲಿ ಮತದಾರರನ್ನು ಭ್ರಷ್ಟಗೊಳಿಸಿದಷ್ಟು ದೇಶದ ಇನ್ನಾವ ಕ್ಷೇತ್ರದಲ್ಲೂ ಆಗಿಲ್ಲವೆಂದು ಸ್ವತಃ ಚುನಾವಣಾ ಆಯೋಗವೇ ಘೋಷಿಸಿತ್ತು.

ಚುನಾವಣೆಯ ನಂತರ ಬಿಜೆಪಿ ಪಕ್ಷ ಬಹುಮತವನ್ನು ಪಡೆದುಕೊಳ್ಳಲು ಸಂಸದೀಯ ರಾಜಕಾರಣವೇ ಬೆಚ್ಚಿಬೀಳುವಂಥಾ ಹೊಸ ರಾಜಕೀಯ ಭ್ರಷ್ಟಾಚಾರವನ್ನು ಮಾಡಿ ಇಡೀ ದೇಶವನ್ನೇ ದಿಗ್ಭ್ರಾಂತಿಗೊಳಿಸಿತು, ಜನಾದೇಶವನ್ನೇ ಧಿಕ್ಕರಿಸುವಂಥಾ 'ಆಪರೇಷನ್ ಕಮಲ' ನಡೆಸಿತು.

ಈ ಜನತಂತ್ರ ವ್ಯವಸ್ಥೆಯು ಜನಾದೇಶದ ಮೇರೆಗೆ ನಡೆಯಬೇಕು. ಆದರೆ ನಾವು ಅನುಸರಿಸಿಕೊಂಡು ಬರುತ್ತಿರುವ ಪ್ರಾತಿನಿಧಿಕ ಪ್ರಜಾತಂತ್ರದಲ್ಲಿ ಜನಪ್ರತಿನಿಧಿಯನ್ನು ಕೊಂಡುಕೊಂಡರೆ ಸಾಕು. ಆ ಮೂಲಕ ಜನಾದೇಶವನ್ನೇ ಕೊಂಡುಕೊಳ್ಳಬಹುದು. ಹೀಗಾಗಿ ನಮ್ಮ ಜನತಂತ್ರ ಈ ಜನಾದೇಶದ "ಪಾವಿತ್ರ್ಯತೆಯನ್ನು" ಕಾಪಾಡಿಕೊಳ್ಳಲು ವಿಫಲವಾಗಿದೆ ಎಂದಾಯಿತಲ್ಲವೇ? ಅಷ್ಟು ಮಾತ್ರವಲ್ಲ, ಇಂಥಾ ಜನತಂತ್ರದ ಹಗಲು ದರೋಡೆಯ ಮೇಲೆ ನಡೆಯುವ ಸರ್ಕಾರ ಜನರ ಸರ್ಕಾರ ಹೇಗಾದೀತು?

ಪಕ್ಷಾಂತರ ನಿಷೇಧ ಕಾಯಿದೆ ಅಂತಲೂ ಒಂದಿದೆ. ಈ ಕಾಯಿದೆಯು ಒಂದು ಪಕ್ಷದಿಂದ ಆಯ್ಕೆಯಾದ ಜನಪ್ರತಿನಿಧಿಗಳು ಮತ್ತೊಂದು ಪಕ್ಷಕ್ಕೆ ಹಾರದಂತೆ ತಡೆಗಟ್ಟಲು ಕೆಲವು ನಿಯಮಗಳನ್ನು ಮಾಡಿದೆ. 1985ರಲ್ಲಿ ಈ ಕಾಯಿದೆ ಜಾರಿಗೆ ಬಂದಾಗ ಒಂದು ಪಕ್ಷದಿಂದ ಆಯ್ಕೆಯಾದ ಶಾಸಕರು ಮಾತ್ರ ಪಕ್ಷಕ್ಕೆ ಬೆಂಬಲವನ್ನು ಹಿಂತೆಗೆದುಕೊಂಡು ಮತ್ತೊಂದು ಪಕ್ಷವನ್ನು ಬೆಂಬಲಿಸಬೇಕೆಂದರೆ ಆ ಪಕ್ಷದಿಂದ ಆಯ್ಕೆಯಾದ ಒಟ್ಟಾರೆ ಶಾಸಕರ ಸಂಖ್ಯೆಯ 1/3ರಷ್ಟು ಶಾಸಕರು ಒಟ್ಟಾಗಿ ಮಾತೃಪಕ್ಷದಿಂದ ಹೊರಬರಬೇಕೆಂಬುದನ್ನು ಕಡ್ಡಾಯ ಮಾಡಿತು. ನಂತರ 2003ರಲ್ಲಿ ಮಾತೃಪಕ್ಷದಿಂದ ಒಟ್ಟಾಗಿ 2/3ರಷ್ಟು ಶಾಸಕರು ಹೊರಬಂದರೆ ಮಾತ್ರ ಬೇರೆ ಪಕ್ಷಕ್ಕೆ ಬೆಂಬಲ ನೀಡಬಹುದೆಂದು ಕಾಯಿದೆಗೆ ತಿದ್ದುಪಡಿ ಮಾಡಲಾಯಿತು. ಈ ಕಾಯಿದೆ ರೂಪುಗೊಳ್ಳುವ ಮುನ್ನ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಮತ್ತೊಂದು ಪಕ್ಷ ಶಾಸಕರನ್ನು ಖರೀದಿ ಮಾಡಿ ಸರ್ಕಾರಗಳನ್ನು ಉರುಳಿಸುತ್ತಿತ್ತು, ಈ ಕಾಯಿದೆ ಜಾರಿಗೆ ಬಂದ ನಂತರದ ಕೆಲವು ವರ್ಷಗಳಲ್ಲಿ ಸರ್ಕಾರಗಳು ಉರುಳುತ್ತಿದ್ದ ಪ್ರಮಾಣ ಕಡಿಮೆಯಾಯಿತು, ಅಷ್ಟೆ. ಏಕೆಂದರೆ ಈ ಕಾಯಿದೆಯಿಂದ ಜನಪ್ರತಿನಿಧಿಗಳ ರೀಟೈಲ್ ಖರೀದಿ ನಿಂತಿತಾದರೂ ಸಗಟು ಖರೀದಿಗೆ ಮುಕ್ತ ಅವಕಾಶವಿದ್ದೇ ಇತ್ತು.



ಇತರ ಪಕ್ಷಗಳು ಕಾಯಿದೆ-ಕಾನೂನುಗಳು ಚಾಪೆ ಕೆಳಗೆ ತೂರಿದರೆ ಕರ್ನಾಟಕದ ಬಿಜೆಪಿ ಸರ್ಕಾರ 'ಆಪರೇಷನ್ ಕಮಲ'ದ ಮೂಲಕ ತಾವು ರಂಗೋಲಿಯ ಧೂಳಿನ ಕೆಳಗೂ ತೂರುವಂಥಾ ಕುತಂತ್ರಿಗಳೆಂಬುದನ್ನು ಸಾಬೀತು ಪಡಿಸಿತು. ಹಾಲಿ ಕೋರ್ಟಿನಲ್ಲಿರುವ 11 ಜನರ ಶಾಸಕರ ಅನರ್ಹತೆ ಪ್ರಕರಣ ಇನ್ನೂ ವಿಚಾರಣೆ ನಡೆಯುತ್ತಿರುವಾಗಲೇ ಬಿಜೆಪಿ ಪಕ್ಷ 'ಆಪರೇಷನ್ ಕಮಲ-2'ಕ್ಕೆ ಹೊಸ ಮಿಕಗಳನ್ನು ಹುಡುಕಲು ಪ್ರಾರಂಭಿಸಿದೆ. ಈಗಾಗಲೇ 224 ಶಾಸಕರ ಬಲದ ಕರ್ನಾಟಕದ ಶಾಸನ ಸಭೆಯ ಸಾಮರ್ಥ್ಯ 208ಕ್ಕೆ ಕುಸಿದಿದೆ. ಇನ್ನಷ್ಟು ಶಾಸಕರು ಕಮಲಕ್ಕೆ ಬಲಿಯಾದರೆ ಶಾಸನ ಸಭೆಯ ಸಾಮರ್ಥ್ಯ ಇನ್ನಷ್ಟು ಕಡಿಮೆಯಾಗಬಹುದು. ಅದೇ ರೀತಿ ಮೂಲದಲ್ಲಿ 110 ಶಾಸಕರ ಬಲವನ್ನು ಪಡೆದಿದ್ದ ಬಿಜೆಪಿ 5 ಪಕ್ಷೇತರ ಶಾಸಕರ ಬೆಂಬಲವನ್ನು ಪಡೆದು ತನ್ನ ಶಕ್ತಿಯನ್ನು 115ಕ್ಕೆ



ಹಿಗ್ಗಿಸಿಕೊಂಡಿತ್ತು, ಅಂದರೆ ಬಹುಮತಕ್ಕೆ ಬೇಕಿದ್ದ 113ಕ್ಕಿಂತ ಎರಡು ಜಾಸ್ತಿ 'ಗಳಿ'ಸಿ'ಕೊಂಡಿತ್ತು'. ನಂತರ ಆಪರೇಷನ್ ಕಮಲವನ್ನು ಮಾಡಿ ತನ್ನ ಶಾಸಕ ಬಲವನ್ನು 120ಕ್ಕೆ ಏರಿಸಿಕೊಂಡಿತ್ತು, ಆದರೆ ಈ ತತ್ವರಹಿತ, ಅವಕಾಶವಾದಿ, ಕುತಂತ್ರ ಹುಟ್ಟು ಹಾಕಿದ್ದ ಸುಳಿಗೆ ಸಿಲುಕಿ ಈಗ ಅದರ ಬಲ 106ಕ್ಕೆ ಇಳಿದಿದೆ. ಅಂದರೆ ಚುನಾವಣೆಯಲ್ಲಿ ಪಡೆದ ಸೀಟುಗಳ ಸಂಖ್ಯೆಗಿಂತ 4 ಕಡಿಮೆಯಾಗಿದೆ. ಅಂದರೆ ಕಳೆದ ಎರಡೂವರೆ ವರ್ಷಗಳ ಅವಕಾಶವಾದಿ ರಾಜಕಾರಣದ ಮ್ಯಾಥಮೆಟಿಕ್ಸ್ ಏನಪ್ಪಾ ಎಂದರೆ 110+5+7 =106!

ಇನ್ನು ವಿರೋಧ ಪಕ್ಷಗಳು ಸಹ ಚುನಾವಣೆಯಲ್ಲಿ ಪಡೆದಷ್ಟು ಶಕ್ತಿಯನ್ನು ಉಳಿಸಿಕೊಂಡಿಲ್ಲ, ಕಾಂಗ್ರೆಸ್‌ಗೆ 80 ಸೀಟುಗಳು ಬಂದಿದ್ದರೆ ಈಗ ಅದರ ಸಂಖ್ಯಾ ಬಲ 72. ಜನತಾದಳ ಚುನಾವಣೆಯಲ್ಲಿ 28 ಸೀಟುಗಳನ್ನು ಪಡೆದಿದ್ದರೂ ನಂತರದ 'ಆಪರೇಷನ್ ಕಮಲ'ದಲ್ಲಿ ಒಂದಷ್ಟನ್ನು ಕಳೆದುಕೊಂಡಿತ್ತು, ಮತ್ತೆ ಉಪ ಚುನಾವಣೆಯಲ್ಲಿ ಕಳೆದುಹೋದದ್ದನ್ನು ಗಳಿಸಿಕೊಂಡಿತ್ತಾದರೂ ಈಗ ಈ ಹೊಸ ಯುದ್ಧದಲ್ಲಿ ಮತ್ತೆ ಒಂದನ್ನು ಕಳೆದುಕೊಂಡು ತನ್ನ ಸಂಖ್ಯೆಯನ್ನು 27ಕ್ಕೇ ಇಳಿಸಿಕೊಂಡಿದೆ. ಈಗ ಶಾಸಕರ ಅನರ್ಹತೆ ವಿಚಾರ ಯಾರ ಪರವಾಗಿ ಬಂದರೂ ಇನ್ನಷ್ಟು ವಿಕೆಟ್‌ಗಳು ಬೀಳುತ್ತವೆ.

ಸಂಸದೀಯ ಪ್ರಜಾತಂತ್ರದಲ್ಲಿ ಈ ವಿಕೃತ ಅಂಕಗಣಿತದ ನಿಜವಾದ ಅರ್ಥವೇನು? ಇಲ್ಲಿ ಸಂಕಲನವಾಗುತ್ತಿರುವುದೇನು? ವ್ಯವಕಲನವಾಗುತ್ತಿರುವುದೇನು? "ಗುಣಾ"ಕಾರವಾಗುತ್ತಿರುವುದೇನು? ಭಾಗ(ವಾಗಿ) (ವಿ)ಕಾರಗೊಳ್ಳುತ್ತಿರುವುದೇನು?

2008ರ ಚುನಾವಣೆಯಿಂದ ಮೊದಲುಗೊಂಡು ಆಪರೇಷನ್ ಕಮಲ-1 ಮತ್ತು -2ಕ್ಕೆ ಬಿಜೆಪಿ ಪಕ್ಷ ಏನಿಲ್ಲವೆಂದರೂ ಸಾವಿರ ಕೋಟಿ ರೂಪಾಯಿ ಖರ್ಚುಮಾಡಿರಬಹುದೆಂದು ಒಂದು ಲೆಕ್ಕಾಚಾರ. ಇಷ್ಟು ಹಣ ಈ ಪಕ್ಷಕ್ಕೆ ಎಲ್ಲಿಂದ ಬಂತು? ಅದೇ ರೀತಿ ಈಗ ಪ್ರತಿಪಕ್ಷಗಳು ನಡೆಸುತ್ತಿರುವ ಆಪರೇಷನ್ ವಿ"ದಳ"ದಲ್ಲಿ ಏನಿಲ್ಲವೆಂದರೂ 500 ಕೋಟಿ ರೂಪಾಯಿ ಖರ್ಚಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಪ್ರತಿಪಕ್ಷಗಳಿಗೆ ಇಷ್ಟೊಂದು ಹಣ ಎಲ್ಲಿಂದ ಬಂತು? ಎರಡಕ್ಕೂ ಉತ್ತರ ನಿಗೂಢವೇನಲ್ಲ! ಆಳುವ ಬಿಜೆಪಿ ಸರ್ಕಾರಕ್ಕೆ ಗಣಿ ರೆಡ್ಡಿಗಳು, ಪ್ರತಿಪಕ್ಷಗಳಿಗೆ ರೆಡ್ಡಿಗಳನ್ನು ಬಿಟ್ಟು ಇತರ ಗಣಿ ಧಣಿಗಳು. ಆದರೆ ರೆಡ್ಡಿಗಳಾಗಲೀ, ಬಲ್ಡೋಟಾಗಳಾಗಲೀ ಈ ನಾಡಿನ ಸಂಪತ್ತನ್ನು ಲೂಟಿ ಮಾಡಿಯೇ ಸಾವಿರಾರು ಕೋಟಿ ಸಂಪಾದಿಸಿದ್ದಾರೆ. ಅದರಲ್ಲಿ ಒಂದಷ್ಟು ಭಾಗವನ್ನು ಸರ್ಕಾರವನ್ನು ಕೊಳ್ಳಲೆಂದು ವ್ಯಯಿಸುತ್ತಿದ್ದಾರೆ. ಅಂದರೆ ಕಾಂಗ್ರೆಸ್-ಜೆಡಿಎಸ್ ಹೋಗಿ ಬಿಜೆಪಿ-ಜೆಡಿಎಸ್ ಬಂದರೂ, ಬಿಜೆಪಿ-ಜೆಡಿಎಸ್ ಹೋಗಿ ಬಿಜೆಪಿಯೇ ಬಂದರೂ ಎಲ್ಲಾ ಸರ್ಕಾರಗಳು ಗಣಿಧಣಿಗಳ, ರಿಯಲ್ ಎಸ್ಟೇಟ್ ಕುಳಗಳ, ಇನ್ನಿತರ ಲಾಭಿಗಳ ಸರ್ಕಾರವೇ!

ಹೀಗಾಗಿ ಅಂತಿಮ ವಿಶ್ಲೇಷಣೆಯಲ್ಲಿ ಆಳುವ ಮತ್ತು ವಿರೋಧ ಪಕ್ಷಗಳ ನಡುವೆ ಜನರ ಹೆಸರಿನಲ್ಲಿ ಮತ್ತು ಪ್ರಜಾತಂತ್ರದ ಹೆಸರಿನಲ್ಲಿ ನಡೆಯುತ್ತಿರುವ ಈ ಕದನ ಸಾರಾಂಶದಲ್ಲಿ ಗಣಿಧಣಿಗಳ ಅಥವಾ ಇನ್ನಿತರ ಉದ್ದಿಮೆಪತಿಗಳ ಎರಡು ಬಣಗಳ ನಡುವೆ ನಡೆಯುತ್ತಿರುವ ಕದನವೇ! ಇದರಲ್ಲಿ ಜನಪರ ಹಿತಾಸಕ್ತಿ ಏನಿದೆ? ಜನತಂತ್ರದ ಹಿತಾಸಕ್ತಿ ಏನಿದೆ?

ಖಂಡಿತವಾಗಿ ಇದರಲ್ಲಿ ಬಿಜೆಪಿ ಪ್ರತಿನಿಧಿಸುತ್ತಿರುವ ಬಣ ಇತರ ಬಣಕ್ಕಿಂತ ಆಕ್ರಮಣಕಾರಿ, ಕ್ರೂರಿ ಮತ್ತು ಅತ್ಯಂತ ಪ್ರತಿಗಾಮಿ. ಈವರೆಗೆ ನಮ್ಮನ್ನಾಳಿದ ಕಾಂಗ್ರೆಸ್ ಆಗಲೀ, ಇತರ ಪಕ್ಷಗಳಾಗಲೀ ಜನರ ಪರವಾಗಿಯೇನೂ ಆಡಳಿತ ನಡೆಸಲಿಲ್ಲ ಎಂಬುದೂ, ಕ್ಯಾಪಿಟೇಷನ್ ಲಾಬಿಗಳು, ರಿಯಲ್ ಎಸ್ಟೇಟ್ ಲಾಬಿಗಳು, ಸಾಫ್ಟ್‌ವೇರ್ ಲಾಬಿಗಳು ಎಲ್ಲಾ ಪಕ್ಷಗಳ ನಿಜವಾದ ಧಣಿಗಳು ಎಂಬುದು ನಿಜವಾದರೂ ಅವು ತುರ್ತುಸ್ಥಿತಿಯ ನಂತರದಲ್ಲಿ ಸಂಸದೀಯ ರಾಜಕಾರಣದ ರೀತಿ ರಿವಾಜುಗಳನ್ನು, ಕಾನೂನು-ಕಾಯಿದೆಗಳನ್ನು ಇಷ್ಟು ಬಹಿರಂಗವಾಗಿ ಉಲ್ಲಂಘಿಸುತ್ತಿರಲಿಲ್ಲ, ತೋರಿಕೆಗಾದರೂ ಉಳಿದುಕೊಂಡಿದ್ದ ಜನತಂತ್ರದ ಸಂಸ್ಥೆಗಳ ಮೌಲ್ಯವನ್ನು ಹೀಗೆ ಹರಾಜಾಕಿರಲಿಲ್ಲ,

ಜನತಂತ್ರದ ಸಂಸ್ಥೆಗಳನ್ನು ಇಷ್ಟು ಭ್ರಷ್ಟಗೊಳಿಸದೇ ಇದ್ದದ್ದರಿಂದ ಜನರಿಗಾದ ಲಾಭವೇನು? ಇದರಿಂದ ಜನಸಾಮಾನ್ಯರಿಗೆ ವಿಶೇಷವಾಗಿ ಏನೂ ಅನುಕೂಲವಾಗಿರಲಿಲ್ಲ, ಆದರೆ ಅವರ ದರ್ಪ, ಲೂಟಿ ಮತ್ತು ಶೋಷಣೆಗಳ ಸ್ವರೂಪವು ತೋರಿಕೆಗಾದರೂ ಕಾನೂನು ಚೌಕಟ್ಟಿನಡಿ ಇರಬೇಕಿದ್ದರಿಂದ ಜನಸಾಮಾನ್ಯರ ಮೇಲೆ ಅದರ ಪ್ರಭಾವ ಅಷ್ಟು ಬರ್ಬರವಾಗಿರಲಿಲ್ಲ, ಉಳ್ಳವರ ನಿಯಂತ್ರಣದಲ್ಲಿರುವ ಜನತಂತ್ರ ತಾನೇ ಹಾಕಿಕೊಂಡ ಚೌಕಟ್ಟಿನಲ್ಲಿದ್ದರೆ ಜನರಿಗಾಗುವ ಅನುಕೂಲ ಇಷ್ಟೇ! ಇದಕ್ಕಿಂತ ಹೆಚ್ಚೇನಿಲ್ಲ,

ಆಪರೇಷನ್ ಕಮಲದ ಸಂಸ್ಕೃತಿ, ಬಿಜೆಪಿಗೆ ಅನುಕೂಲವಾಗುವಂತೆ ಸ್ಪೀಕರ್ ಶಾಸಕರನ್ನು ಅನರ್ಹಗೊಳಿಸಿದ್ದು, ಪೊಲೀಸರು ಸಮವಸ್ತ್ರ ಧರಿಸಿ ಸದನದೊಳಗೆ ಪ್ರವೇಶಿಸಿದ್ದು ಇದೆಲ್ಲವೂ ಆಳುವ ಪಕ್ಷಗಳನ್ನು ಮತ್ತಷ್ಟು ಸರ್ವಾಧಿಕಾರಿಗಳನ್ನಾಗಿಸುತ್ತದೆ. ಹೀಗಾಗಿ ಇವೆಲ್ಲವನ್ನು ಜನಸಾಮಾನ್ಯರೂ ವಿರೋಧಿಸಬೇಕು. ಅದೇರೀತಿ ರಾಜ್ಯಪಾಲರ ಕಚೇರಿಯನ್ನು ಕೇಂದ್ರ ಸರ್ಕಾರದ ಪಕ್ಷದ ಹಿತಾಸಕ್ತಿಗೆ ತಕ್ಕಂತೆ ಬಳಸಿಕೊಳ್ಳಲು ಯತ್ನಿಸಿದ್ದೂ ಅಂತಿಮವಾಗಿ ಆಳುವ ಸರ್ಕಾರಗಳು ಸಾಂಸ್ಥಿಕ ನೀತಿನಿಯಮವನ್ನು ಉಲ್ಲಂಘಿಸಲು ಸಹಾಯ ಮಾಡುತ್ತದೆ. ಆದ್ದರಿಂದ ಅದರ ಬಗ್ಗೆಯೂ ಎಚ್ಚರ ವಹಿಸಬೇಕು.

14

ನೋ ಕಾಮೆಂಟ್ಸ್

"ಒಂದು ಸ್ಥಗಿತಗೊಂಡ ಗ್ರಾಮೀಣ ಆರ್ಥಿಕತೆಂ
ಹೆಚ್ಚೆಚ್ಚು ಸಣ್ಣ ವ್ಯಾಪಾರಿಗಳು ಇರಲು ಅಶಕ್ಯ. ಹಳ್ಳಿಯ
3 ಭಾಗದಷ್ಟು ಜನ ವಾಣಿಜ್ಯ ಉದ್ದೇಶವಿಲ್ಲದ ಆ
ಧಾನ್ಯದ ಉತ್ಪಾದನೆಯ ಮೇಲೆ ಆಧಾರಿತವಾಗಿದ್ದರೆ ಉ
ಶೇ.20ರಷ್ಟು ಜನ ಸಣ್ಣ ಪುಟ್ಟ ಕುಶಲ ಕೆಲಸಗಾರರಾಗಿರು
ಈ ಜನತೆಯ ಆರ್ಥಿಕ ಚಟುವಟಿಕೆಯ ಚಕ್ರ 6 ತಿಂಗಳ
ಒಂದು ವರ್ಷದಷ್ಟು ಸುದೀರ್ಘವಾಗಿರುತ್ತದೆ. ಈ ಯಾ
ಆರ್ಥಿಕ ಚಟುವಟಿಕೆಗಳು ಪ್ರತಿವಾರ ಮರುಪಾ
ಮಾಡುವಂಥ ಆದಾಯವನ್ನಾಗಲೀ, ಶೇ.20-40
ಬಡ್ಡಿಯನ್ನು ತೆರಬಲ್ಲಂಥ ಆದಾಯವನ್ನಾಗಲೀ ಹುಟ್ಟು
ವುದಿಲ್ಲ, ಹೀಗಾಗಿ ಅವರು ಮೈಕ್ರೋಫೈನಾನ್ಸ್‌ಗಳಿಂದ
ಬಗೆಯ ಭಾರೀ ಬಡ್ಡಿದರದಲ್ಲಿ ಸಾಲವನ್ನು ಪಡೆದುಕೊಂ
ಅವರ ಬಡತನವು ಅಳಿಯುವುದಿರಲಿ ಕೆಲವೇ ದಿನ
ಮೊದಲಿಗಿಂತ ಹೆಚ್ಚಿನ ಬಡತನಕ್ಕೆ ಗುರಿಯಾಗುತ್ತಾರೆ."

- ಪ್ರಕಾಶ್, ನಬಾರ್ಡ್‌ನ ಆರ್ಥಿಕ

"1984ರಿಂದೀಚೆಗೆ ಭಾರತವು 3 ಒಲಂ
ಮೆಡಲ್‌ಗಳನ್ನು ಗೆದ್ದಿದ್ದರೆ ಚೀನಾ 420 ಮೆಡಲ್‌ಗ
ಗೆದ್ದಿದೆ."

- ವ

"ಜಾತಿ ವ್ಯವಸ್ಥೆ ಭಯೋತ್ಪಾದನೆಗಿಂತ ಭೀಕರವಾದ
ಹಿಂದೂ ಧರ್ಮದ ಯಜಮಾನರಂತೆ ಕಾಣುವ ಪೇಜಾ
ಮಠಾಧೀಶರು ಬೌದ್ಧಧರ್ಮ ಸ್ವೀಕರಿಸಲು ಬಹಿರಂಗ
ಆಹ್ವಾನಿಸುತ್ತೇನೆ."

-ಮೊಗಳ್ಳಿ ಗಣ

"ಭಿನ್ನಮತೀಯರ ಅನರ್ಹತೆ ವಿಚಾರಣೆ ಸಂಜೆ
ನಡೆದರೆ ಬೆಳಗಿನಜಾವ 5ಕ್ಕೆಲ್ಲಾ ತೀರ್ಪು ನೀಡಲಾಗಿದೆ
ಆದೇಶದಲ್ಲಿ ಸುಪ್ರೀಂ ಕೋರ್ಟಿನ 5 ಮಹತ್ವದ ಆದೇಶಗ
ಉಲ್ಲೇಖಿಸಲಾಗಿದೆ. ಇಷ್ಟೊಂದು ಕಡಿಮೆ ಅವಧಿ
ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇಷ್ಟೊ
ತೀರ್ಪುಗಳನ್ನು ಉಲ್ಲೇಖಿಸಿ ಆದೇಶ ನೀಡಿರುವುದ
ನೋಡಿದರೆ ನನಗೆ ಬಹಳ ಅಚ್ಚರಿಯಾಗುತ್ತದೆ.
ಅತ್ಯಂತ ವಿಚಿತ್ರವಾಗಿದೆ. ಸ್ಪೀಕರ್‌ಗೆ ನೀಡಿರುವ ದೂರಿ
ಎಂ.ಪಿ. ರೇಣುಕಾಚಾರ್ಯ ಮತ್ತು ನರಸಿಂಹನಾಯ
ಹೆಸರೂ ಇತ್ತು, ಹಾಗಿದ್ದಾಗ ಅನರ್ಹತೆ ತೀರ್ಪು ನೀಡು
ಅವರನ್ನು ಕೈಬಿಟ್ಟಿದ್ದೇಕೆ?"

-ನ್ಯಾ. ಕುಮ

ಕ್ರೀಡೆಯಲ್ಲಿ ಮಾತ್ರ ಭಾರತ ಪಶ್ಚಿಮವನ್ನು ಅನುಕರಿಸಿಯೇ ಇ

"ಭಾರತದ ಆಟಗಾರರಿಗೆ ಅತ್ಯುತ್ಕೃಷ್ಟವಾದದ
ಸಾಧಿಸಬೇಕೆಂಬ ಛಲವಿಲ್ಲ. ಉದಾಹರಣೆಗೆ 100
ರನ್ನಿಂಗ್ ರೇಸಿನಲ್ಲಿ ಈವರೆಗೆ ಭಾರತದ ಅತ್ಯುತ್ತಮ ಸಾ
10.3 ಸೆಕೆಂಡ್ ಅದನ್ನೂ ಸಾಧಿಸಿದ್ದು 2005ರಲ್ಲಿ, ಅ
ಇದನ್ನು ಕೆನಡಾದ ಪರ್ಸಿ ವಿಲಿಯಮ್ಸ್ 1930
ಸಾಧಿಸಿದ್ದರು. ಲಾಂಗ್ ಜಂಪಿನಲ್ಲಿ ನಮ್ಮ ಅತ್ಯುತ್ತಮ ಸಾ
8.08 ಮೀಟರ್‌ಗಳು. ಆದರೆ ಅಮೆರಿಕದ ಜೆಸ್ಸಿ ಓ
1935ರಲ್ಲೇ 8.13 ಮೀಟರ್ ಹಾರಿದ್ದರು. ಅಂದರೆ ಭಾ
ಕ್ರೀಡಾಲೋಕದಲ್ಲಿ ಏನಿಲ್ಲವೆಂದರೂ 75 ವರ್ಷದ
ಹಿಂದುಳಿದಿದೆ."

- ಸುರೇಶ್ ಮೆನನ್, ಕ್ರೀಡಾ

ಇದಕ್ಕೆ ನಿಮ್ಹಾನ್ಸ್‌ನಲ್ಲಿ ಇಲಾಜಿಲ್ಲ

"ಅಸ್ಪೃಶ್ಯತೆ ಎನ್ನುವುದು ಕೇವಲ ಸಾಮಾಜಿಕ ಸಮಸ್ಯೆ
ಅದು ಮಾನಸಿಕ ಸಮಸ್ಯೆಯೂ ಆಗಿದೆ."

-ಯು.ಆರ್. ಅನಂತಮೂ

ಇವರು ವಿವೇಕಾನಂದರ ಕೊಲೆಗಾರರ

"ಭಾರತ ದೇಶಕ್ಕೆ ಜಾತ್ಯತೀತ ದೇಶ ಎಂಬ ಬ
ಅಗತ್ಯವಿಲ್ಲ, ಭಾರತ ಪಾಕಿಸ್ತಾನದ ವಿಭಜನೆಯ ಸಮಯ
ಇದು ಹಿಂದೂ ದೇಶ ಎಂದು ಘೋಷಣೆಗೊಂ
ಇದು ಹಿಂದೂಗಳ ದೇಶ."

-ಸ್ವಾಮಿ ಹರ್ಷಾನಂದ ಸ್ವಾಮಿ
ರಾಮಕೃಷ್ಣ ಮಠದ ಅ

ನೀವು ಮಾತ್ರ ಹಾವಾಡಿಗರೇ!

"ಭಯೋತ್ಪಾದನೆ ಮತ್ತು ಹಿಂದೂಗಳಿಗೆ ಎಂದಿ
ಸಂಬಂಧವಿಲ್ಲ, ಯಾವ ಕಾರಣಕ್ಕೂ ಈ ಎರಡು ಪ
ನಡುವೆ ಸಂಬಂಧ ಏರ್ಪಡಿಸುವ ಕೆಲಸ ಮಾಡಬ
ಅವೆರಡೂ ಹಾವು-ಮುಂಗುಸಿಗಳ ಹಾಗೆ!"

-ಮೋಹನ್ ಭಾಗ
ಆರೆಸ್ಸೆಸ್‌ನ ಸರಸಂಘ ಚಾ

ಘಟಸರ್ಪ ಯಡ್ಡಿಯಿಂದ ಮುಕ್ತಿ ಎಂದು?



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com


...ರು ವರ್ಷಗಳ ಹಿಂದೆ 'ವಚನಭ್ರಷ್ಟತೆ', 'ಮೋಸ', 'ಭ್ರಷ್ಟಾಚಾರ' ಎಂದೆಲ್ಲ ರಾಜ್ಯಾದ್ಯಂತ ತಿರುಗಾಡಿ ಜನರ ... ಪಡೆದು, ಯಡಿಯೂರಪ್ಪ ...ೇರಿದ್ದರು. ಆದರೆ ಅದೇ ಯಡಿಯೂರಪ್ಪನ ...ವತ್ತು ವಿರೋಧ ಪಕ್ಷಗಳು, ಸ್ವತಃ ಬಿಜೆಪಿ ... ಮತ್ತು ಜನಸಾಮಾನ್ಯರು ಅದೇ ...ಳನ್ನು ಮಾಡುತ್ತಿದ್ದಾರೆ. ಏಕೆಂದರೆ ... ಜನರಿಗೆ ಕೊಟ್ಟ ಭರವಸೆಗಳನ್ನು ...ಾಗಿಲ್ಲ, ಪಕ್ಷಕ್ಕೆ ಕೊಟ್ಟ ಮಾತನ್ನು ...ಳಲಾಗಿಲ್ಲ, ಆಡಳಿತದಲ್ಲಿ ...ಕತೆಯನ್ನು ತೋರಲಾಗಿಲ್ಲ, ಇನ್ನು ...ದಲ್ಲಿ ಈತನ ಸರ್ಕಾರದ ...ಧನೆ ಇಡೀ ರಾಜ್ಯವನ್ನೇ ... ಅತಿ ಭ್ರಷ್ಟ ಸರ್ಕಾರವಾಗಿ ...ರುವುದು!

...ಾರಣಕ್ಕೇ ಮೊನ್ನೆ ಯಡಿಯೂರಪ್ಪ ...ುಂದೆ ವಿರೋಧ ಪಕ್ಷಗಳ ...ಳಿಗೆ ನಾನು ...ಸುವುದಿಲ್ಲ" ಎಂದು ...ದ್ದಾರೆ. ಅದು ಸರಿಯಾದದ್ದೆ. ...ವಿರೋಧ ಪಕ್ಷದವರ ...ಳಿಗಿರಲಿ, ಇವತ್ತು ...ಾನ್ಯರನ್ನು ಕಾಡುತ್ತಿರುವ ಯಾವ ...ಾ ಉತ್ತರಿಸಲು ಯಡಿಯೂರಪ್ಪನ ...ರಗಳೇ ಇಲ್ಲ. ಆದ್ದರಿಂದ ಆತನ ...ನ ಪ್ರತಿಜ್ಞೆ'ಯನ್ನು ನಾವೆಲ್ಲ ... ಸಮ್ಮತಿಯ ಲಕ್ಷಣ' ಎಂದು ...ಹುದು!

...ವುದೇ ಆರೋಪಕ್ಕೂ ...ರಪ್ಪನ ಇತ್ತೀಚಿನ ವರಸೆ "ಆದರೆ ...ವನ್ನು ಮಾಡಿಲ್ಲವಾ?" ಎಂದು ... ಪಕ್ಷಗಳಿಗೆ ಮರುಪ್ರಶ್ನೆ ಹಾಕುವುದೇ ...ದರೆ ವಿಷಯ ಬೇರೆಯವರೂ ಅದನ್ನೇ ...ೋ, ಇಲ್ಲವೋ ಎಂಬುದಲ್ಲ. ಬದಲಾಗಿ ...ತ್ತು ನಿಮ್ಮ ಪಕ್ಷ ಅಂತಹದ್ದನ್ನೆಲ್ಲ ಮಾಡಲ್ಲ ...ಳಿದ್ದರಿಂದಲೇ ನಿಮ್ಮನ್ನು ಜನ ಗೆಲ್ಲಿಸಿದರೇ ... ನೀವೂ ಅವರನ್ನೆಲ್ಲ ಮೀರುವಂತಹ ...ದಲ್ಲಿ ತೊಡಗಲಿ ಎಂದಲ್ಲ.

... ಒಂದು ಕೋಮುವಾದಿ ಪಕ್ಷ ...ೂ, ಅದರ ಸಿದ್ಧಾಂತ ಜನ ವಿರೋಧಿ ಎಂಬುದನ್ನೂ ಸದ್ಯಕ್ಕೆ ಬದಿಗಿಟ್ಟು ಈ ಎರಡು ವರ್ಷಗಳಲ್ಲಿ ಇವರು ಸಾಧಿಸಿದ್ದೇನು ಎಂದು ನೋಡಿದರೂ ಸಿಗುವುದು ಅದೇ ರಿಯಲ್ ಎಸ್ಟೇಟ್ ಲೂಟಿ, ಭೂಕಬಳಿಕೆ, ಖಜಾನೆಯ ದೋಚುವಿಕೆ... ಅದೂ ಇತರೆ ಪಕ್ಷಗಳು ಕಳೆದ 60 ವರ್ಷಗಳಿಂದ ಮಾಡಿದ್ದಕ್ಕಿಂತ ನೂರಾರು ಪಟ್ಟು ಹೆಚ್ಚಾಗಿ ಈ ಎರಡೇ ವರ್ಷಗಳಲ್ಲಿ ಮಾಡಿಮುಗಿಸಿದ್ದು, ಭಾರತದ ಮಟ್ಟಿಗೆ ಇದೊಂದು ದಾಖಲೆಯೇ ಸರಿ!

ಮುಖ್ಯಮಂತ್ರಿಯ ಹುದ್ದೆಯ ಘನತೆಯೂ ಗೊತ್ತಿಲ್ಲದೆ ಮೂರನೆ ದರ್ಜೆಯ ರಾಜಕಾರಣಿಯಂತೆ ವರ್ತಿಸುವ ಯಡಿಯೂರಪ್ಪ ಇತ್ತೀಚೆಗೆ ತನ್ನ



ಸರ್ಕಾರಕ್ಕೆ ಐದು ವರ್ಷಗಳ ಕಾಲ ಆಡಳಿತ ನಡೆಸಲು ಆರು ಕೋಟಿ ಕನ್ನಡಿಗರು ಜನಾದೇಶ ನೀಡಿದ್ದಾರೆಂದೂ, ತನ್ನ ಪಕ್ಷದ ಭಿನ್ನಮತೀಯರನ್ನು ಬಳಸಿಕೊಂಡು ವಿರೋಧ ಪಕ್ಷಗಳು ಆ ಜನಾದೇಶವನ್ನೇ ನಾಶ ಮಾಡಲು ಹೊರಟಿದ್ದಾರೆಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಆದರೆ ವಾಸ್ತವವಾಗಿ ಆರು ಕೋಟಿ ಕನ್ನಡಿಗರ ಬೆಂಬಲವಿರಲಿ, ಈ ಹಿಂದೆ ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್, ದೇವೇಗೌಡ ಮತ್ತು ಎಸ್.ಎಂ. ಕೃಷ್ಣರ ನೇತೃತ್ವದಲ್ಲಿ ಅವರ ಪಕ್ಷಗಳಿಗೆ ಸಿಕ್ಕಷ್ಟು ಸ್ಪಷ್ಟ ಬಹುಮತವೇ ಯಡಿಯೂರಪ್ಪನಿಗೆ ಮತ್ತು ಆತನ ಬಿಜೆಪಿಗೆ ಸಿಕ್ಕೇ ಇರಲಿಲ್ಲ. ಆದರೂ "ಒಂದು ಸುಳ್ಳನ್ನು ನೂರು ಬಾರಿ ಹೇಳುವ ಮೂಲಕ ಅದನ್ನೇ ಸತ್ಯವಾಗಿಸು" ಎಂಬ ಗೊಬೆಲ್ಸ್ ಸಿದ್ಧಾಂತದಂತೆ ಯಡ್ಡಿ, ಚಡ್ಡಿ ಮತ್ತು ರೆಡ್ಡಿ ಪಟಾಲಂ ಇಂತಹದ್ದೊಂದು ಸುಳ್ಳನ್ನು ಹೇಳುತ್ತಲೇ ಬಂದಿದೆ.

ಇವತ್ತು ಜನಾದೇಶದ ರಕ್ಷಕರಂತೆ ಪೋಸು ಕೊಡುತ್ತಿರುವ ಬಿಜೆಪಿಗಳು 'ಆಪರೇಷನ್ ಕಮಲ'ದ ಮೂಲಕ ಅದೇ ಜನಾದೇಶವನ್ನೇ ಭ್ರಷ್ಟಗೊಳಿಸಿದ್ದರಲ್ಲಾ? ಅದನ್ನೇ ಇವತ್ತಿಗೂ ಮುಂದುವರೆಸುತ್ತಿದ್ದಾರಲ್ಲಾ? ಇತ್ತೀಚೆಗೆ ಚನ್ನಪಟ್ಟಣದ ಜೆಡಿಎಸ್ ಶಾಸಕ ಅಶ್ವಥ್ ಮತ್ತು ಜಗಳೂರಿನ ಕಾಂಗ್ರೆಸ್ ಶಾಸಕ ರಾಮಚಂದ್ರ ಎಂಬ ಎರಡು ಕತ್ತೆಗಳನ್ನೂ ಖರೀದಿಸಿದ್ದಾರಲ್ಲ, ಅವರಿಬ್ಬರ ಬೆಂಬಲವನ್ನೇ ಆಶ್ರಯಿಸಿ ಅಧಿಕಾರವನ್ನು ತಮ್ಮ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಲು ಹವಣಿಸುತ್ತಿದ್ದಾರಲ್ಲಾ... ಅದೆಲ್ಲ ಚನ್ನಪಟ್ಟಣ ಮತ್ತು ಜಗಳೂರಿನ ಮತದಾರರು ನೀಡಿದ್ದ ಜನಾದೇಶದ ನಾಶವಲ್ಲವೇ?

ಅದೆಲ್ಲ ಬಿಡಿ, ಇವತ್ತು ಅಧಿಕಾರಕ್ಕಾಗಿ ಮತ್ತು ಆ ಮೂಲಕ ರಾಜ್ಯದ ಲೂಟಿಗಾಗಿ ಬಿಜೆಪಿ ಮತ್ತು ಯಡ್ಡಿಯ ಪರವಾಗಿ ನಿಂತಿರುವವರೆಲ್ಲ ಎಂತೆಂಥವರು ನೋಡಿ:

ಒಂದು ವರ್ಷದ ಹಿಂದೆ ಯಡ್ಡಿಯನ್ನು 'ಕಂಸ' ಎಂದೂ, ಆತನ ವಧೆ ಮಾಡದೇ ಸುಮ್ಮನಿರುವುದಿಲ್ಲ ಎಂದೂ ಶಪಥಗೈದಿದ್ದ ಜನಾರ್ದನ ರೆಡ್ಡಿ ಇವತ್ತು ಯಡ್ಡಿಯ ಒಂದು ಪಕ್ಕದಲ್ಲಿ ಕೂತಿದ್ದಾನೆ!

ಯಾವ ರೇಣುಕಾಚಾರ್ಯ ಎಂಬ ಸ್ತ್ರೀಲೋಲ ಯಡ್ಡಿ ಮತ್ತು ಶೋಭಾ ಕರಂದ್ಲಾಜೆ ವಿರುದ್ಧ ಟಿವಿ ವಾಹಿನಿಗಳಲ್ಲಿ ಅಸಹ್ಯವಾಗಿ ಮಾತನಾಡಿದ್ದನೋ ಅದೇ ರೇಣುಕಾಚಾರಿಗೆ ಇವತ್ತು 'ಅನರ್ಹತೆ'ಯಿಂದ ವಿಶೇಷ ರಿಯಾಯಿತಿ!

ಭೂಕಬಳಿಕೆ ಮಾಡಿ ಲೋಕಾಯುಕ್ತರಿಗೆ ಸಿಕ್ಕಿಬಿದ್ದ ಕಟ್ಟಾಸುಬ್ರಹ್ಮಣ್ಯ ನಾಯ್ಡು ಇವತ್ತು ಯಡ್ಡಿಯ ಬಲಗೈ ಬಂಟ!

ಇನ್ನು ಮೆಡಿಕಲ್ ಕಾಲೇಜುಗಳಲ್ಲಿ ಅಕ್ರಮ ನೇಮಕಾತಿ ಮಾಡಿ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡ ರಾಮಚಂದ್ರಗೌಡನಂತೂ ಸದಾ ಯಡಿಯೂರಪ್ಪನ ನೆರಳು!

ಹಾಗೆಯೇ ಯಡ್ಡಿಯ ಸುತ್ತ ಗ್ರಹಗಳಂತೆ ತಿರುಗಾಡುತ್ತಿರುವವರು ರೇಪಿಸ್ಟ್ ಹಾಲಪ್ಪ, ಭೂಗಳ್ಳ ಅಶೋಕ್, ರೌಡಿ ಶ್ರೀರಾಮುಲು, ಗೂಂಡಾ ಬಚ್ಚೇಗೌಡ, ಜಾತಿವಾದಿ ಉದಾಸಿ ಮತ್ತು ಕುತಂತ್ರಿ ವಿ. ಸೋಮಣ್ಣ. ಯಡ್ಡಿಯ ಪರ ವಕಾಲತ್ತು ವಹಿಸಿ ಅರಚಾಡುತ್ತಿರುವವ ಸೀಮೆಎಣ್ಣೆ ಖ್ಯಾತಿಯ, "ನಾನು ಪ್ರಾಮಾಣಿಕವಾಗಿ ಉಳಿದಿಲ್ಲ" ಎಂದು ಮುಲಾಜಿಲ್ಲದೆ ಒಪ್ಪಿಕೊಂಡಿರುವ ಮತ್ತೋರ್ವ ಭೂಗಳ್ಳ ಸಿ.ಟಿ. ರವಿ! ಇವರೆಲ್ಲ ಯಡ್ಡಿ ಪಾಲಿಗೆ ಅಪ್ಪಟ ಚಿನ್ನ!

ಪ್ರತಿ ಬಾರಿ ಯಡಿಯೂರಪ್ಪನ ವಿರುದ್ಧ ಬಂಡಾಯ ಎದ್ದಾಗಲೆಲ್ಲ ಆತ "ನನ್ನ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಸಹಿಸಲಾಗದೆ ಇದೆಲ್ಲ ನಡೆಯುತ್ತಿದೆ" ಎಂದು ಕಣ್ಣೀರಿಟ್ಟದ್ದನ್ನು ನೋಡಿದ್ದೇವೆ. ಆದರೆ ಆತ ಹೇಳುವಂತೆ ಆತನ ಅಧಿಕಾರಾವಧಿಯಲ್ಲಿ ರಾಜ್ಯ ಖಂಡಿತಾ ಅಭಿವೃದ್ಧಿ ಹೊಂದಿಲ್ಲ. ಬದಲಾಗಿ ಯಡ್ಡಿ ಮತ್ತು ಆತನ ಕುಟುಂಬದ ಸದಸ್ಯರು ಮಾತ್ರ ಅಪಾರ ಅಭಿವೃದ್ಧಿ ಕಂಡಿದ್ದಾರೆ. ಎಷ್ಟರಮಟ್ಟಿಗೆ ಅಂದರೆ ಹಲವು ಬಿಜೆಪಿಯವರೇ ಹೇಳುವ ಪ್ರಕಾರ ಕಳೆದ ಎರಡು ವರ್ಷಗಳಲ್ಲಿ ಯಡ್ಡಿ ಕುಟುಂಬದವರು ಅಕ್ರಮವಾಗಿ ದೋಚಿರುವ ಹಣದ ಮೊತ್ತವೇ ಸುಮಾರು **10,000** ಕೋಟಿ ರೂಪಾಯಿಗಳು! ಇಷ್ಟೊಂದು ಹಣವನ್ನು ಕಬಳಿಸಿರುವ ಯಡ್ಡಿಗೆ ಇನ್ನೂ ಹೊಟ್ಟೆ ತುಂಬಿಲ್ಲ. ಅದಕ್ಕೆ ಏನೇ ಆದರೂ ಅಧಿಕಾರ ಕಳೆದುಕೊಳ್ಳಕೂಡದೆಂದು ವರ್ತೂರು ಪ್ರಕಾಶನ ಕಾಲಿಗೂ ಬೀಳುತ್ತಾರೆ, ಜನಾರ್ದನ ರೆಡ್ಡಿಯ ಎಂಜಲನ್ನೂ ನೆಕ್ಕುತ್ತಾರೆ.

ಯಡ್ಡಿಯ ಇಂತಹ ಖದೀಮಗುಣ, ಆಕ್ರಮಣಕಾರಿ ವೃತ್ತಾಂತ ಪ್ರಾರಂಭವಾಗಿದ್ದು ಆತ ಮುಖ್ಯಮಂತ್ರಿ ಆದ ನಂತರವಲ್ಲ. ಅಥವಾ ರಾಜಕೀಯ ಕಾಲಿಟ್ಟಾಗಿನಿಂದಲೂ ಅಲ್ಲ. ಅದೆಲ್ಲ ಶುರುವಾಗಿದ್ದು ಆತ ಬೂಕನಕೆರೆ ಬಿಟ್ಟು ಶಿಕಾರಿಪುರವನ್ನು ಸೇರಿದಾಗ. ಬಿಲಹೊಕ್ಕ ಹಾವಿನ ರೀತಿ ತನ್ನ ಮಾವನ ಮನೆಯನ್ನೇ ನಾಶ ಮಾಡಿದ, ಕೈಹಿಡಿದ ಹೆಂಡತಿಗೆ ನೀರಿನ ಸಂಪ್‌ನ ದಾರಿ ತೋರಿಸಿದ, ಮಕ್ಕಳಿಗೆ ರಾಜಕೀಯ ಅಧಿಕಾರ ಮತ್ತು ಖಜಾನೆಯ ಹಣ ದಯಪಾಲಿಸಿದ ಯಡಿಯೂರಪ್ಪ ಈಗ ಘಟಸರ್ಪದಂತೆ ರಾಜ್ಯವನ್ನೇ ನುಂಗುತ್ತಿದ್ದಾನೆ.

ಯಡ್ಡಿ ಎಂಬ ಸರ್ಪದ ನುಂಗಾಟಕ್ಕೆ ಅಂತ್ಯ ಹಾಡುವವರ್‍ಯಾರು? ●




ನಕ್ಸಲ್ ಶರಣಾಗತಿ ಸರ್ಕಾರಕ್ಕೂ ವಂಚಿಸಿದ ಪೋಲೀಸರು!

ನಕ್ಸಲ್ ವಿರೋಧಿ ಪಡೆ ಹಾಗೂ ಮಲೆನಾಡಿನ ಕೆಲ ಪೋಲೀಸರಿಗೆ 'ನಕ್ಸಲ್' ಎಂಬುದೇ ಒಂದು ಹಾಲು ಕರೆಯುವ ಹಸುವಿನಂತಾಗಿ ಹೋಗಿದೆ. ಕೂಂಬಿಂಗ್ ಆಪರೇಶನ್ ಹೆಸರಿನಲ್ಲಿ ಪೆಟ್ರೋಲ್-ಡೀಸೆಲ್‌ಗಳ ಕಳ್ಳ ಲೆಕ್ಕ ತೋರಿಸುವುದು, ಇನ್‌ಫಾರ್ಮರ್‌ಗಳನ್ನು ನೇಮಿಸಿಕೊಂಡಿದ್ದೇವೆಂದು ಹೇಳಿ ಅವರಿಗೆ ಪಾವತಿಸುವ ನೆಪದಲ್ಲಿ ಲಕ್ಷಾಂತರ ರೂಪಾಯಿ ಹಣ ಡ್ರಾ ಮಾಡುವುದೆಲ್ಲಾ ಅಲ್ಲಿ ನಡೆಯುತ್ತಿದೆ.

• ಪಾರ್ವತೀಶ
bparvateesha@gmail.com

ಭಾರತ ದೇಶದ ನಂ.1 ಭ್ರಷ್ಟ ಅನಿಸಿಕೊಂಡವನೇ ಮುಖ್ಯಮಂತ್ರಿಯಾದರೆ, ಭೂಗಳ್ಳನೇ ಗೃಹಮಂತ್ರಿಯಾದರೆ ಅಂತಹ ರಾಜ್ಯದ ಪೋಲೀಸರನ್ನು ಹದ್ದುಬಸ್ತಿನಲ್ಲಿಡುವುದು ಕಷ್ಟ. ಕರ್ನಾಟಕದಲ್ಲಿ ನಕ್ಸಲ್ ಹೋರಾಟದ ಪ್ರಭಾವವಿರುವ ಜಿಲ್ಲೆಗಳಲ್ಲಂತೂ ಈಗ ಪೋಲೀಸರಿಗೆ ನಿತ್ಯ ದೀಪಾವಳಿ.



ನಕ್ಸಲ್ ಶರಣಾಗತಿ ಎಂಬ ಸುದ್ದಿಯ ಬೆನ್ನುಹತ್ತಿ ಜಾಲಾಡಿದರೆ ಸಾಕು, ಇಲ್ಲಿ ಕಳ್ಳರಿಗೂ, ಸುಳ್ಳರಿಗೂ ಪೋಲೀಸರಿಗೂ ಚೂರೂ ವ್ಯತ್ಯಾಸವೇ ಇಲ್ಲ ಅನ್ನಿಸಿಬಿಡುತ್ತದೆ. ಶರಣಾಗತಿಯ ಹೆಸರಲ್ಲಿ ಲಕ್ಷಾಂತರ ರೂಪಾಯಿ ಕೈಬದಲಾಗುತ್ತಿದೆ. ಪೋಲೀಸರೇ ಇದರ ಪ್ರಮುಖ ಫಲಾನುಭವಿಗಳು. ಒಂದೇ ಮಾತಿನಲ್ಲಿ ನೇರವಾಗಿ ಹೇಳಬೇಕೆಂದರೆ ಚಿಕ್ಕಮಗಳೂರಿನ ಪೋಲೀಸರು ಕರ್ನಾಟಕದ ಜನರಿಗೆ, ಮೀಡಿಯಾಗಳಿಗೆ, ಕೊನೆಗೆ ಸರ್ಕಾರಕ್ಕೂ, ಸುಳ್ಳು ಹೇಳಿದ್ದಾರೆ. ಇದಕ್ಕೇನು ಕಾರಣ?

ನಡೆದಿರಬಹುದಾದ ದೀಲ್‌ಗಳೇನೆಂಬುದನ್ನು ಮುಂದೆ ನೋಡೋಣ. ಆದರೆ ಸಜ್ಜನ ಅಧಿಕಾರಿ ಎನಿಸಿಕೊಂಡಿದ್ದ ಜಿಲ್ಲಾಧಿಕಾರಿ ಚೆನ್ನಪ್ಪ ಗೌಡರಿಂದಲೂ ಜಿಲ್ಲಾ ಪೋಲೀಸರು 'ಅಶ್ವತ್ಥಾಮೋ ಹತಃ.... ಕುಂಜರಃ' ದ ರೀತಿಯಲ್ಲಿ ಹಸೀ ಸುಳ್ಳು ಹೇಳಿಸಿಬಿಟ್ಟಿದ್ದಾರೆ. ಇಷ್ಟಲ್ಲದೇ ಜನರಿಗೆಲ್ಲಾ ಅನುಮಾನ ಬರುವಂತಹ ನಾಗೇಶ ಅಂಗೀರಸನೆಂಬ ವಕ್ರನೊಬ್ಬ ಸಡನ್ನಾಗಿ 'ಶಾಂತಿದೂತ'ನ ಗೆಟಪಿನಲ್ಲಿ ಕಾಣಿಸಿಕೊಂಡಿದ್ದಾನೆ.

ಇವೆಲ್ಲಾ ಒಟ್ಟು ಸೇರಿಯೇ ಮೊನ್ನೆಯ 'ನಕ್ಸಲ್ ಶರಣಾಗತಿ' ಎನ್ನುವ ಪ್ರಕರಣ ನಡೆದಿರುವುದು.

ಅಂದಹಾಗೆ ಈಗ ಶರಣಾಗಿರುವ ಹಾಗಲಗಂಜಿ ವೆಂಕಟೇಶ, ವರಲೆ ಸರೋಜ, ಜಯಾ, ಮಲ್ಲಿಕಾ ನೇರವಾಗಿ ನಕ್ಸಲ್ ಚಳವಳಿಯೊಳಗೆ ಇದ್ದವರಲ್ಲ, ಕೈಗೆ ಬಂದೂಕು ತೆಗೆದುಕೊಂಡಿದ್ದವರೂ ಅಲ್ಲ. ಈಗ್ಗೆ ನಾಲ್ಕಾರು ವರ್ಷಗಳ ಹಿಂದೆ ಕೆಲ ಸಮೂಹ ಸಂಘಟನೆಗಳಲ್ಲಿ ಆ್ಯಕ್ಟೀವ್ ಆಗಿ ಓಡಾಡಿಕೊಂಡಿದ್ದವರು. ಮಲೆನಾಡಿನ ಇವತ್ತಿನ ಪರಿಸ್ಥಿತಿಗೆ ತಕ್ಕಹಾಗೆ ಇವರೆಲ್ಲಾ ಕೊಂಚ ಮಿಲಿಟೆಂಟ್ ಆದ ರಾಜಕೀಯ ನಿಲುವುಗಳನ್ನು ಬೆಳೆಸಿಕೊಂಡಿದ್ದರು. ಇದೇ ಕಾರಣದಿಂದಲೇ ಪೋಲೀಸರಿಗೆ ಅನುಮಾನ ಬಂದು ಬೇರೆ ಬೇರೆ ಸಂದರ್ಭ, ಕಾಲದಲ್ಲಿ ಅನೇಕ ಕಾರಣ ತೋರಿಸಿ ಇವರನ್ನೆಲ್ಲಾ ಅರೆಸ್ಟ್ ಮಾಡಿ ತಲಾ ಮೂರು, ನಾಲ್ಕು ಕೇಸು ಹಾಕಿದ್ದರು. ಇವರಲ್ಲಿ ಕೆಲವರು ಕೆಲ ವರ್ಷ ವಿಚಾರಣಾಧೀನ ಕೈದಿಗಳಾಗಿ ಜೈಲಿನಲ್ಲೂ ಇದ್ದು ಬಂದಿದ್ದರು. ಕಳೆದ ಒಂದೆರಡು ವರ್ಷಗಳಿಂದ ವೆಂಕಟೇಶ್, ಸರೋಜ, ಜಯ ಮುಂತಾದವರು ತಮ್ಮ ತಮ್ಮ ಮನೆಗಳಿಗೆ ವಾಪಸಾಗಿ ಮಾಮೂಲಿ ಜೀವನ ನಡೆಸುತ್ತಿದ್ದರು. ದಿನಬೆಳಗಾದರೆ ಎಲ್ಲರಿಗೂ ಕಾಣುತ್ತಿದ್ದವರು. ಪಬ್ಲಿಕ್ ಲೈಫಿನಲ್ಲೇ ಇದ್ದವರು. ಅಂತಾದ್ದರಲ್ಲಿ ಈಗ ದಿಢೀರನೇ ಕಾಡಿನೊಳಗಿನಿಂದ ಬಂದೂಕು ಬಿಸುಟು ಬಂದರೇನೋ ಎಂಬಂತೆ ಪೋಲೀಸರು ಬಿಂಬಿಸುತ್ತಾ ಅರ್ಜೆಂಟಾಗಿ ಪುನರ್ವಸತಿ ಪ್ಯಾಕೇಜಿನಡಿ ಹಣ ಹಂಚುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗಲೇಬೇಕು... ಅನುಮಾನವೂ ಸಹ!

ಶರಣಾದವರು ಯಾರು?

ನಿಷ್ಠುರವಾಗಿ ಹೇಳಬೇಕೆಂದರೆ ಕರ್ನಾಟಕದಲ್ಲಿ ಮಾವೋವಾದಿಗಳು ಆರಂಭಿಸಿದ್ದ ಸಶಸ್ತ್ರ ಬಂಡಾಯಕ್ಕೆ ಈಗ ಮೊದಲಿನ ಬಿರುಸಿಲ್ಲ, ಇದಕ್ಕೆ ಅನೇಕ ಕಾರಣಗಳಿವೆ. ನಕ್ಸಲ್ ನಾಯಕರ ದುಡುಕುತನಗಳು. ಪೋಲೀಸರಿಂದ ನಡೆದ ಕಾನೂನು ಬಾಹಿರ ಕೊಲೆಗಳು, ಮಲೆನಾಡಿನ ಜನರ ಹೆದರಿಕೆಗಳು ಹಾಗೂ ಕೊಂಚ ಮಾತನಾಡುವ ಧೈರ್ಯ ಪಡೆದಿದ್ದವರಿಗೆ ಪೋಲೀಸರು ನಿರಂತರ ಕಿರುಕುಳ ಕೊಟ್ಟು ಸತಾಯಿಸಿದ್ದೆಲ್ಲಾ ಸೇರಿ ಈಗ ನಕ್ಸಲ್ ಚಳವಳಿ ದುರ್ಬಲಗೊಂಡಿದ್ದೆ.

ಅದು ಒಂದೆಡೆಯಿರಲಿ

ಈಗ ಶರಣಾದರೆಂದು ಪ್ರಚಾರವಾಗಿರುವವರ ಬಗ್ಗೆ ಹೇಳಬೇಕೆಂದರೆ ಮೊದಲಿಗೆ ಹಾಗಲಗಂಜಿ ವೆಂಕಟೇಶ್ ಎಂದೂ ಕಟ್ಟರ್ ನಕ್ಸಲೀಯನಾಗಿರಲಿಲ್ಲ, ಮಲೆನಾಡಿನ ದಟ್ಟಡವಿಯ ಸ[...] ಸಾಧಾರಣ ರೈತ ಕುಟುಂಬ ಅವರದ್ದು. ತಮ್ಮ ಸು[...] ಜನಜೀವನವನ್ನು ಗಮನಿಸುತ್ತಾ ಅನ್ಯಾಯ ದೌರ್ಜನ್ಯ[...] ಪ್ರಶ್ನಿಸುವ, ಪ್ರತಿಭಟಿಸುವ ದಿಟ್ಟತನ ತೋರುತ್ತಿದ್ದ[...] ಇವರಿರುವ ಪ್ರದೇಶದಲ್ಲಿ ನಕ್ಸಲ್ ದಳಗಳ ಓ[...] ಇತ್ತಾದರೂ ಇವರಿಗೆ ನೇರ ಸಂಬಂಧವಿರಲಿಲ್ಲ, ಆ[...] ಪೋಲೀಸರಿಗೆ ಅನುಮಾನ ಬಂತು. ಕಿರುಕುಳ, ಬ[...] ಶುರುವಾಯಿತು. ಕೊನೆಗೆ ವೆಂಕಟೇಶನನ್ನು ಎಳೆದೊ[...] ಪೋಲೀಸರು ಒಟ್ಟು ಮೂರು ಸುಳ್ಳು ಕೇಸ್ ಹಾಕಿ[...] ನಂತರ ಎರಡು ಕೇಸಿನಲ್ಲಿ ವೆಂಕಟೇಶ್ ನಿರ್ದೋಷಿ [...] ಕೋರ್ಟ್ ಹೇಳಿತು. ಇನ್ನೊಂದು ಕೇಸ್ ಕಿಗ್ಗ ಬಳಿ ಜೀ[...] ಸಾಗಿಸಿದನೆಂತಲೋ ಜಿಲೆಟಿನ್ ಸಂಗ್ರಹಿಸಿಟ್ಟಿದ್ದನೆಂತ[...] ಆರೋಪಿಸಿ Unlawful Activits Act ನಡಿ[...] ಹಾಕಿರುವ ಮೂರನೇ ಕೇಸ್ ಈಗಲೂ ವೆಂಕ[...] ಮೇಲಿದೆ. ಇದೂ ಸಹ ಸುಳ್ಳು ಕೇಸ್. ಅದು ಪೋಲೀಸ[...] ಗೊತ್ತು. ಈ ನಡುವೆ ವೆಂಕಟೇಶ್ ಊರಿನಲ್ಲಿ ಮಾವ[...] ಜೀವನ ನಡೆಸುತ್ತಿದ್ದ, ಸಣ್ಣಪುಟ್ಟ ತೋಟಗಳ ಗುತ್ತಿಗೆ[...]



ವೆಂಕಟೇಶ್ ಶರಣಾಗತಿ.

ಮಾಡಿಕೊಂಡಿದ್ದ, ಹಾಗಿದ್ದವನೇ ಈಗ ಎದ್ದು [...] ಚಿಕ್ಕಮಗಳೂರಿನ ಡಿಸಿ ಎದುರು ಶರಣಾಗಿ ದ್ದಾನೆ. [...] ಮುಂದುವರೆದ ಭಾಗವಾಗಿ ಒಂದು ಲಕ್ಷ ರೂ[...] ಕೊಡಲಾಗಿದೆ ಎಂದು ಪೋಲೀಸರು ಹೇಳಿ ಕೊಂ[...]

ಇನ್ನು ವರಲೆ ಸರೋಜ, ಯಡಗುಂದ ಜಯ [...] ದೂಬಳ ಗ್ರಾಮದ ಮಲ್ಲಿಕಾ ಕುಡಾ ಮೊನ್ನೆ ಅಕ್ಟೋ[...] 18ರಂದು ಶರಣಾದರೆಂದು ಪ್ರಕಟಿಸಲಾಗಿದೆ. ಇ[...] ಬಹುತೇಕ ನಕ್ಸಲ್ ಹೋರಾಟದ ಆಜುಬಾ[...] ಇದ್ದವರಾದರೂ ಈಗಂತೂ ನಕ್ಸಲರಾಗಿರಲಿಲ್ಲ, ಪೋ[...] ಸಿಕ್ಕಿ ನಾಲ್ಕಾರು ಕೇಸ್‌ಗಳು ಬಿದ್ದು ಮೂರ್ನಾಲ್ಕು [...] ಜೈಲು ಅನುಭವಿಸಿ ಬಂದಿರುವವರು. ಕೋರ್ಟ್‌ನ[...] ಇವರ ವಿರುದ್ಧ ಯಾವ ಆರೋಪಗಳೂ- ನಕ್ಸ[...] ಆರೋಪವೂ ಸೇರಿದಂತೆ ಸಾಬೀತಾಗಿರಲಿಲ್ಲ, [...] ಹೀಗಿರುವಾಗ ಇದು ಹೇಗೆ ನಕ್ಸಲರ ಶರಣಾಗತಿಯಾ[...]

ಈ ಪ್ರಶ್ನೆಗೆ ಉತ್ತರ ಸಿಗುವುದು ಪೋಲೀಸರ ಲೊ[...]

ಗ್ರೀನ್ ಪ್ಯಾಕೇಜ್ ಮತ್ತು ಅಂಗೀರ[...]

ನಕ್ಸಲ್ ಪ್ರಭಾವವಿರುವ ದೇಶದ ಎಂಟು [...] ಪಟ್ಟಿಯಲ್ಲಿ ಈಗ ಕರ್ನಾಟಕದ ಹೆಸರಿಲ್ಲ, ಆದರು[...]

ಈಗ ಇವರೆಷ್ಟು ಮಂದಿ ಇದ್ದಾರೆಂಬುದು ಅಷ್ಟು ಮುಖ್ಯವಲ್ಲ, ಆದರೆ ಏನು ಮಾಡುತ್ತಿದ್ದಾರೆಂಬ ಪ್ರಶ್ನೆ ಬಂದೇಬರುತ್ತದೆ.

ಕೇಂದ್ರ ಸರ್ಕಾರ ಆಪರೇಷನ್ ಗ್ರೀನ್‌ಹಂಟ್ ಕಾರ್ಯಾಚರಣೆ ಶುರು ಮಾಡುವಷ್ಟರಲ್ಲೇ ಕರ್ನಾಟಕದ ಮಾವೋವಾದಿಗಳ ಬಂಡಾಯದ ಶಕ್ತಿ ಸಾಮರ್ಥ್ಯವನ್ನು ಪೊಲೀಸರು ಹಾಗೂ ಕೋಮುವಾದಿಗಳ ಜಂಟಿ ಪಡೆ ಮುರಿದುಹಾಕಿದ್ದವು.

ಒಂದರ ಹಿಂದೆ ಒಂದರಂತೆ ಸಂಭವಿಸಿದ ಸಾವುಗಳು, ಒಬ್ಬರ ಹಿಂದೆ ಮತ್ತೊಬ್ಬರಂತೆ ಪೊಲೀಸರಿಗೆ ಸಿಕ್ಕಿಬಿದ್ದದ್ದು ಒಂದರನಂತರ ಒಂದರಂತೆ ಸಮೂಹ ಸಂಘಟನೆಗಳು ನಿಷ್ಕ್ರಿಯಗೊಂಡಿದ್ದೆಲ್ಲಾ ಸೇರಿ ಅದರ ಒಟ್ಟಾರೆ ಪರಿಣಾಮವೆಂಬಂತೆ ಕರ್ನಾಟಕದ ನಕ್ಸಲರ ಸಶಸ್ತ್ರ ಬಂಡಾಯ ಈ ತಕ್ಷಣದಲ್ಲಿ ತನ್ನ ಗರ್ಜನೆ ನಿಲ್ಲಿಸಿದೆ.

ಈ ಮೇಲೆ ಹೇಳಲಾದ ಸಾಲುಸಾಲು ಘಟನೆಗಳಿಗೆ ಸ್ವತಃ ಹೋರಾಟಗಾರರ ಸ್ವಯಂಕೃತ ತಪ್ಪು ನಡೆಗಳು ಎಷ್ಟು ಕಾರಣವಾಗಿದೆ ಎಂಬ ಬಗ್ಗೆ ಕ್ಷಣ ನಿಂತು ಯೋಚಿಸುವಷ್ಟು ಸಹನೆ ಯಾರಲ್ಲೂ ಕಂಡುಬರುತ್ತಿಲ್ಲ.

ಈವರೆಗೆ ಅರೆಸ್ಟು ಆದವರನ್ನೆಲ್ಲಾ ಪೊಲೀಸರು ಹೇಗೆ, ಯಾವಾಗ, ಯಾವ ರೀತಿ ಹಿಡಿದರೆಂಬ ವಿವರಗಳನ್ನು ಗಮನಿಸಿದರೆ ಸಾಕು ಆಶ್ಚರ್ಯವಾಗುವಂತಿದೆ. ಅಂದರೆ ಚಂದ್ರಶೇಖರ ಗೊರಬಾಳ, ದೇವಣ್ಣ, ನಂದಕುಮಾರ

ಕಾಡಿನಲ್ಲಿರುವವರ ಕುರಿತು...

ಮುಂತಾದವರ ಚಲನವಲನಗಳ ಬಗ್ಗೆ ಪೊಲೀಸರಿಗೆ ಖಚಿತ ಮಾಹಿತಿ ಇತ್ತೆನ್ನಲಾಗಿದೆ. ಆದರೂ ಇವರನ್ನು ಮೊದಲೇ ಅರೆಸ್ಟು ಮಾಡದೆ ಬೇರೇ ಯಾರಾದರೂ ದೊಡ್ಡ ನಾಯಕರು ಸಿಗಬಹುದಾ ಎಂದು ಕಾಯುತ್ತಿದ್ದರು ಪೊಲೀಸರು. ಬಹುತೇಕ ಸಂದೇ ರಾಜಮೌಳಿ ತರಹದ ಕೇಂದ್ರಸಮಿತಿ ಸದಸ್ಯರುಗಳು ಬೆಂಗಳೂರಿನಲ್ಲೇ ಸಿಕ್ಕಿಬಿದ್ದಿದ್ದರ ಹಿಂದೆ ಕರ್ನಾಟಕದ ಕೇಡರ್‌ಗಳು ಟೆಕ್ (ಮುಂಜಾಗರೂಕತೆ) ವಿಷಯಗಳಲ್ಲಿ ತೋರಿಸಬೇಕಾದಷ್ಟು ಎಚ್ಚರ ತೋರದಿದ್ದುದೇ ಕಾರಣವೆಂದು ಕೂಡಾ ತರ್ಕಿಸಲಾಗುತ್ತಿದೆ. ರಾಜಮೌಳಿಯವರನ್ನು ಬೆಂಗಳೂರಿನಲ್ಲಿ ಬಂಧಿಸಿ ಆಂಧ್ರದ ಧರ್ಮಾವರಂ ರೈಲುನಿಲ್ದಾಣದ ಬಳಿ ಪೊಲೀಸರು ಗುಂಡಿಟ್ಟು ಕೊಂದಿದ್ದರು.

ಬಹುತೇಕ ನಕ್ಸಲರ ಮುಖ್ಯ ಸಮಸ್ಯೆ ಏನೆಂದರೆ ಕರ್ನಾಟಕದ ಇಲ್ಲಿನ, ಇಂದಿನ ಸ್ಥಿತಿಗತಿ ಹೇಗಿದೆ, ಎಂತಿದೆ ಎಂಬುದನ್ನು ನಿರ್ಲಕ್ಷಿಸಿ ಇಡೀ ವಿಶ್ವದ ಹಾಗೂ ಭಾರತದ ನಕ್ಸಲರ ಗೆರಿಲ್ಲಾ ಜೋನುಗಳಲ್ಲಿ ಏನಾಗುತ್ತಿದೆ ಎಂಬುದರ ಆಧಾರದ ಮೇಲೆ ಇಲ್ಲಿನ ತಮ್ಮ ಹೋರಾಟದ ದಿಕ್ಕುದಿಸೆ ನಿರ್ಧರಿಸಿಕೊಳ್ಳುತ್ತಿರುವುದು.

ಒಂದು ಸ್ಪಷ್ಟಗೋಚರ ಸಂಗತಿ ಏನೆಂದರೆ ನಾಳೆ ಛತ್ತೀಸ್‌ಗಢದಲ್ಲಿ ನಕ್ಸಲರು ಹಾಗೂ ಪೊಲೀಸರ ನಡುವೆ ಭೀಕರ ಕದನವೇ ಸ್ಫೋಟಗೊಂಡರೂ ಸಹ ಕರ್ನಾಟಕದ ಸಾಮಾನ್ಯ ಜನತೆ ಹೆಚ್ಚೆಂದರೆ ವಿಷಾದ ವ್ಯಕ್ತಪಡಿಸಬಹುದೇ ವಿನಃ ಅದೊಂದೇ ಕಾರಣಕ್ಕೆ ಸರ್ಕಾರದ ವಿರುದ್ಧ ಕದನಕ್ಕೆ ಇಳಿಯಲಾರರು. ಮಾನವ ಹಕ್ಕು ಹರಣ, ಸರ್ಕಾರಿ ದಮನವನ್ನು ವಿರೋಧಿಸಿ ಒಂದಷ್ಟು ಚರ್ಚೆ, ಗಾಂಧೀ ಪ್ರತಿಮೆ ಎದುರು ಧರಣಿ, ಸಹಿ ಸಂಗ್ರಹ ಇತ್ಯಾದಿಗಳು ನಡೆಯಬಹುದು. ನಡೆಯಬೇಕು. ಆದರೆ ಛತ್ತೀಸ್‌ಗಢದ ಆದಿವಾಸಿಗಳ ಮೇಲೆ ಬಿದ್ದ ಪೆಟ್ಟು ಕರ್ನಾಟಕದ ಜನರಲ್ಲಿ ಬೀದಿಗಿಳಿಯುವಂತಹ ಆಕ್ರೋಶ ಹುಟ್ಟಿಸುವಷ್ಟು ಇಲ್ಲಿನ ನಕ್ಸಲರು ಮತ್ತವರ ರಾಜಕೀಯ ಜನಮಾನಸದಲ್ಲಿ ಬೇರುಬಿಟ್ಟಿಲ್ಲ.

ಅಂದರೆ ಇಲ್ಲಿನ ಪರಿಸ್ಥಿತಿ ಹಾಗೂ ಜನರ ಸಿದ್ಧತೆಗಳನ್ನೇ ಒಂದು ಅಳತೆಗೋಲಾಗಿರಿಸಿಕೊಂಡು ಹೋರಾಟಗ[...] ರೂಪಿಸಿದರೆ ಮಾತ್ರ ಮುಂದಿನ ದಿನಗಳು ಬದಲಾಗಬಹುದು. ಆದರೆ ಇದನ್ನು ಸಾಧಿಸಲು ಹತ್ತಾರು ಲೀ[...] ಆಗಿರುವ ಸಂಘಟನೆಗಳು ಬೇಕಾಗಬಹುದು. ಜನರಲ್ಲಿ ರಾಜಕೀಯ ಪ್ರಜ್ಞೆ ಬೆಳೆಸಲು ನೂರಾರು ಕಾರ್ಯಕ[...] ಬೇಕಾಗುತ್ತದೆ. ಕರ್ನಾಟಕದ ಇವತ್ತಿನ ಸ್ಥಿತಿ ಹೇಗಿದೆಯೆಂದರೆ ಯಾವುದೇ ಪ್ರತಿಭಟನೆ ಅಥವಾ ಹೋರ[...] ಪಾಂಪ್ಲೆಟ್ಟುಗಳಲ್ಲಿ ದೊಡ್ಡ ದೊಡ್ಡ ಸಮೂಹ ಸಂಘಟನೆಯ ಹೆಸರುಗಳ ಬದಲಿಗೆ ವ್ಯಕ್ತಿಗಳ ಹೆಸರಷ್ಟೇ ಕಾಣಸಿಗುತ್ತದೆ. ಹೆಸರಿಗೆ ನೂರಾರು




ಸಂಘಟನೆಗಳು ಇದ್ದಂತೆ ಕಂಡರೂ ಪ್ರಗತಿಪರ-ಜನಪರ ಕಾಳಜಿಯಿರುವ ಹೊಸ ಕಾರ್ಯಕರ್ತರ ಸಂಖ್ಯೆ ಬೆಳೆಯುತ್ತಿಲ್ಲ, ಇದೆಲ್ಲಾ ಬದಲಾಗದೆ ಹೋದರೆ ಸಶಸ್ತ್ರ ಬಂಡಾಯದ ಮಾತಿರಲಿ ಶುದ್ಧ ವೆಜಿಟೇರಿಯನ್ ಹೋರಾಟಗಳೂ ಉಳಿಯುವುದಿಲ್ಲ.

ಈ ಹಿನ್ನೆಲೆಯಲ್ಲಿ ಹೇಳಬೇಕೆಂದರೆ ಕಾಡಿನಲ್ಲಿರುವ ನಕ್ಸಲ್ ಗೆರಿಲ್ಲಾಗಳು ಕರ್ನಾಟಕದ ಆಗುಹೋಗುಗಳ[...] ನೇರವಾಗಿ ಹೆಚ್ಚೇನು ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿದ್ದಾರೆ ಎಂದೇ ಹೇಳಬಹುದು. ಅವರೆಲ್ಲರ [...] ಜನಪರ ಕಾಳಜಿಗಳ ಬಗ್ಗೆ ಜನಸಾಮಾನ್ಯರಲ್ಲಿ ಅನುಮಾನಗಳೇನೂ ಇಲ್ಲ, ಆದರೂ ಭಿನ್ನಾಭಿಪ್ರಾಯಗಳನ್ನೆಲ್ಲಾ ದ್ರೋಹವೆಂ[...] ವಿವೇಚನೆಯ ಮಾತುಗಳನ್ನು ಹೇಡಿತನವೆಂದೂ ಭಾವಿಸುವ ಒಂದು ದುಡುಕು ನಕ್ಸಲರಲ್ಲಿ ಎದ್ದುಕಾಣುತ್ತಿದೆ.

ಈಗಿನ ಶರಣಾಗತಿ ಪ್ಯಾಕೇಜ್‌ನ ಆಮಿಷವಾಗಲೀ, ನಿಸ್ಸಹಾಯಕ ಪರಿಸ್ಥಿತಿಯಾಗಲೀ ನಕ್ಸ[...] ಅಧೀರಗೊಳಿಸದಿರಬಹುದು. ಆದರೆ ವಾಸ್ತವ ಪರಿಸ್ಥಿತಿಯ ಅರಿವು ಮುಖ್ಯವಲ್ಲವೇ?

ಅಂಗೀರಸ-ಯೋಗೇಶ್ವರ ಎಂಬ ಲೋಕನಾಯಕರು


ಯೋಗೇಶ್ವರ

ಎಂದೂ ಧರ್ಮೋದ್ಧಾರದ ಕೈಂಕರ್ಯವನ್ನು ತಲೆಮೇಲೆ ಹೊತ್ತು ...ತ್ತಿರುವ ನಾಗೇಶ ಅಂಗೀರಸನ ಹಿನ್ನೆಲೆ ಕೊಂಚ ಇಂಟರೆಸ್ಟಿಂಗಾಗಿದೆ. ...ರಿಗೆ ಶಿವುಡನೊಬ್ಬ ಬಂದರೂ ಅರ್ಜೆಂಟಾಗಿ ಧರ್ಮಾಭಿಮಾನ, ಆಧ್ಯಾತ್ಮದ ಮಾತು ಶುರುಮಾಡುವ ಚಾಳಿ ಅಂಗೀರಸನಿಗಿದೆ. ಹಿಪ್ಪಿ ಸುಮ ಹಾಲಿ ...ತಾಲ್ಲೂಕು ಪಂಚಾಯ್ತಿ ಸದಸ್ಯೆ. ಹೇರೂರು ಬಳಿಯ ಹಿರೇಗದ್ದೆ ಇವರು ...ುವ ಪುಣ್ಯಕ್ಷೇತ್ರ. ದಿನ ಬೆಳಗಾದರೆ ದಲಿತರ ಮನೆಗೆ ಹೋಗಿ ಪೇಜಾವರರ ...ನ ಮಾಡುವುದು ಅಂಗೀರಸನ ಮುಖ್ಯಕಾಯಕ. ದಂಪತಿಗಳು ಅಷ್ಟೇನು ...ಲ್ಲ ಅನ್ನುವುದು ಜನರ ಅನಿಸಿಕೆ. ವನದುರ್ಗ ಪರಮೇಶ್ವರಿ ದೇವಳ ನಿರ್ಮಿಸಲು ಅಂಗೀರಸ ಜನರಿಂದ ಹಣ ...ಕ್ಕ ಕೊಡಲಿಲ್ಲ ಎನ್ನುವವರೂ ಇದ್ದಾರೆ. ದೇವರ ಹೆಸರಿನಲ್ಲಿ ಡಾ.ರಾಜ್‌ಕುಮಾರ್ ಹತ್ತಿರವೂ 75 ಸಾವಿರ ...ಷ್ಟ ಕುಖ್ಯಾತಿ ಈ ಮಹಾನುಭಾವರದ್ದು.


...ಗ ನಕ್ಸಲ್ ಶರಣಾಗತಿಯ ಪ್ಯಾಕೇಜ್ ನೆಪದಲ್ಲಿ ಸರ್ಕಾರಿ ತಿಜೋರಿಯಿಂದ ಹರಿದುಬರುತ್ತಿರುವ ಲಕ್ಷಾಂತರ ...ಳಲ್ಲಿ ಅಂಗೀರಸ ತನ್ನ ಪಾಲು ಪಡೆದೇ ಇಲ್ಲ ಎನ್ನುವಂತಿಲ್ಲ. ಜೊತೆಗೆ ಮಲೆನಾಡಿನಲ್ಲಿ ಶಾಂತಿ ಸ್ಥಾಪಿಸಲು ...ರ ಹಾಗೂ ಅಂಗೀರಸ ಶ್ರಮಿಸಿದ್ದರೆಂಬ ಹೆಗ್ಗಳಿಕೆ ಪಡೆಯುವ, ಆ ಮೂಲಕ ನಕ್ಸಲ್ ಹೋರಾಟದ ಕತೆ ...ೇ ಹೋಯಿತೆಂಬ ಅಭಿಪ್ರಾಯ ಮೂಡಿಸುವ ಉದ್ದೇಶವೂ ಇವನಿಗಿರುವಂತಿದೆ.

...ಗ ಪೊಲೀಸರಿಗೆ ಬೇಕಿರುವುದು ಇದೇನೇ

ಅಂಗೀರಸನೆಂಬ ಹಾಗಲಕಾಯಿಗೆ ಯೋಗೇಶ್ವರನೆಂಬ ಬೇವಿನಕಾಯಿಯೂ. ಈಗ ಜೊತೆಯಾಗಿದೆ. ಈ ...ಶೃಂಗೇರಿ ತಹಶೀಲ್ದಾರ್ ಆಗಿದ್ದ ಯೋಗೇಶ್ವರ್ ಅಲ್ಲಿಂದ ವರ್ಗ ಆಗಿದ್ದರೂ ಶೃಂಗೇರಿಯ ಗಿರಿಜನರ ...ಹನಂತೆ ಪೋಜು ಕೊಡುವುದನ್ನು ನಿಲ್ಲಿಸಿಲ್ಲ. ತಾನೇನೋ ಲೋಕನಾಯಕ ಜಯಪ್ರಕಾಶ್ ನಾರಾಯಣ್ ...ಶಿ ಈತ ವರ್ತಿಸುವುದು ತಮಾಷೆಯಾಗಿ ಕಾಣುತ್ತಿದೆ.

2010ರ ಜೂನ್ 10ರಿಂದ ಅನ್ವಯವಾಗು ...ನ್ ಪ್ಯಾಕೇಜ್' ಒಂದನ್ನು ಘೋಷಿಸಿದೆ.

...ಪ್ರಕಾರ ಮಾವೋವಾದಿ ಸಶಸ್ತ್ರ ಹೋರಾಟದ ...ಸಾನುಭೂತಿಯಿರುವ ಬಹಿರಂಗ ಸಂಘಟನೆಗಳ ...ರ್ಕರಾಗಿದ್ದವರಿಗೆ ಅನ್ವಯಿಸುವ ಪ್ಯಾಕೇಜ್ ಇದು. ...ವರ್ಷಕಾಲ ಚಲಾವಣೆಯಲ್ಲಿರುವ ಈ ಗ್ರೀನ್ ...ಾಗಿ ಸರ್ಕಾರ ಹಲವು ಕೋಟಿ ... ಹಣ ನೀಡಿದೆ. ಇಷ್ಟೊಂದು ...ದ್ದ ಮೇಲೆ ಅದರ 'ಉಪಯೋಗ' ...ಡಿಕೊಳ್ಳಬಾರದೆಂದು ಪೊಲೀಸರೂ ...ದ್ದಾರೆ. ಅದರ ಫಲ ಶ್ರುತಿಯೇ ...ರಣಾಗತಿ.


ಗೋರಬಾಳ್

...ೀಸರಿಗೆ ಈ ಕಾರ್ಯದಲ್ಲಿ ನೆರ... ನಾಗೇಶ ಅಂಗೀರಸನೆಂಬ ವ್ಯಕ್ತಿ. ...ಮಠಾಧೀಶರ ಶಿಷ್ಯನಾದ ಈ ... ಎಲ್ಲಾ ಕಡೆ ಓಡಾಡಿ ಊರಿನಲ್ಲೇ 'ನಕ್ಸಲ'ರೆಂಬ ಚೀಟಿ ಅಂಟಿಸಿ ...ತಿ ಮಾಡಿಸಿದ್ದಾನೆ. ಇದರಲ್ಲಿ ... ಮಲ್ಲಿಕಾ ಮುಂತಾದವರು ಮತ್ತೆ ಬದುಕು ...ತ್ತಾರೆಂದರೆ ಅದನ್ನೇನೂ ಆಕ್ಷೇಪಿಸಬೇಕಿಲ್ಲ. ಆದರೆ ...ನಲ್ಲಿ ಪೊಲೀಸರು ಹಾಗು ಅಂಗೀರಸರ ಜೇಬಿಗೆ ... ಹೋಯಿತೆಂಬ ಪ್ರಶ್ನೆ ಹಾಗೇ ಉಳಿಯುತ್ತದೆ.

...ಪೊಲೀಸರಿಗೆ ತಮ್ಮ ಸಾಧನೆ ತೋರಿಸಿಕೊಳ್ಳಲು ... ಆಗಬೇಕಿತ್ತು. ಅತ್ತ ಪೇಜಾವರರಿಗೆ ಮತ್ತವರ ...ೀರಸನಿಗೂ ಶಾಂತಿಧೂತರೆನಿಸಿಕೊಳ್ಳುವ ಅಪೇಕ್ಷೆ ...ಜಯ, ಮಲ್ಲಿಕಾ, ವೆಂಕಟೇಶರಿಗೆ ಪೊಲೀಸರ ...ಬೇಡವಾಗಿತ್ತು. ಹೇಗೂ ಗ್ರೀನ್ ಪ್ಯಾಕೇಜಿನಲ್ಲಿ ...ಷ್ಟಲೇ ಹಣವೂ ಇತ್ತು.

...ಅಂಗೀರಸ ಮಹಾನ್ ಕಿಲಾಡಿ. ಇವೆಲ್ಲವನ್ನೂ ...'ಯೆಂಬ ಏಕಸೂತ್ರದಡಿ ಸೇರಿಸಿ ...ಷ್ಟು ಲಾಭ ಮಾಡಿಕೊಂಡಿದ್ದಾನೆ. ಈ ...ಯ ನಾಟಕದ ರಿಹರ್ಸಲ್ ನಡೆಯುತ್ತಿದ್ದಾಗ ... ಜಿ.ಎಂ.ಕೃಷ್ಣ ಎಂಬಾತನ ಬೆನ್ನು ಬಿದ್ದಿದ್ದರು. ...ರಾಯ, ನೀನು ಶರಣಾದೆ ಅಂತಾ ... ಕೊಂಚ ಹಣ ಕೊಡಿಸುತ್ತೇವೆ' ಅಂತಲೂ ...ಡ್ಡಿದ್ದರು. ಆದರೆ ಕೃಷ್ಣ 'ನಾನು ನಕ್ಸಲೈಟೇ ...ದುಬಿಟ್ಟ. ಜೊತೆಗೆ 'ಪೊಲೀಸರು ಶರಣಾಗತಿ ...ನಲ್ಲಿ ಭಾಗವಹಿಸುವಂತೆ ಪ್ರಾಣ ಬೆದರಿಕೆ ...ದ್ದಾರೆ' ಎಂದು ಪತ್ರಿಕಾ ಹೇಳಿಕೆಯನ್ನೂ ಕೊಟ್ಟುಬಿಟ್ಟ. ಇದಲ್ಲದೆ ಅಂಗಡಿ ಚಂದ್ರು, ಗುರುಮೂರ್ತಿ ಯೆಂಬುವರನ್ನು ಕರೆಸಿದ್ದ ಪೊಲೀಸರು 'ನಕ್ಸಲ್ ಅಂತಾ ಒಪ್ಪಿಕೊಂಡು ಶರಣಾಗತಿ ಪ್ಯಾಕೇಜ್ ತಗೊಳ್ಳಿ' ಎಂದು ಜೀವ ಬೆದರಿಕೆ ಹಾಕಿರುವ ಘಟನೆಗಳೂ ನಡೆದುಹೋಗಿವೆ. ಈ ಮಧ್ಯೆ ಊರಿನಲ್ಲಿದ್ದ ಮಲ್ಲಿಕಾರನ್ನು 'ಡಿಸಿ ಆಫೀಸ್‌ನಲ್ಲಿ ಮೀಟಿಂಗ್ ಇದೆ ಬಾ' ಎಂದು ಚಿಕ್ಕಮಗಳೂರಿಗೆ ಕರೆಸಿಕೊಂಡು ಅಲ್ಲಿ 'ಶರಣಾಗತಿ' ಬಗ್ಗೆ ಹೇಳಿದರೆಂಬ ಸುದ್ದಿಯಿದೆ. ಪ್ಯಾಕೇಜ್ ಬಗ್ಗೆ ಯೋಚಿಸಿರದಿದ್ದ ಮಲ್ಲಿಕಾ ಪೊಲೀಸು ಅಧಿಕಾರಿಗಳ ಒತ್ತಡ ಹಾಗೂ ಬೆದರಿಕೆಗೆ ಮಣಿದು 'ಶರಣಾದ ನಕ್ಸಲರ' ಜೊತೆ ನಿಂತರು. ಆದರೂ ಮಾಧ್ಯಮಗಳ ಜೊತೆ ಮಾತಾಡುವಾಗ ಶಸ್ತ್ರಾಸ್ತ್ರ ಬಿಟ್ಟರೂ ಜನರಿಗಾಗಿ ಹೋರಾಟ ಬಿಡುವುದಿಲ್ಲ ಎಂಬ ದಿಟ್ಟ ಹೇಳಿಕೆ ನೀಡಿದ್ದಾಳೆ. ಈ ಪೊಲೀಸರು ಕೋಮು ಸೌಹಾರ್ದ ವೇದಿಕೆಯ ನಾಯಕ ಅಶೋಕ ಹಾಗೂ ಅವರ ಪತ್ನಿ ಮಂಜುಳಾರನ್ನು ನಕ್ಸಲ್ ಎಂದು ಆರೋಪಿಸಿ ಕೇಸ್‌ನಲ್ಲಿ ಸಿಲುಕಿಸಲು ಇದೇ ಮಲ್ಲಿಕಾಳಿಂದ ಹೇಳಿಕೆ ಪಡೆಯಲು ಯತ್ನಿಸಿದ್ದರು. ಆದರೆ ಆಗಿನ್ನೂ ಚಿಕ್ಕ ಹುಡುಗಿಯಾಗಿದ್ದರೂ ಮಲ್ಲಿಕಾ ಸುಳ್ಳು ಆರೋಪ ಮಾಡಲೊಪ್ಪದೆ, ಘನತೆಯಿಂದ ವರ್ತಿಸಿದ್ದಳು.


ಪೊಲೀಸರ ಲೋಭ-ಲಾಭ

ನಕ್ಸಲ್ ವಿರೋಧಿ ಪಡೆ ಹಾಗೂ ಮಲೆನಾಡಿನ ಕೆಲ ಪೊಲೀಸರಿಗೆ 'ನಕ್ಸಲ್' ಎಂಬುದೇ ಒಂದು ಹಾಲು ಕರೆಯುವ ಹಸುವಿನಂತಾಗಿ ಹೋಗಿದೆ. ಕೂಂಬಿಂಗ್ ಆಪರೇಶನ್ ಹೆಸರಿನಲ್ಲಿ ಪೆಟ್ರೋಲ್-ಡೀಸೆಲ್‌ಗಳ ಕಳ್ಳ ಲೆಕ್ಕ ತೋರಿಸುವುದು, ಇನ್‌ಫಾರ್ಮರ್‌ಗಳನ್ನು ನೇಮಿಸಿಕೊಂಡಿದ್ದೇವೆಂದು ಹೇಳಿ ಅವರಿಗೆ ಪಾವತಿಸುವ ನೆಪದಲ್ಲಿ ಲಕ್ಷಾಂತರ ರೂಪಾಯಿ ಹಣ ಡ್ರಾ ಮಾಡುವುದೆಲ್ಲಾ ಅಲ್ಲಿ ನಡೆಯುತ್ತಿದೆ.

ಇದರ ಲೆಕ್ಕಾ-ಬುಕ್ಕು ಯಾರೂ ಕೇಳುವಂತಿಲ್ಲ.

ಅದೇರೀತಿ ಈಗಿನ ಶರಣಾಗತಿ ಪ್ಯಾಕೇಜಿನ ಹಣದ ಲೆಕ್ಕವೂ ಸಹ ಯಾರಿಗೂ ಸಿಗುವುದಿಲ್ಲ. ಆದರೆ ಪೊಲೀಸರು ಮಾತ್ರ ಊರಿನಲ್ಲಿದ್ದವರನ್ನು ಕರೆತಂದು 'ನಕ್ಸಲರ ಶರಣಾಗತಿ' ಎನ್ನುವ ಸೀನ್ ಸೃಷ್ಟಿಸಿದ್ದು ಮಾತ್ರ ದುಡ್ಡ ಹೊಡೆಯಲು ಎಂಬುದಂತೂ ಜನರಿಗೆ ಅರ್ಥವಾಗಿದೆ. ●

ಹೊಸಗದ್ದೆ ಪ್ರಭಾಗೆ ಅನಾರೋಗ್ಯ ಅಷ್ಟೆ




...ರಡಿಸೊಳಗಿರುವ ಗೆರಿಲ್ಲಾಗಳ ಪೈಕಿ ಹೊಸಗದ್ದೆ ಪ್ರಭಾ ತೀವ್ರ ...ೋಗ್ಯದಿಂದ ಬೆಂಗಳೂರಿನ ಸೇಂಟ್ ಜಾನ್ ಆಸ್ಪತ್ರೆಯಲ್ಲಿ ...ಟ್ಟರೆಂತಲೂ, ಪೊಲೀಸರಿಗೆ ಸುದ್ದಿ ತಿಳಿಯುವ ಮೊದಲೇ ... ಪ್ರಭಾಳ ಶವವನ್ನು ತೆಗೆದುಕೊಂಡು ಹೋಗಿ ಸಂಸ್ಕಾರ ...ಟ್ಟರೆಂತಲೂ ಕಳೆದೆರಡು ತಿಂಗಳಿಂದ ಪತ್ರಿಕಾ ವರದಿಗಳು ...ತ್ತಿದ್ದವು.

...ೊಲೀಸರು ಈ ರೂಮರ್‌ನ ಬೆನ್ನುಹತ್ತಿ ಪ್ರಭಾ ಬಗ್ಗೆ ಖಚಿತ ಮಾಹಿತಿ ಪಡೆಯಲು ಹೆಣಗುತ್ತಿದ್ದರು. ...ದರೆ ಪ್ರಭಾಗೆ ತೀವ್ರ ಅನಾರೋಗ್ಯವಾಗಿದ್ದು ಈಗ ಚೇತರಿಸಿಕೊಂಡಿದ್ದಾರೆಂದು ಹೇಳಲಾಗುತ್ತಿದೆ.

ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕ ವಿಚಾರದಲ್ಲಿ ರಾಜ್ಯದ ರೆಡ್ಡಿ ಸರ್ಕಾರಕ್ಕೂ, ರಾಜ್ಯಪಾಲರಿಗೂ ಆಗಿ ಬರುತ್ತಿಲ್ಲ. ಇತ್ತೀಚೆಗಷ್ಟೇ ಮೈಸೂರು ವಿ.ವಿ.ಯ ಕುಲಪತಿಯನ್ನಾಗಿ ಪ್ರೊ. ವಿ.ಜಿ. ತಳವಾರ್ ನೇಮಕವಾದಾಗಲೂ ರಾಜ್ಯಪಾಲರು, ಸರ್ಕಾರದ ಮಧ್ಯೆ ಸಂಘರ್ಷ ಏರ್ಪಟ್ಟಿತ್ತು.

ಈಗ ಧಾರವವಾಡ ಕರ್ನಾಟಕ ವಿ.ವಿ. ಕುಲಪತಿ ನೇಮಕ ವಿವಾದಕ್ಕೆ ಕಾರಣವಾಗಿದೆ. ರಾಜ್ಯ ಸರ್ಕಾರ ಸೂಚಿಸಿದ್ದ ಪ್ರೊ ಎಚ್.ಬಿ. ಹಿಂಚಿಗೇರಿಯವರ ಹೆಸರಿನ ಪ್ರಸ್ತಾಪವನ್ನು ತಿರಸ್ಕರಿಸಿರುವ ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಅವರು ಕರ್ನಾಟಕ ವಿ.ವಿ. ಕಂಪ್ಯೂಟರ್ ವಿಭಾಗದ ಮುಖ್ಯಸ್ಥ ಡಾ. ಎಚ್.ಬಿ. ವಾಲೀಕಾರ್ ಅವರನ್ನು ಕುಲಪತಿಯನ್ನಾಗಿ ಮಾಡಿದ್ದಾರೆ. ಇದರಿಂದ ಕಣ್ಣು ಕೆಂಪು ಮಾಡಿಕೊಂಡ ರಾಜ್ಯ ಸರ್ಕಾರ





ಯಡಿಯ ಜಾತಿವಾದ


ಲಿಂಗಾಯತರಿಗಷ್ಟೇ ಕುಲಪತಿ ಪಟ್ಟ!

ರಾಜ್ಯಪಾಲರಿಗೆ ತನ್ನ ವಿರೋಧ ಸಲ್ಲಿಸಿದೆ.

ಇಲ್ಲಿ ಮೊದಲಿಗೆ ವಿ.ವಿ. ಕಾಯ್ದೆಯನ್ನು ನೋಡೋಣ. ಕುಲಾಧಿಪತಿಗಳಾದ ರಾಜ್ಯಪಾಲರು ಸರ್ಕಾರದ ಒಪ್ಪಿಗೆಯೊಂದಿಗೆ ಕುಲಪತಿಗಳ ನೇಮಕ ಮಾಡುವುದು ಕಡ್ಡಾಯ. ಹೀಗಾಗಿ ಈಗ ರಾಜ್ಯಪಾಲರು ಮಾಡಿರುವ ನೇಮಕಾತಿಯನ್ನು ಯಾರಾದರೂ ಕೋರ್ಟಿನಲ್ಲಿ ಪ್ರಶ್ನೆ ಮಾಡಿದರೆ ತೊಂದರೆಯಾಗಬಹುದು.






ಡಾ.ವಾಲೀಕಾರ್


ಡಾ.ಹಿಂಚಿಗೇರಿ


ಕಾಯ್ದೆ ವಿಷಯ ಬಿಡಿ. ಇಲ್ಲಿ ರಾಜ್ಯದ ಚೆಡ್ಡಿ ಸರ್ಕಾರ ಎಲ್ಲ ವಿ.ವಿ.ಗಳಿಗೆ ಲಿಂಗಾಯತರನ್ನೇ ಕುಲಪತಿಗಳನ್ನಾಗಿ ಮಾಡುತ್ತ ಪ್ರಚ್ಛನ್ನ ಜಾತಿವಾದದಲ್ಲಿ ತೊಡಗಿರುವುದು ಮಾತ್ರ ಅಸಹ್ಯಕರವಾಗಿದೆ. ಧಾರವಾಡ ವಿ.ವಿ. ಕುಲಪತಿ ನೇಮಕಾತಿ ಶೋಧನಾ ಸಮಿತಿಯು ಕುಲಪತಿ ಸ್ಥಾನಕ್ಕೆ ಮೂವರ ಹೆಸರನ್ನು ಸೂಚಿಸಿತ್ತು. ಅವರಲ್ಲಿ ಪ್ರೊ. ಹಿಂಚಿಗೇರಿ ಲಿಂಗಾಯತ, ಡಾ. ವಾಲೀಕಾರ್ ಕುರುಬ ಮತ್ತು ಪ್ರೊ. ತಿಮ್ಮೇಗೌಡ ಒಕ್ಕಲಿಗ ಜಾತಿಗೆ ಸೇರಿದವರಾಗಿದ್ದರು. ವಿಶ್ವವಿದ್ಯಾಲಯಗಳಿಗೆ 'ಶಿವದಾರ' ತೊಡಿಸಲು ಹೊರಟಿರುವ ಯಡ್ಡಿ ಸರ್ಕಾರ ಮಹಾಭ್ರಷ್ಟ ಹಿಂಚಿಗೇರಿಯನ್ನೇ ಆಯ್ಕೆ ಮಾಡಿಕೊಂಡಿತು. ಕಾರಣ ಇಷ್ಟೇ: ಆತ ಲಿಂಗಾಯತ.


ಈಗ ಸದ್ಯ ರಾಜ್ಯದ ಸುಮಾರು ಎಂಟು ವಿವಿಗಳಿಗೆ ಲಿಂಗಾಯತರೇ ಕುಲಪತಿಗಳು! ದಾವಣಗೆರೆ ವಿ.ವಿ.ಯ ಇಂದುಮತಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಡಾ. ಆರ್.ಆರ್. ಹಂಚಿನಾಳ, ಬೀದರ ಪಶು ವೈದ್ಯಕೀಯ ವಿವಿಯ ಡಾ. ಸುರೇಶ್ ಹೊನ್ನಪ್ಪಗೋಳ, ಬೆಂಗಳೂರು ವಿವಿಯ ಡಾ.ಎನ್.ಪ್ರಭುದೇವ್ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಡಾ. ಮಹೇಶಪ್ಪ ಇವರೆಲ್ಲ ಲಿಂಗಾಯತರಾಗಿದ್ದು, ಯಡ್ಡಿ ಸರ್ಕಾರದ ಕೃಪಾಕಟಾಕ್ಷದಿಂದಲೇ ಆಯ್ಕೆಯಾದವರು. ಬಹುಶಃ ಈ ಜಾತಿಲಾಬಿಯ ಅಟ್ಟಹಾಸ ತಡೆಯಲೆಂದೇ ರಾಜ್ಯಪಾಲರು ಕುರುಬ ಜಾತಿಗೆ ಸೇರಿದ ಡಾ. ವಾಲಿಕಾರ್ ಅವರನ್ನು ಧಾರವಾಡ ವಿವಿಗೆ ಕುಲಪತಿಯನ್ನಾಗಿ ಮಾಡಿರಬಹುದು. ಹಾಗಿರುವುದಾದರೆ ಅವರ ಆಯ್ಕೆ ಸರಿಯಾದದ್ದೇ. ಸರ್ಕಾರ ತನ್ನ ಸ್ವಪ್ರತಿಷ್ಠೆ ಬಿಟ್ಟು ರಾಜ್ಯಪಾಲರೊಂದಿಗೆ ಸಹಕರಿಸುವುದೇ ಒಳ್ಳೆಯದೇನೋ. ತಾಂತ್ರಿಕವಾಗಿ, ಕಾನೂನುಬದ್ಧವಾಗಿ ರಾಜ್ಯಪಾಲರಿಗೆ ಈ ರೀತಿ ಸ್ವನಿರ್ಣಯ ಮಾಡುವ ಅಧಿಕಾರ ಇರಲಿಕ್ಕಿಲ್ಲ. ಆದರೆ


ಡಾ.ಮಹೇಶಪ್ಪ


ಡಾ.ಹಂಚಿನಾಳ


ಇಂದುಮತಿ


ಡಾ.ಪ್ರಭುದೇವ್


ಡಾ.ಹೊನ್ನಪ್ಪಗೋಳ

ಎರಡು ವಾರಗಳ ಹಿಂದೆ 'ಲಂಕೇಶ್' ಬರೆದಂತೆ ಈ ಹಿಂಚಗೇರಿಗೆ ಕುಲಪತಿಯಾಗುವ ಅರ್ಹತೆಯಲ್ಲೇ ಗೊಂದಲಗಳಿವೆ. ಅಂದಂತೆ ಈತ ವಿವಿಯ ಭೂಮಿಗೇ ಬಾಯಿ ಹಾಕಿದ ಭೂಪ ಕೂಡಾ. ಅಂದಂತೆ ಈಗ ಧಾರವಾಡ ವಿ.ವಿ.ಯ ಕುಲಪತಿ ಸ್ಥಾನದಿಂದ ನಿರ್ಗಮಿಸುತ್ತಿರುವ ಡಾ. ಸೈದಾಪೂರ ಕೂಡಾ ಲಿಂಗಾಯತನೇ. ಇಲ್ಲಿವರೆಗೆ ಕರ್ನಾಟಕ ವಿವಿಯನ್ನು ಆಳಿದ ಕುಲಪತಿಗಳಲ್ಲಿ ಎಂಟು ಮಂದಿ ಲಿಂಗಾಯತರು!

ಸಾಮಾಜಿಕ ನ್ಯಾಯ, ಜಾತ್ಯತೀತತೆ, ಸಮಾನ ಅವಕಾಶ, ಪ್ರತಿಭೆಗಳಿಗೆ ಮನ್ನಣೆ ಎಂಬ ನೈತಿಕ ಶಿಷ್ಟಾಚಾರಗಳನ್ನೇ ಗಾಳಿಗೆ ತೂರಿರುವ ಯಡ್ಡಿಯ ಲಿಂಗವಂತ ಸರ್ಕಾರ, ಲಿಂಗಾಯತರ ಜಾತಿಲಾಬಿಗೆ ಮಣೆ ಹಾಕುತ್ತ ಎಲ್ಲ ಕಡೆ ಅಸಮರ್ಥ, ಅನರ್ಹ ಲಿಂಗಾಯತರನ್ನು ಕುಲಪತಿಗಳನ್ನಾಗಿ ಮಾಡುತ್ತಿದೆ. 'ಲಿಂಗಾಯತಮಯ' ವಾತಾವರಣಕ್ಕೆ ಒಂದಿಷ್ಟು ಬ್ರೇಕ್ ಹಾಕಲಾದರೂ ಅವರ ಈ ಕ್ರಮಕ್ಕೆ ರಾಜ್ಯ ಸರ್ಕಾರ ಒಪ್ಪುವುದು ಒಳ್ಳೆಯದು.

ಮೈತುಂಬಾ ಜಾತಿವಿಷ ತುಂಬಿಕೊಂಡಿರುವ, ಲಿಂಗಾಯತ ಜಾತಿಲಾಬಿಗೆ ದೊಗ್ಗು ಸಲಾಮು ಹೊಡೆಯುವ ಯಡ್ಡಿ ಮಾತ್ರ ಲಿಂಗಾಯತ ಹಿಂಚಗೇರಿಗೇ ಕುಲಪತಿ ಪಟ್ಟ ಕಟ್ಟುವ ತರಾತುರಿಯಲ್ಲಿದ್ದಾನೆ.

ಈಗಾಗಲೇ ಆಡಳಿತ ಯಂತ್ರದಲ್ಲಿ, ಶಿಕ್ಷಣ ರಂಗದಲ್ಲಿ ಲಿಂಗಾಯತರನ್ನು ಅಗ್ರಪಟ್ಟದಲ್ಲಿ ಕೂಡ್ರಿಸಿ, ಸಾಮಾಜಿಕ ನ್ಯಾಯದ ಪರಿಕಲ್ಪನೆಗೇ ಅವಮಾನ ಮಾಡಿರುವ ಈ ಜಾತಿವಾದಿ, ಕೋಮುವಾದಿ ಸರ್ಕಾರದಿಂದ ಕರ್ನಾಟಕಕ್ಕೆ ಮುಕ್ತಿ ಎಂದು?

● ಹುಬ್ಬಳ್ಳಿಯಾಂವ

ಔಟ್‌ಲುಕ್ ವರದಿ: ದೇಶದ ಕಡುಭ್ರಷ್ಟ ರಾಜ್ಯ ಕರ್ನಾಟಕ

ರಾಷ್ಟ್ರಮಟ್ಟದಲ್ಲಿ ರಾಜ್ಯದ ಮಾನ ಹರಾಜು ಹಾಕಿದ ಯಡ್ಡಿ ಗ್ಯಾಂಗ್


ಕರ್ನಾಟಕದ ಮಾನವನ್ನು ರಾಷ್ಟ್ರಮಟ್ಟದಲ್ಲಿ ಹರಾಜು ಹಾಕಿದ 'ಹಿರಿಮೆ' ಯನ್ನು ಹೊತ್ತುಕೊಂಡು ಕೃತಾರ್ಥವಾಗಿದೆ ಯಡ್ಡಿ ಮತ್ತು ಆತನ ದರೋಡೆಕೋರರ ಪಡೆ.

ಇಲ್ಲಿಗೆ ಎರಡೂವರೆ ವರ್ಷಗಳ ಹಿಂದೆ ಮೊದಲ ಬಾರಿಗೆ ದಕ್ಷಿಣ ಭಾರತದಲ್ಲಿ ಬಿಜೆಪಿ ಸರ್ಕಾರ ರಚಿಸಲು ಅವಕಾಶ ಮಾಡಿಕೊಟ್ಟ ಕರ್ನಾಟಕದ ಮತದಾರನಿಗೆ ರಾಷ್ಟ್ರೀಯ ಮಟ್ಟದಲ್ಲಿ ಅಪಗೌರವ ಉಂಟಾಗಿದೆ.

ಇಷ್ಟು ದಿನ ರಾಜ್ಯದೊಳಗೆ, ಆಗೊಮ್ಮೆ ಈಗೊಮ್ಮೆ ಇಂಗ್ಲಿಷ್ ಚಾನೆಲ್‌ಗಳ ಮೂಲಕ ರಾಜ್ಯದ ಹೊರಗೆ, ಕರ್ನಾಟಕಕ್ಕೆ ಮಸಿ ಬಳಿಯುತ್ತ ಬಂದಿದ್ದ ಯಡಿಯೂರಪ್ಪ ಆ್ಯಂಡ್ ಗ್ಯಾಂಗ್ ಇದೀಗ 'ಭಾರತದ ಅತಿ ಭ್ರಷ್ಟ ರಾಜ್ಯ ಕರ್ನಾಟಕ' ಎಂಬ 'ಅಪರೂಪ'ದ ಅವಾರ್ಡ್ ಅನ್ನು ತಂದುಕೊಟ್ಟಿದ್ದಾರೆ. (ಅಕ್ಟೋಬರ್ 25, 2010ರ 'ದಿ ಔಟ್‌ಲುಕ್' ರಾಷ್ಟ್ರೀಯ ವಾರಪತ್ರಿಕೆಯ ಕವರ್ ಸ್ಟೋರಿಯೇ 'Karnataka! India's most corrupt state' ಎಂಬುದು.

ರಾಷ್ಟ್ರಿಯ ಮಟ್ಟದಲ್ಲಿ ಮಾಧ್ಯಮಗಳಲ್ಲಿ ಹಿಂದೆಂದೂ ಕರ್ನಾಟಕದ ಮಾನ ಈ ಮಟ್ಟದಲ್ಲಿ ಹರಾಜಾಗಿರಲಿಲ್ಲ. ಈಗ ಅದನ್ನು 'ಸಾಧಿಸಿದ' ಕೀರ್ತಿ ರಾಜ್ಯ ಬಿಜೆಪಿ ಸರ್ಕಾರಕ್ಕೆ ದಕ್ಕಿದೆ.

'ಯಡಿಯೂರಪ್ಪನವರು ತಮ್ಮ ರಾಜ್ಯ ಆಳುವದಕ್ಕಿಂತ, ಭ್ರಷ್ಟಾಚಾರವೇ ಅವರ ಸರ್ಕಾರವನ್ನು ಹೆಚ್ಚಿಗೆ ಆಳುತ್ತಿದೆ' ಎಂದು ಔಟ್‌ಲುಕ್‌ನಿಂದ ಶಹಬಾಸ್‌ಗಿರಿ ಪಡೆದಿರುವ ನಿರ್ಲಜ್ಜ ಯಡಿಯೂರಪ್ಪ ಆ ಮೂಲಕ ಓಟು ಕೊಟ್ಟವರನ್ನು ಬೆತ್ತಲೆಗೊಳಿಸಿ ನಿಂತಿದ್ದಾರೆ.



ಪಿ.ಕೆ. ಮಲ್ಲನಗೌಡರ್
mallishashi@gmail.com

2008ರ ಮೇ 5 ರಂದು ಯಡ್ಡಿಯ ಚೋರ್‌ಗ್ಯಾಂಗ್ ಅಧಿಕಾರ ವಹಿಸಿದಾಗಿನಿಂದ ಇಲ್ಲಿವರೆಗೆ ದಿನನಿತ್ಯವೂ ರಾಜ್ಯದ ಸಂಪತ್ತನ್ನು ಲೂಟಿ ಮಾಡುತ್ತಾ ಬಂದಿದ್ದು, ಹೆಚ್ಚು ಕಡಿಮೆ ಪ್ರತೀ ವಾರವೂ 'ಲಂಕೇಶ್' ಈ ದರೋಡೆಯ ಮಾಹಿತಿಯನ್ನು ಪ್ರಕಟಿಸುತ್ತ ಬಂದಿದೆ. ಎರಡು ವಾರಗಳ ಹಿಂದಷ್ಟೇ ನಾವು 'ಯಡ್ಡಿಯ ಎರಡೂವರೆ ವರ್ಷ ನೂರೆಂಟು ಹಗರಣಗಳು, ಹತ್ತಾರು ದೋಖಾಗಳು' ಎಂಬ ಹೆಡ್ಡಿಂಗ್‌ನಲ್ಲಿ ಯಡ್ಡಿಯ 'ಸಾಧನೆ'ಗಳ ಬ್ಲ್ಯಾಕ್‌ಲಿಸ್ಟ್ ನೀಡಿದ್ದೆವು. ಇತ್ತೀಚಿಗಷ್ಟೇ ಭಾರೀ ಸುದ್ದಿ... ಭೂಗಳ್ಳತನ, ಡಿನೋಟಿಫಿಕೇಷನ್ ದಂಧೆಗಳನ್ನು 'ಲಂ... ಯಾವತ್ತೋ ದಾಖಲೆಗಳನ್ನು ನೀಡಿ ಬಯಲಿಗೆಳೆದಿ...

ಹೀಗೆ ಕರ್ನಾಟಕ ಎಂದೆಂದೂ ಕಂಡರಿಯದ ದುಷ್ಟ, ಭ್ರಷ್ಟ ಸರ್ಕಾರವೀಗ ದೇಶದ ಅತಿ ಭ್ರಷ್ಟ ಸ... ಎಂದು ರಾಷ್ಟ್ರೀಯ ವಾರಪತ್ರಿಕೆಯಲ್ಲಿ ಉಗಿಸಿಕೊಂ... ಬಿಡಿಎ, ಕೆಐಎಡಿಬಿಗಳನ್ನು ದುರ್ಬಳಕೆ ಮಾಡಿಕೊಂ... ಅದಿರು ಸಂಪತ್ತನ್ನು ಕೊಳ್ಳೆ ಹೊಡೆದಿದ್ದು ಮತ್ತು ನೆರೆಪೀಡಿ... ಪುನರ್ವಸತಿ ಕಲ್ಪಿಸದೇ ಹೋದದ್ದು–ಇವುಗಳ ಔಟ್‌ಲುಕ್ ವರದಿ ರೂಪಿಸಿದೆ. ಆದರೆ ಇದರ ಹತ್ತಾರು ದರೋಡೆಯನ್ನು ಈ ಸರ್ಕಾರ ಮಾಡಿದೆ ಎಂಬ... ನಗ್ನಸತ್ಯ.

ಕೆಐಎಡಿಬಿ ಎಂಬ ಕಳ್ಳರ ಕೂಟ

ಮೊದಲೆಲ್ಲ ಯಾವುದಾದರೂ ಯೋಜನೆಗೆ ಬೇಡಿಕೆ ಬಂದಾಗಷ್ಟೇ ಭೂಸ್ವಾಧೀನ ಮಾಡುತ್ತಿದ್ದ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಈಗ ಭೂಸ್ವಾಧೀನವನ್ನೇ ನಿತ್ಯ ದಂಧೆಯನ್ನಾಗಿ ಮಾಡಿಕೊಂಡಿದೆ. ಸಚಿವರಾದ ಕಟ್ಟಾಸುಬ್ರಮಣ್ಯ ನಾಯ್ಡು ಮತ್ತು ಆರ್. ಅಶೋಕ್‌ರವರು ಕೆಐಎಡಿಬಿ ಮೂಲಕ ಲೂಟಿ ಹೊಡೆದ ಭೂಮಿ ಸಾವಿರಾರು ಎಕರೆಗಳ ಲೆಕ್ಕದಲ್ಲಿದೆ. ಜೊತೆಗೆ ಬೆಂಗಳೂರು ಮತ್ತು ಸುತ್ತಲಿಂದ ಗೆದ್ದ ಬಿಜೆಪಿಯ ಡಜನ್ ಭೂಗಳ್ಳ ಶಾಸಕರು ಕೂಡಾ ಒಂದೇ ಪಟ್ಟಿನಲ್ಲಿ ನೂರಾರು ಎಕರೆ ಭೂಮಿಯನ್ನು ಖರೀದಿಸಿ, ನಂತರ ಅದನ್ನು ಕೆಐಎಡಿಬಿ ಸ್ವಾಧೀನ ಮಾಡಿಕೊಳ್ಳುವಂತೆ ಮಾಡಿ ಅಪಾರ ಪರಿಹಾರ ಹಣವನ್ನು ನುಂಗಿದ್ದಾರೆ.

ಇಟಾಸ್ಕಾ ಎಂಬ ನಕಲಿ ಸಾಫ್ಟ್‌ವೇರ್ ಕಂಪನಿ ಹುಟ್ಟು ಹಾಕಿ ಕೈಗಾರಿಕೆಯ ಹೆಸರಲ್ಲಿ ಸಾವಿರಾರು ಎಕರೆ ಭೂಮಿಯನ್ನು ರಿಯಾಯತಿ ದರದಲ್ಲಿ ದೋಚಿದ ಕಟ್ಟಾ ಮತ್ತು ಮಗ ಜಗ್ಗ ಭೂಮಿ ಕಳೆದುಕೊಂಡವರಿಗೆ ಬರಬೇಕಾದ ಪರಿಹಾರದ ಹಣವನ್ನು ಬಿಟ್ಟಿಲ್ಲ. ಇಲ್ಲದ ಭೂಮಿಗೂ ನಕಲಿ ದಾಖಲೆಗಳ ಮೂಲಕ ಪರಿಹಾರ ಪಡೆದ ಶೂರರಿವರು. ಇನ್ನು ಆರ್. ಅಶೋಕ್ ಅಂತೂ ಉತ್ತರಹಳ್ಳಿಯ ಕಾಡೊಂದನ್ನೇ ಹಾಡುಹಗಲೇ ದೋಚಿದಂತವನು.

KIADB
Land of Opportunities

ಬರೀ ಭೂಗಳ್ಳ, ಶಾಸಕ, ಸಚಿವರೇ ತುಂಬಿರುವುದರಿಂದ ಸ್ವತಃ ಸಿ.ಎಂ. ಸಾಹೇಬನೇ ಇವರ ಮಾರ್ಗದರ್ಶಕನಾಗಿರುವುದರಿಂದ ಕೆಐಎಡಿಬಿ ಎಂಬುದೀಗ ಕಳ್ಳರ ಕೂಟವಾಗಿ ಹೋಗಿದೆ. ಅದು ನಿತ್ಯ ಭೂಸ್ವಾಧೀನದ ಹೆಸರಲ್ಲಿ ಭೂದರೋಡೆ ನಡೆಸುತ್ತ ರೈತಾಪಿ ಜನರನ್ನು ಬೀದಿಗೆ ತಳ್ಳುತ್ತಿದೆ.

ಬಿಡಿಎ ಮೂಲಕ ಭೂ ದರೋಡೆ

ಬೆಂಗಳೂರಿಗರಿಗೆ ನಿವೇಶನ ಒದಗಿಸುವ ಮಹತ್ವಾಕಾಂಕ್ಷೆಯಿಂದ ಹುಟ್ಟಿದ ಬೆಂಗ... ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ವನ್ನು ಎಲ್ಲ ಸರ್ಕಾರಗಳೂ ದುರ್ಬಳಕೆ ಮಾಡಿಕೊ... ಲ್ಯಾಂಡ್‌ಲೂಟಿ ಮಾಡಿವೆ. ಆದರೆ ಈ ಯಡ್ಡಿ ಸರ್ಕಾರ ಮಾಡಿದ ಲ್ಯಾಂಡ್ ಲಫಡಾ... ಲೆಕ್ಕವೇ ಇಲ್ಲ.

ಸ್ವತಃ ಸಿ.ಎಂ. ಸಾಹೇಬರೇ ಮುಂದೆ ನಿಂತು ತನ್ನ ಮಗ ಮತ್ತು ಅಳಿಯಂದಿರಿಗೆ ಬಾಳುವ ಭೂಮಿಯನ್ನು ಬಿಡಿಎನಿಂದ ಕೊಡಿಸುತ್ತಾರೆಂದರೆ, ಇಲ್ಲಿ ನಡೆದಿರುವ ಅವ್ಯವಹಾರದ ಅಂದಾಜು ಲೆಕ್ಕವನ್ನು ನೀವೇ ಊಹಿಸಿಕೊಳ್ಳಿ. ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಡಿನೋಟಿಫಿಕೇಷನ್ ಮಾಡಿದ ಯಡ್ಡಿ ಸುಪ್ರೀಂಕೋರ್ಟಿನ ಆದೇಶವನ್ನೂ ಉಲ್ಲಂಘಿಸಿ ಬೆಂಗಳೂರಿನ ನಾಗರಬಾವಿಯ ಭೂಮಿಯೊಂದನ್ನು ಡಿನೋಟಿಫಿಕೇಷನ್ ಮಾಡುವ ದಾರ್ಷ್ಟ್ಯ ಮೆರೆದಿದ್ದಾನೆ.



ಇಷ್ಟಲ್ಲದೇ, ಮಗ, ಸಂಸದ ರಾಘವೇಂದ್ರನಿಗೆ 2009ರಲ್ಲಿ ವಿವೇಚನಾ ಕೋಟಾದಲ್ಲಿ ಬಿಡಿಎ ಸೈಟು ನೀಡಿದ ಯಡ್ಡಿ ಇಲ್ಲೂ ಕಾನೂನು ಉಲ್ಲಂಘಿಸಿದ್ದಾನೆ. 'ಬೆಂಗಳೂರಲ್ಲಿ ತನಗೆ ಯಾವದೇ ಪ್ರಾಪರ್ಟಿ ಇಲ್ಲ' ಎಂದು ಮಗನಿಂದ ಪ್ರಮಾಣಪತ್ರ ಕೊಡಿಸಲು ಈ ಸಿಎಂ ಹೇಸುವುದಿಲ್ಲ. ಮಗನಿಗಷ್ಟೇ ಅಲ್ಲದೇ ಅಳಿಯಂದಿರು, ಸಂಬಂಧಿ... ಪರಿಚಿತರಿಗೆಲ್ಲ ಬೇಕಾಬಿಟ್ಟಿಯಾಗಿ ಬಿಡಿಎ ಸೈಟು ನೀಡಲಾಗಿದೆ.

ಜಿಮ್ : ಲಕ್ಷ ಎಕರೆ ಗುಳುಂ




ಕಳೆದವರ್ಷ ಸುಮಾರು ಒಂದು ಲಕ್ಷ ಎಕರೆ ಭೂಮಿಯನ್ನು 'ಅಧಿಕೃತವಾಗಿ' ಲೂಟಿ ಮಾಡಿದ 'ಹೆಗ್ಗಳಿಕೆ' ಈ ಯಡ್ಡಿ ಸರ್ಕಾರದ್ದು. 'ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ (ಜಿಮ್)'ದ ಬ್ಯಾನರ್‌ನಲ್ಲಿ ರಾಜ್ಯದ ಭೂಮಿಯನ್ನು ಕೈಗಾರಿಕೋದ್ಯಮಿಗಳೆಂಬ ರಿಯಲ್ ಎಸ್ಟೇಟ್ ವಂಚಕರ ಮಡಿಲಿಗೆ ಹಾಕಿದ ಯಡ್ಡಿ ಗ್ಯಾಂಗ್ ಆ ಮೂಲಕ ನೂರಾರು ಕೋಟಿಗಳ ಕಿಕ್‌ಬ್ಯಾಕ್ ಪಡೆದುಕೊಂಡಿತು. ಬಳ್ಳಾರಿಯ ಕುಡತಿನಿ, ಹಾವೇರಿಗಳಲ್ಲಿ ಮಿತ್ತಲ್, ಟಾಟಾಗಳಿಗಾಗಿ ಫಲವತ್ತಾದ ಸಾವಿರಾರು ಎಕರೆ ಭೂಮಿಯನ್ನು ಸ್ವಾಧೀನಮಾಡಿಕೊಳ್ಳುವ ಕೆಲಸಕ್ಕೆ ಕೈಹಾಕಿರುವ ಸರ್ಕಾರ ರೆಡ್ಡಿಗಳು ತಮ್ಮ ತೆವಲಿಗಾಗಿ ಏರ್‌ಪೋರ್ಟ್ ನಿರ್ಮಿಸಿಕೊಳ್ಳಲು ಬಳ್ಳಾರಿಯ ಚಗನೂರು, ಸಿರಿವಾರಗಳ 1,200 ಎಕರೆ ನೀರಾವರಿ ಭೂಮಿಯನ್ನು ಕಿತ್ತುಕೊಂಡಿದೆ.

'ಜಿಮ್' ಹೆಸರಿನಲ್ಲಿ ಒಂದು ಲಕ್ಷ ಎಕರೆ ಭೂಮಿಯನ್ನು ಸ್ವಾಧೀನಮಾಡಿಕೊಳ್ಳುತ್ತಿರುವ ಸರ್ಕಾರ ಕರ್ನಾಟಕದ ರೈತಾಪಿ ಸಮೂಹವನ್ನು ಬೀದಿಪಾಲು ಮಾಡಿ, ಇಡೀ ರಾಜ್ಯವನ್ನೇ ಮಾರಾಟಕ್ಕಿಟ್ಟು ರಿಯಲ್ ಎಸ್ಟೇಟ್ ಕಂಪನಿಯಂತೆ ಕಾರ್ಯಾಭಾರ ಮಾಡುತ್ತಿದೆ.

ಬರೀ ಭ್ರಷ್ಟರಲ್ಲ, ದುಷ್ಟರೂ ಕೂಡ

ಇವತ್ತು ಯಡ್ಡಿ ಸರ್ಕಾರದ ನೆಲಗಳ್ಳತನ, ಅದಿರುಗಳ್ಳತನವಷ್ಟೇ ಎದ್ದು ಕಾಣುತ್ತಿದೆ. ಆದರೆ ಅದಕ್ಕೂ ಅಪಾಯಕಾರಿಯಾದದ್ದು ಎಂದರೆ ಈ ಎರಡೂವರೆ ವರ್ಷಗಳಲ್ಲಿ ಕರ್ನಾಟಕದ ಸಾಮಾಜಿಕ ಸಮರಸ್ಯವನ್ನು ಹಾಳುಗೆಡವಿದ್ದು. ಚರ್ಚುಗಳ ಮೇಲೆ ದಾಳಿ ಮಾಡಿದ ಭಜರಂಗಿ ಪುಂಡರನ್ನು ರಕ್ಷಿಸಿದ ಸರ್ಕಾರ, ಗೋಹತ್ಯಾ ನಿಷೇದ ಮಸೂದೆ ಎತ್ತಿಕೊಂಡು ಅಲ್ಪಸಂಖ್ಯಾತರು, ದಲಿತರನ್ನು ಹಣಿಯಲು ಹೊರಟಿದೆ.



ಶ್ರೀಮಂತ ಮಠಗಳಿಗೆ ಬೇಕಾಬಿಟ್ಟಿ ಸರ್ಕಾರಿ ದುಡ್ಡನ್ನು ಹಂಚುತ್ತ ಧಾರ್ಮಿಕ ವಲಯವನ್ನೂ ಭ್ರಷ್ಟಗೊಳಿಸುತ್ತಿದೆ.

ಆಡಳಿತ ಯಂತ್ರದಲ್ಲಿ ಆಯಕಟ್ಟಿನ ಸ್ಥಳಗಳಲ್ಲಿ ಭ್ರಷ್ಟ ಲಿಂಗಾಯತ ಅಧಿಕಾರಿಗಳನ್ನು ಕೂಡ್ರಿಸಿ ಕೊಳಕು ಜಾತಿವಾದವನ್ನು ಮೆರೆಯುತ್ತಿರುವ ಯಡಿಯೂರಪ್ಪ ರೈತರ ಪರ ಮೊಸಳೆ ಕಣ್ಣೀರು ಹಾಕುತ್ತಲೇ ರೈತರ ಮೇಲೆ ಗೋಲಿಬಾರ್ ಮಾಡಿಸುವ, ರೈತರ ಕೈಗೆ ಕೋಳ ತೊಡಿಸುವ ಹೀನಕೃತ್ಯಗಳನ್ನು ಮಾಡುತ್ತಿದ್ದಾನೆ.

ಹೀಗಾಗಿ, ಇದು ಅತಿಭ್ರಷ್ಟ ಸರ್ಕಾರವಷ್ಟೇ ಅಲ್ಲ; ಅತಿ ದುಷ್ಟ ಸರ್ಕಾರ ಕೂಡಾ ಹೌದು.

ಅದಿರು ಲೂಟಿಯ ದಾಖಲೆ

ಜಾರ್ಖಂಡಿನಲ್ಲಿ ಕಂಡವರಿಗೆಲ್ಲ ಅದಿರು ಭೂಮಿಯನ್ನು ಮಾರಿ ಸಾವಿರಾರು ಕೋಟಿ ಬಾಚಿದ ಮಧು ಕೋಡಾನನ್ನು ನಾಚಿಸುವಂತೆ ಯಡ್ಡಿ ಸರ್ಕಾರ ರಾಜ್ಯದ ಸಂಪತ್ತನ್ನು ಅಕ್ರಮವಾಗಿ ವಿದೇಶಕ್ಕೆ ಮಾರಿಕೊಂಡಿದೆ.

ಬಳ್ಳಾರಿಯ ಖದೀಮ ರೆಡ್ಡಿಗಳ ಪಾಪದ ಹಣದಿಂದ ಚುನಾವಣೆಯನ್ನು ಗೆದ್ದ ಅದೇ ಖೂಳರ ಲೂಟಿಯ ಹಣದಿಂದ 'ಆಪರೇಷನ್ ಕಮಲ' ಎಂಬ ದೇಶ ಕೇಳರಿಯದ ನಿರ್ಲಜ್ಜ ವ್ಯಾಪಾರ ಆರಂಭಿಸಿ ಸರ್ಕಾರಕ್ಕೆ ಬುನಾದಿ ಹಾಕಿದ ನೀಚ ಮುಖ್ಯಮಂತ್ರಿ ರಾಜ್ಯದ ಅದಿರು ಸಂಪತ್ತಿನ ಪಾರುಪತ್ಯವನ್ನು ರೆಡ್ಡಿಗಳ ಕೈಗೆ ನೀಡಿಬಿಟ್ಟ. ಅದೇ ಕಾರಣಕ್ಕೆ ಗಣಿ ಇಲಾಖೆಯನ್ನು ತನ್ನಲ್ಲೇ ಇಟ್ಟುಕೊಂಡ ಸಿ.ಎಂ. ಕಳ್ಳ ರೆಡ್ಡಿ-ರಾಮುಲುಗಳು ಸೂಚಿಸಿದ ಭ್ರಷ್ಟಾತಿಭ್ರಷ್ಟ ಅಧಿಕಾರಿಗಳನ್ನು ಬಳ್ಳಾರಿಗೆ ಹಾಕಿ ದರೋಡೆಗೆ ಅಭಯಹಸ್ತ ನೀಡಿದ.

ಮುಂದೆ ಲೋಕಾಯುಕ್ತರ ತನಿಖೆಯಲ್ಲಿ ಈ ವಂಚಕ ದಂಧೆ ಬಯಲಾದ ಮೇಲೂ ರೆಡ್ಡಿಗಳ ಪರವೇ ಇದ್ದ ಸಿ.ಎಂ. ಬೇಲೀಕೇರಿ ಬಂದರಿನಲ್ಲಿ ಜಪ್ತಿಯಾಗಿದ್ದ ಅಕ್ರಮ ಅದಿರನ್ನು ರಾತ್ರೋರಾತ್ರಿ ಕದ್ದರೂ ಸುಮ್ಮನೇ ಇದ್ದು ಲೂಟಿಯಲ್ಲಿ ಪಾಲು ಪಡೆದ.




ಹೀಗೆ ಬೆಂಗಳೂರು ಸುತ್ತಮುತ್ತಲಿನ ಭೂಮಿ, ಬಳ್ಳಾರಿಯ ಸುತ್ತಮುತ್ತಲಿನ ಅದಿರು ಸಂಪತ್ತನ್ನು ದಿನನಿತ್ಯ ಲೂಟಿ ಹೊಡೆದ ಪರಿಣಾಮವಾಗಿಯೇ ಇವತ್ತು ವರ್ತೂರು ಪ್ರಕಾಶ್ ಎಂಬ ನಿರ್ಲಜ್ಜ ಶಾಸಕನಿಗೆ 50 ಕೋಟಿ ಕೊಟ್ಟು ಖರೀದಿಸಬಲ್ಲ ಶಕ್ತಿ ಬಂದಿದೆ ಯಡ್ಡಿ ಗ್ಯಾಂಗಿಗೆ. ಈಗ ಮತ್ತೆ ಈ ರಾಜ್ಯವನ್ನು ಲೂಟಿ ಮಾಡಿದ ಹಣವನ್ನು ಚೆಲ್ಲಿ ಕಾಂಗ್ರೆಸ್ ಶಾಸಕರನ್ನು ಖರೀದಿಸುತ್ತಿರುವ ಯಡ್ಡಿಕೂಟಕ್ಕೆ ಹಣದಿಂದಲೇ ಚುನಾವಣೆ ಗೆಲ್ಲುವ ಧೈರ್ಯ ಬಂದುಬಿಟ್ಟಿದೆ. ಮತದಾರರ ಅಂತಃಸಾಕ್ಷಿಯನ್ನೇ ಭ್ರಷ್ಟಗೊಳಿಸುವ ಮೂಲಕ ಪ್ರಜಾಪ್ರಭುತ್ವವನ್ನೇ ಕೊಲ್ಲುತ್ತಿರುವ ಈ ಸರ್ಕಾರ ಸ್ವಾತಂತ್ರ್ಯಾನಂತರ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ರಾಜ್ಯ ಸರ್ಕಾರಗಳಲ್ಲಿ ಅತೀ ಜನದ್ರೋಹಿ ಸರ್ಕಾರವೇ ಆಗಿದೆ.

ಇಂತಹ ರಾಜ್ಯದಲ್ಲಿ ನೆರೆಪೀಡಿತ ಜನರಿಗೆ ಪುನರ್ವಸತಿ ಎಂಬುದು ಮಾಯಾಕುದುರೆ ಆಗುತ್ತಿದೆ. ಪರಿ... ಪುನರ್ವಸತಿಯ ಕಾರ್ಯದಲ್ಲೂ ಶಾಸಕರು, ಅಧಿಕಾರಿ... ಸಿಕ್ಕಷ್ಟು ಬಾಚಿಕೊಳ್ಳುತ್ತಿದ್ದಾರೆ.

ಗಣಿಗಳ್ಳರು, ಭೂಗಳ್ಳರು, ವಂಚಕ... ಜನದ್ರೋಹಿಗಳೇ ತುಂಬಿರುವ ಸಚಿವಸಂಪುಟ, ಹತ... ಕೋಟಿಗಳಿಗೆ ತಮ್ಮನ್ನೇ ಮಾರಿಕೊಳ್ಳಬಲ್ಲ ಶಾಸಕ ಸಮ... ಇವರಿಗೆಲ್ಲ ನಾಯಕನಾಗಿ ತನ್ನ ಕುರ್ಚಿ ಉಳಿಸಿಕೊಳ್... ತಾಯ್ನೆಲವನ್ನೇ ಮಾರಾಟಕ್ಕಿಟ್ಟಿರುವ ಸಿ.ಎಂ. ದೊ... ಅಂತೂ ಒಟ್ಟಿನಲ್ಲಿ 'ದೇಶದ ಕಡುಭ್ರಷ್ಟ ರಾಜ್ಯ' ... 'ಮೆಡಲ್' ತರುವ ಮೂಲಕ ರಾಜ್ಯದ ಮಾನ... ರಾಷ್ಟ್ರಮಟ್ಟದಲ್ಲಿ ಹರಾಜು ಹಾಕಿರುವ ಈ ಕಳ್ಳರ ಪ... ಬರಲಿರುವ ಪಂಚಾಯತ್ ಚುನಾವಣೆಗಳಲ್ಲಿ ... ಕಲಿಸಲೇಬೇಕಿದೆ.

ಇಲ್ಲವಾದರೆ ಇಲ್ಲಿ ಮತದಾರರ ಮಾನ... ಹರಾಜಾಗಲಿದೆ ಅಷ್ಟೇ.....



...ತ್ರಿಮಂಡಲವಲ್ಲ, ...ಂತ್ರಿ ಮಂಡಲ

...ಡಿಯೂರಪ್ಪನ ಮಂತ್ರಿಮಂಡಳದ ತುಂಬಾ ಬರೀ ... ಹಿನ್ನೆಲೆಯ ಸಚಿವರೇ ತುಂಬಿದ್ದಾರೆ. ಒಬ್ಬ ...ಗೆ ತೂರಿದರೆ, ಮತ್ತೊಬ್ಬ ರಂಗೋಲಿ ಕೆಳಗೆ ...

...ರಿಯ ಬದ್ಮಾಷ್‌ಗಳೇ ನಾಲ್ಕು ಖಾತೆಗಳಲ್ಲದೇ ...ಷ್ ಅನ್ನು ನಿಯಂತ್ರಿಸುತ್ತಿದ್ದಾರೆ. ತಮ್ಮ ಅದಿರು ...ಸುಗಮ ಮಾಡಿಕೊಳ್ಳಲೆಂದೇ ರಾಜಕೀಯಕ್ಕೆ ...ಡ್ಡಿ ಬ್ರದರ್ಸ್, ರಾಮುಲುಗಳು ದಶಕಕಾಲ ಈ ...ನಿಜ ಸಂಪತ್ತನ್ನು ದೋಚಿದವರು. ಈಗಲೂ ...ತ್ತಲೇ ಇದ್ದಾರೆ. ಶಾಸಕರನ್ನು ಕುರಿಗಳಂತೆ ...ಬಲ್ಲ ಈ ಮನೆಹಾಳರು ಪ್ರಜಾಪ್ರಭುತ್ವಕ್ಕೇ ಕಳಂಕ. ...ರಿಕಾ ಸಚಿವ ಮುರುಗೇಶ್ ನಿರಾಣಿ ಬಂಡವಾಳ ... ಸಮಾವೇಶ ನಡೆಸಿ ಭೂಮಿ ನುಂಗಿದ್ದಲ್ಲದೇ ...ಕ್‌ಬ್ಯಾಕ್ ಅನ್ನೂ ಜೇಬಿಗಿಳಿಸಿದರೆ, ಯುವಜನ ...ಂತ್ರಿ ಡಿ. ಸುಧಾಕರ್ ಸಾರ್ವಜನಿಕ ಬ್ಯಾಂಕೊಂದಕ್ಕೇ ...ಕೋಟಿಗಳನ್ನು ವಂಚಿಸಿ ಸಿಬಿಐ ತನಿಖೆ ಎದುರಿಸು ...ಭೂಪ. ಸಮಾಜ ಕಲ್ಯಾಣ ಸಚಿವನಾಗಿದ್ದಾಗ ...ದಾನಗಳನ್ನೂ ತನ್ನ ಸಂಸ್ಥೆಗಳಿಗೇ ವರ್ಗಾಯಿಸಿದ ...ಟಕ ಜೈಲಿನಲ್ಲಿರಬೇಕಿತ್ತು, ಆದರೆ ಯಡ್ಡಿ ಈ ...ಗೆ ಬಂಧೀಖಾನೆ ಖಾತೆಯನ್ನು ಹೆಚ್ಚುವರಿಯಾಗಿ ...!!

...ಮುಲ್ಲೇ ಜನರನ್ನು ಅಟ್ಟಾಡಿಸಿ ಹೊಡೆಯುವ ...ಬಚ್ಚೇಗೌಡ ಹೊಸಕೋಟೆ ಸುತ್ತಮುತ್ತ ನೂರಾರು ...ನ್ನು ನೆಕ್ಕಿ ನೀರು ಕುಡಿದವ. ಹಿಂದೆ ಮುಜರಾಯಿ ...ದ್ದಾಗ ಜನರಿಗೆ ಗಂಗಾಜಲ ಕುಡಿಸಿ, ವಸತಿ ...ನ್ನು ತನ್ನ ಮನೆ ಆಸ್ತಿಯಂತೆ ಮಾಡಿಕೊಂಡಿದ್ದ ...ಟ್ಟ ಕರ್ನಾಟಕ ಹೌಸಿಂಗ್ ಬೋರ್ಡ್ ಅನ್ನು ...ಂದು ಸಾವಿರಾರು ಎಕರೆ ಭೂಮಿ ಕದ್ದ ಚೋರ. ...ರಿ ನೆಲಗಳ್ಳತನದ ಜೊತೆಗೆ ಬೇಕಾಬಿಟ್ಟಿ ಡೀಮ್ಡ್ ...ರ್ಟಿಗಳನ್ನು ಹುಟ್ಟುಹಾಕಿ ಕೋಟಿ ಕಬಳಿಸಿದ ...ಸಚಿವ ಅರವಿಂದ ಲಿಂಬಾವಳಿ, ಪ್ರಾಥಮಿಕ ...ನ್ನು ಎಕ್ಕಾ ಎಬ್ಬಿಸಿದ ಕಾಗೇರಿ ಮೆಡಿಕಲ್ ...ಗಳ ಸಿಬ್ಬಂದಿ ನೇಮಕಾತಿಯಲ್ಲಿ ಗೋಲ್‌ಮಾಲ್ ...ೈಕೋರ್ಟ್‌ನಿಂದ ಉಗಿಸಿಕೊಂಡ ಮಾಜಿ ಮಂತ್ರಿ ...ದ್ರಗೌಡ....

...ಲೀಸ್ ವರ್ಗಾವಣೆ ದಂಧೆಯಲ್ಲಿ ಯಡ್ಡಿ ಪುತ್ರ ...ಂದ್ರನಿಗೆ ಲೂಟಿ ಮಾಡಲು ಅನುವು ಮಾಡಿ ...ಕರಾವಳಿಯ ಪೊಲೀಸ್ ಠಾಣೆಗಳನ್ನು ಭಜರಂಗಿ ...ಗೆ ಕೊಟ್ಟ, ಗೃಹಸಚಿವ ಆಚಾರ್ಯ ಸೆಕ್ಸ್ ...ನಿಂದಾಗಿ ಮಂತ್ರಿಗಿರಿ ಕಳೆದುಕೊಂಡ ಹರತಾಳು ... ಏನೆಲ್ಲ ಚೇಷ್ಟೆ ಮಾಡಿಯೂ ಅಬಕಾರಿ ಖಾತೆ ...ಯುವ ಅವಕಾಶ ಸಿಕ್ಕಿಗಾಲೆಲ್ಲ ಭಿನ್ನಮತದ ನೆಪದಲ್ಲಿ ...ಕೋಟಿಗಳನ್ನು ಬಾಚುವ ಕಮಂಗಿ ರೇಣುಕಾಚಾರ್ಯ ...ಡೆಯಾದರೆ, ಪಂಚಾಯತ್‌ರಾಜ್ ಇಲಾಖೆಯಲ್ಲಿ ...ತಿಸ್ಸುತ್ತಿರುವ ಜಗದೀಶ್ ಶೆಟ್ಟರ್, ಇದ್ದೂ ...ರುವ ಉದಾಸಿ, ಬೊಮ್ಮಾಯಿ, ಕಾರಜೋಳಗಳು ... ಕಡೆ ಇದ್ದಾರೆ.

...ಗಳೂರನ್ನು ಉತ್ತರ, ದಕ್ಷಿಣ ಎಂದು ಹಂಚಿಕೊಂಡು ...ಟ ನಡೆಸುತ್ತಿರುವ ಆರ್. ಅಶೋಕ್, ...ಕೃಷ್ಣ, ನಾಯ್ಡುಗಳೇ ಯಡ್ಡಿಯ ಪಾಲಿಗೆ ...ದರು.

...ಕಿಹ ಖದೀಮರ ಜೊತೆ, ಅನಧಿಕೃತ ಮಂತ್ರಿ ...ವ ಯಡ್ಡಿಯ ಪುತ್ರ ವಿಜಯೇಂದ್ರನೂ ಇದ್ದಾನೆ. ...ಮಂತ್ರಿಯೇ ಮಹಾನ್ ಭ್ರಷ್ಟನಿರುವಾಗ ಆತನ ...ನಲ್ಲಿ ಮುತ್ತುರತ್ನಗಳನ್ನು ಹುಡುಕಲಾದೀತೇ.

ಯಡ್ಡಿಗೆ ಯಾಕಿಷ್ಟು ಹಠ?

ಅಕ್ಟೋಬರ್ 11ರಂದು ನಡೆದ ವಿಶ್ವಾಸಮತ ಯಾಚನೆಯ ವಿಶೇಷ ಅಧಿವೇಶನದಲ್ಲಿ ದಾಂಧಲೆ ನಡೆಸಿದರೆಂಬ ಆರೋಪ ಹೊರಿಸಿ 15 ಕಾಂಗ್ರೆಸ್ ಶಾಸಕರಿಗೆ ನೋಟಿಸ್ ನೀಡಿರುವ ಒಂದು ಹೊಸ ಬೆಳವಣಿಗೆ ನಡೆದಿದೆಯಲ್ಲವೆ?

ಬಿಜೆಪಿ ಶಾಸಕ ಅಪ್ಪಚ್ಚುರಂಜನ್ ಅಧ್ಯಕ್ಷತೆಯ ಈ ಸಮಿತಿಯು ಬಹುತೇಕ ಬಿಜೆಪಿ ಶಾಸಕರನ್ನೇ ಹೊಂದಿದೆ. ಕರ್ನಾಟಕದಲ್ಲಿ ಈಗ ಸ್ಪೀಕರ್ ಆಗಲಿ, ಸದನ ಸಮಿತಿಯಾಗಲಿ ಇನ್ನೆಷ್ಟು ಮಾತ್ರವೂ ಪಕ್ಷಾತೀತವಾಗಿ ಉಳಿದಿಲ್ಲವೆಂಬುದು ಎಲ್ಲರಿಗೂ ಗೊತ್ತಾಗುತ್ತಿದೆ.....

ಈ ನೋಟೀಸ್‌ನ ಮರ್ಮವೇನು ಎಂದು ನೋಡಿದರೆ ಅಲ್ಲೂ ಯಡ್ಡಿಯ ಕೀಳು ರಾಜಕೀಯ ತಂತ್ರವೇ-ಕಾಣುತ್ತಿದೆ.



ನಾಳೆ ಹೈಕೋರ್ಟ್ ತೀರ್ಪು ಪಕ್ಷೇತರ ಹಾಗೂ ಬಿಜೆಪಿ ಭಿನ್ನಮತೀಯರ ಪರವಾಗಿ ಬಂದುಬಿಟ್ಟರೆ ಆಗಿನ ಪರಿಸ್ಥಿತಿ ಎದುರಿಸಿ ಬಿಕ್ಕಟ್ಟಿನಿಂದ ಪಾರಾಗಲು ಈ ಹೊಸ ತಂತ್ರ ರೂಪಿಸಿರುವುದು ಸ್ಪಷ್ಟ.

ಅಂದರೆ ಶತಾಯಗತಾಯ ಅಧಿಕಾರ ಬಿಟ್ಟು ಕೆಳಗಿಳಿಯಲೇ ಬಾರದೆಂದು ಯಡ್ಡಿ ನಿರ್ಧರಿಸಿದಂತಿದೆ. ತನ್ನದೇ ಪಕ್ಷದ ಶಾಸಕರು ಬಿಟ್ಟುಹೋದರೂ, ಭಿನ್ನಮತವೆಂಬುದು ಬೆನ್ನು ಬಿಡದ ಭೂತವಾಗಿದ್ದರೂ ಯಡ್ಡಿಯ ಭಂಡತನ ಮುಂದುವರೆದೇ ಇದೆ. ಇದಲ್ಲದೆ ವಿರೋಧ ಪಕ್ಷಗಳ ನಾಯಕರಾಗಿರುವ ದೇಶಪಾಂಡೆ ಹಾಗೂ ಕುಮಾರಸ್ವಾಮಿಯವರ ಆಸ್ತಿಪಾಸ್ತಿಗಳ ಬಗ್ಗೆ ತನಿಖೆ ಮಾಡಿಸುವುದಾಗಿ ಯಡ್ಡಿ ಬೆದರಿಕೆ ಹಾಕುತ್ತಿದ್ದಾರೆ.

ಇದೊಂಥರಾ ಹೊಸ ವರಸೆ!

ಅಂದರೆ ಏನೇ ಆದರೂ ಅಧಿಕಾರ ಬಿಡಕೂಡದೆಂಬ ಹಠ.


ಕೇವಲ ಒಂದು ತಿಂಗಳ ಹಿಂದೆ ವಿಧಾನಸಭೆ ವಿಸರ್ಜಿಸಿ ಹೊಸ ಜನಾದೇಶ ಪಡೆಯುವ ಬಗ್ಗೆಯೂ ಯೋಚಿಸುತ್ತಿದ್ದ ಯಡ್ಡಿ ಈಗ ಏಕಾಏಕಿ ಅಧಿಕಾರ ಬಿಡಲೇಕೂಡದೆಂದು ಹಠ ತೊಡಲು ಅನೇಕ ಕಾರಣಗಳಿವೆ.

ಬಹಳ ಮುಖ್ಯವಾಗಿ ಯಡ್ಡಿ ಕಳೆದ ಎರಡೂವರೆ ವರ್ಷದಲ್ಲಿ ನಡೆಸಿರುವ ಅಕ್ರಮಗಳನ್ನು ಮುಚ್ಚಿಹಾಕಲು ರಿಪೇರಿ ಮಾಡಿ ನಾಳೆ ಯಾರ ಕೈಗೂ ಸಿಕ್ಕಿಬೀಳದಂತೆ ಪಾರಾಗಲು ಈ ತಕ್ಷಣದಲ್ಲಿ ಇನ್ನು ಕೆಲವು ತಿಂಗಳು ಅಧಿಕಾರವನ್ನು ಉಳಿಸಿಕೊಳ್ಳಲೇಬೇಕಿದೆ.

ಉದಾಹರಣೆಗೆ ನಾಗರಬಾವಿ ಜಮೀನಿನ ಡಿನೋಟಿಫಿಕೇಷನ್ ಹಗರಣವನ್ನೇ ನೋಡಿ. ಹಗಲುದರೋಡೆಕೋರ ವಿ. ಸೋಮಣ್ಣನ ಎಂಜಲು ಕಾಸಿಗೆ ಆಸೆಪಟ್ಟು ಸುಪ್ರೀಂಕೋರ್ಟ್‌ನ ಆದೇಶವನ್ನೇ ಉಲ್ಲಂಘಿಸಿ ಐದೂವರೆ ಎಕರೆ ಭೂಮಿಯನ್ನು ಯಡ್ಡಿ ಡಿನೋಟಿಫೈ ಮಾಡಿ ಸಿಕ್ಕಿಬಿದ್ದಿದ್ದರು.

ಯಡ್ಡಿ ಜೈಲಿಗೆ ಹೋಗಲು ಇದೊಂದೇ ಹಗರಣ ಸಾಕಿತ್ತು. ಆದರೆ ಈಗ ಭಯಗೊಂಡು ತನ್ನದೇ ಆದೇಶವನ್ನು ಯಡ್ಡಿ ರದ್ದು ಮಾಡಿದ್ದಾರೆ. ಇಂತಹ ನೂರಾರು ಭೂಹಗರಣಗಳನ್ನು ಯಡ್ಡಿ ಮಾಡಿ ಕೋಟ್ಯಂತರ ರೂಪಾಯಿ ಲೂಟಿ ಹೊಡೆದಿದ್ದಾರೆ. ಮಾಲೂರಿನ ಖದೀಮ ಕಳ್ಳ ಕೃಷ್ಣಯ್ಯ ಶೆಟ್ಟಿ ಹೌಸಿಂಗ್ ಬೋರ್ಡ್‌ನಲ್ಲಿ ಕದ್ದಿರುವುದರಲ್ಲಿ ಯಡ್ಡಿ ಪಾಲಿನ ತನಿಖೆಯಾದರೂ ಯಡ್ಡಿ ಮತ್ತೆ ತಲೆ ಎತ್ತಲಾಗುವುದಿಲ್ಲ, ಇದಲ್ಲದೆ ವಿದ್ಯುತ್ ನಿಗಮದಲ್ಲಿನ ಕಲ್ಲಿದ್ದಲು ಖರೀದಿ ಹಗರಣ, ಗಣಿ ದಂಧೆಯ ಡೀಲ್‌ಗಳೆಲ್ಲಾ ಇವತ್ತಲ್ಲಾ ನಾಳೆ ಯಡ್ಡಿಯ ಕತ್ತಿಗೆ ಉರುಳಾಗಬಹುದು. ಹಾಗಾಗಿ ಹೇಗಾದರೂ ಮಾಡಿ ಇನ್ನೊಂದಿಷ್ಟು ದಿನ ಅಧಿಕಾರ ಉಳಿಸಿಕೊಂಡರೆ ಹಾಲಿ ಹಗರಣಗಳ ತಿಪ್ಪೆ ಸಾರಿಸಿ ಪಾರಾಗಿಬಿಡಬಹುದೆಂಬುದೇ ಯಡ್ಡಿಯ ಪ್ಲಾನ್.

ಈ ನಡುವೆ ಬಿಜೆಪಿ ಸರ್ಕಾರದ ಬಗ್ಗೆ ಜನಸಾಮಾನ್ಯರಲ್ಲಿ ಅದೆಷ್ಟು ಅಸಹ್ಯದ ಭಾವನೆ ಬೆಳೆಯುತ್ತಿದೆಯೆಂದರೆ ಹೊಸ ಚುನಾವಣೆಯ ಬಗ್ಗೆ ಯಡ್ಡಿಗೆ ಧೈರ್ಯ ಉಡುಗಿ ಹೋಗಿದೆ.



50 ಸೀಟ್ ಅಷ್ಟೇ ಗ್ಯಾರಂಟಿ

ಬಿಜೆಪಿಗಳು ಇತ್ತೀಚೆಗೆ ಇಂಟಲಿಜೆನ್ಸ್ ವಿಭಾಗದ ಮೂಲಕ ರಾಜ್ಯಾದ್ಯಂತ ಒಂದು ಸಮೀಕ್ಷೆ ಮಾಡಿಸಿದ್ದಾರೆ. ಅದರ ಪ್ರಕಾರ ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆದರೆ ಬಿಜೆಪಿ 50 ಸೀಟ್ ಮಾತ್ರ ಗೆಲ್ಲಬಹುದೆಂದು ಆ ವರದಿ ಹೇಳಿದೆ. ಯಡ್ಡಿ ಅಧಿಕಾರಕ್ಕೆ ಅಂಟಿ ಕೂರಲು ಇದೂ ಒಂದು ಪ್ರಬಲ ಕಾರಣವಾಗಿದೆ. ಈಗ ವಿಧಾನಸಭೆ ವಿಸರ್ಜಿಸಿದರೆ ಹೇಗೂ ನಾಳೆ ಮತ್ತೆ ಗೆದ್ದು ಸಿಎಂ ಆಗುವ ಸಾಧ್ಯತೆಯೇ ಇಲ್ಲದಿರುವಾಗ ಈಗ ಕೈಗೆ ಸಿಕ್ಕಿರುವ ಅಧಿಕಾರವನ್ನೇ ಉಳಿಸಿಕೊಂಡರೆ ಲೇಸೆಂಬ ತರ್ಕ ಯಡ್ಡಿಯದ್ದು. ಹಾಗಾಗಿ ಸ್ಪೀಕರ್ ಆದಿಯಾಗಿ ಪ್ರತಿಯೊಂದನ್ನು ತನ್ನ ಅಧಿಕಾರ ಲಾಲಸೆಗೆ ಯಡ್ಡಿ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಪ್ರತಿ ಎಮ್ಮೆಲ್ಲೆಗೆ 50 ಕೋಟಿ
50 ಕೋಟಿ+ಮಂತ್ರಿಗಿರಿ=70 ಕೋಟಿ+ಬಿಜೆಪಿ ಟಿಕೆಟ್
ಪ್ರಜಾತಂತ್ರದ ನಿರ್ಲಜ್ಜ ಹತ್ಯಾಕಾಂಡ

ಆಪರೇಷನ್ ಕಮಲ ಭಾಗ:3

ಎಮ್ಮೆಲ್ಲೆ ಒಬ್ಬನ ಬೆಲೆ ಕನಿಷ್ಠ ಐವತ್ತು ಕೋಟಿ!


ಇನ್ನೂ ಚೌಕಾಶಿಗಿಳಿದರೆ ಜೊತೆಗೆ ಮಂತ್ರಿಗಿರಿ!

ಬೇಕು ಅಂದರೆ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ಟಿಗೂ ರೆಡಿ!

ಅದು ಕ್ಯಾಷ್ ಮೂಲಕ!


ಈ ಯಾವುದಕ್ಕೂ ಜಗ್ಗದೇ ಇನ್ನೂ ಮೀನ ಮೇಷ ಎಣಿಸುತ್ತಾರೆಂದರೆ ಎಷ್ಟತ್ತು ಕೋಟಿ ಬೇಕಾ?

ಇದು 'ಆಪರೇಷನ್ ಕಮಲ'ದ ಮೂರನೇ ಸುತ್ತಿನ ಎಮ್ಮೆಲ್ಲೆಗಳ ಖರೀದಿಯ ಧಾರಣೆಗಳ ಲೇಟೆಸ್ಟ್ ಪಟ್ಟಿ. ಪಾಪ ಚನ್ನಪಟ್ಟಣದ ಗುಗ್ಗು ಶಾಸಕ ಅಶ್ವತ್ಥ ಕೇವಲ 35 ಕೋಟಿಗೇ ಸುಸ್ತು ಬಿದ್ದು ಬಕರಿಗೊಂಡವನು ಈಗ ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾನಂತೆ. ಇನ್ನೊಂದು ಚೂರು ತಾಳ್ಮೆವಹಿಸಿ ಚೌಕಾಶಿಗಿಳಿದಿದ್ದರೆ ಸಲೀಸಾಗಿ ಐವತ್ತು ಕೋಟಿ ಬರುತ್ತಿತ್ತೇನೋ. ಹುಶಾರಾದ ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಪೂರ್ತಿ ಐವತ್ತು ಕೋಟಿ ಬಂದನಂತರವೇ ಬಿಜೆಪಿ ಸಂಸದ ಜಿ.ಎಂ. ಸಿದ್ದೇಶ್ ಮತ್ತು ಎಮ್ಮೆಲ್ಸಿ ತಿಪ್ಪಾರೆಡ್ಡಿಯ ಮುಂದೆ ಕುರಿಯಂತೆ ಅಡ್ಡಬಿದ್ದು ತನ್ನ ರಾಜೀನಾಮೆ ಪತ್ರಕ್ಕೆ ಸಹಿ ಹಾಕಿದನಂತೆ!



ಸುರೇಶ್‌ಬಾಬು

ಮೂರನೇ ಸುತ್ತಿನ 'ಆಪರೇಷನ್ ಕಮಲ' ಬಹುಶಃ ಭಾರತದ ಇತಿಹಾಸದಲ್ಲೇ ಅನಿಷ್ಟ ಅಧ್ಯಾಯವೊಂದಕ್ಕೆ ಕಾರಣವಾಗಲಿದೆ. ಹನ್ನೊಂದು ಮಂದಿ ಅತೃಪ್ತ ಶಾಸಕರು ಮತ್ತು ಐವರು ಪಕ್ಷೇತರರ ಅನರ್ಹತೆಯ ಪ್ರಶ್ನೆ ಇದೇ ಅಕ್ಟೋಬರ್ 22ಕ್ಕೇನಾದರೂ ನಿಕ್ಕಿಯಾಯಿತೆಂದರೆ ಐನೂರಲ್ಲ ಸಾವಿರ ಕೋಟಿ ಸುರಿದಾದರೂ ಜೆಡಿಎಸ್-ಕಾಂಗ್ರೆಸ್ ಶಾಸಕರನ್ನು ಖರೀದಿಸಲು ಬಿಜೆಪಿ ಅಣಿಯಾಗಿದೆ. ಕಾಂಗ್ರೆಸ್-ಜೆಡಿಎಸ್‌ನ ಚಂಚಲ ಶಾಸಕರಿಗಾಗಿ ಶೋಭಾ, ಕಟ್ಟಾ, ಅಶೋಕ್, ಶ್ರೀರಾಮುಲು, ಕರುಣಾಕರ ರೆಡ್ಡಿ, ಸಂಸದ ಜಿ.ಎಂ. ಸಿದ್ದೇಶ್, ಸೋಮಣ್ಣ ಇತ್ಯಾದಿ ದಜನ್ನಿನಷ್ಟು ಮಂತ್ರಿ-ಸಂಸದರು ಗಾಳ ಹಾಕಿ ಕೂತಿದ್ದಾರೆ.

ಬಹುಶಃ ರೇಟು ಪಕ್ಕಾ ಆಗಿದ್ದರೆ ಈ ಹೊತ್ತಿಗಾಗಲೇ ಕೆ.ಆರ್. ಪೇಟೆಯ ಕಾಂಗ್ರೆಸ್ ಶಾಸಕ ಕೆ.ಬಿ. ಚಂದ್ರಶೇಖರ್ ತಮ್ಮ ಎಮ್ಮೆಲೆಗಿರಿಯನ್ನೇ ಮಾರಿಕೊಂಡಾಗಿರುತ್ತಿತ್ತು. ಅಕ್ಟೋಬರ್ 18ರ ಬೆಳಗ್ಗೆ ಮುಖ್ಯಮಂತ್ರಿ ಯಡ್ಡಿ ಮೈಸೂರಿನಲ್ಲಿ ಕೆ.ಆರ್.ಎಸ್. ಆಣೆಕಟ್ಟೆಗೆ ಬಂದು ಕಾವೇರಿಗೆ ಬಾಗಿನ ಬಿಡಬೇಕಿತ್ತಲ್ಲ; ಆ ಕಾರ್ಯಕ್ರಮಕ್ಕೆ ಕಾಂಗ್ರೆಸ್ಸಿನ ಯವೊಬ್ಬ ಶಾಸಕರೂ ಹೋಗಕೂಡದೆಂದು ಸ್ವತಃ ವಿರೋಧಿ ನಾಯಕ ಸಿದ್ದರಾಮಯ್ಯನವರೇ ತಮ್ಮ ಎಲ್ಲಾ ಶಾಸಕರಿಗೂ ಫೋನ್ ಮಾಡಿ ತಾಕೀತು ಮಾಡಿದ್ದರು. ಯಾರೇ ಕಾಂಗ್ರೆಸ್ ಶಾಸಕ ಯಡ್ಡಿಯ ಕೈಗೆ ಸಿಕ್ಕನೆಂದರೆ ಏನಾಗುತ್ತದೆ ಎಂಬುದನ್ನು ಲೆಕ್ಕ ಹಾಕಿಯೇ ಸಿದ್ದು ಈ ಥರದ ಕ್ರಮಕ್ಕೆ ಮುಂದಾಗಿದ್ದರು. ಅಷ್ಟೇ ಏಕೆ, ಜೆಡಿಎಸ್ ಅಧಿಪತಿ ಕುಮಾರಸ್ವಾಮಿ ಕೂಡ ಕೆ.ಆರ್.ಎಸ್. ಅಥವಾ ದಸರಾ ಕಾರ್ಯಕ್ರಮಕ್ಕೆ ತಮ್ಮ ಯಾರೇ ಶಾಸಕರು ಹೋಗಬಾರದೆಂದೇ ಈಗಲ್ಟನ್ ರೆಸಾರ್ಟಿನಲ್ಲಿ ಕೂಡಿಟ್ಟುಕೊಂಡಾಗಿತ್ತು. ಅದ್ಯಾವ ಚಮತ್ಕಾರವೋ ಗೊತ್ತಿಲ್ಲ 18ರ ಬೆಳಗ್ಗೆ ಕಾವೇರಿಗೆ ಮುಖ್ಯಮಂತ್ರಿ ಯಡ್ಡಿ ಬಾಗಿನ ಬಿಡುತ್ತಿದ್ದರೆ ಪಕ್ಕದಲ್ಲೇ ಕೆ.ಆರ್. ಪೇಟೆಯ ಖದೀಮ ಚಂದ್ರಶೇಖರ್ ನಿಂತಿದ್ದ. ವೇದಿಕೆಯಲ್ಲಿ ಮುಖ್ಯಮಂತ್ರಿಯನ್ನು ವಾಚಾಮಗೋಚರ ಹೊಗಳಿಬಿಟ್ಟ. ಇದನ್ನು ಯಥಾವತ್ತಾಗಿ ಸುವರ್ಣ ಟಿವಿ ಬಿತ್ತರಿಸಿತ್ತು. ನೋಡಿದ್ದೇ ಕಂಗಾಲಾದ ಸಿದ್ದು 'ಏನಯ್ಯಾ ಇದು ಅನ್ಯಾಯ...?' ಎಂದು ಚಂದ್ರಶೇಖರನನ್ನು ಪ್ರಶ್ನಿಸಿದರೇ ಅಂಥಾದ್ದೇನೂ ಇಲ್ಲಣ್ಣ, ನಮ್ಮ ಕ್ಷೇತ್ರದ ಅಭಿವೃದ್ಧಿಗೆ ದುಡ್ಡು ಕೊಡ್ತೀನಿ ಅಂದ್ರು ಅದಕ್ಕೇ ಹೋಗಿದ್ದೆ' ಎಂದು ಬಿಟ್ಟ ಕೆ.ಬಿ. ಚಂದ್ರಶೇಖರ್! ಅಲ್ಲಿಗೆ ಕಾಂಗ್ರೆಸ್ ಪಾಳಯದ ಒಂದು ಕುರಿ ಹಳ್ಳಕ್ಕೆ ಬಿತ್ತೆಂಬುದು ಸಿದ್ದುಗೆ ಮನದಟ್ಟಾಗಿತ್ತು. ಹಕೀಕತ್ತೇನೆಂದರೆ ಅಕ್ಟೋಬರ್ 17ರ ರಾತ್ರಿಯೇ ಯಡ್ಡಿ ಮೈಸೂರಿಗೆ ಬಂದು ಕೆ.ಆರ್. ಪೇಟೆ ಶಾಸಕ ಚಂದ್ರಶೇಖರ್‌ನನ್ನು ಕರೆಸಿಕೊಂಡು ಡೀಲು ಕುದುರಿಸಿದ್ದರು. ಯಡ್ಡಿ ಜೊತೆ ಮಂತ್ರಿಗಳಾದ ಅಶೋಕ್ ಮತ್ತು ಬೊಮ್ಮಾಯಿ ಕೂಡ ಮೈಸೂರಿಗೆ ಬಂದಿದ್ದರು. ಮುಖ್ಯಮಂತ್ರಿಯೇ ಫೋನ್ ಮಾಡಿ ಕರೆದ ಮೇಲೆ ಚಂದ್ರಶೇಖರ್ ಹೋಗದೇ ಇರುತ್ತಾನಾ?



ಚಂದ್ರಶೇಖರ್

ಮೈಸೂರಿನ ಗುಪ್ತ ಸ್ಥಳವೊಂದರಲ್ಲಿ ಅಶೋಕ್ ಮತ್ತು ಬೊಮ್ಮಾಯಿ ಜೊತೆ ಚಂದ್ರಶೇಖರ್ ಜೊತೆ ಡೀಲಿಗಿಳಿದ ಯಡ್ಡಿ ಮೊದಲು ಐವತ್ತು ಕೋಟಿಯ ಆಫರ್ ಇಟ್ಟರಂತೆ. ಕ್ಷೇತ್ರದ ಅಭಿವೃದ್ಧಿಗೆ 138 ಕೋಟಿಯ ಫಂಡು ಮತ್ತು ತನಗೆ 100 ಕೋಟಿಯ ಕ್ಯಾಷು ಕೊಟ್ಟರಷ್ಟೇ ತಾನು ಎಮ್ಮೆಲ್ಲೆಗಿರಿ ತೊರೆಯುತ್ತೇನೆಂದು ಚಂದ್ರಶೇಖರ್ ಪಟ್ಟು ಹಾಕಿದನಂತೆ. ಕೊನೆಗದು ಎಷ್ಟು ಕೋಟಿಗೆ ಡೀಲಾಯಿತೋ. ಅಡ್ವಾನ್ಸಾಗಿ ಐದು ಕೋಟಿ ಕೊಟ್ಟ ಅಶೋಕ್ ಕೋರ್ಟ್ ತೀರ್ಪೇನಾದರೂ ತಮಗೆ ವ್ಯತಿರಿಕ್ತವಾಗಿ ಬಂತೆಂದರೆ ತಕ್ಷಣವೇ ರಾಜೀನಾಮೆಗೆ ಅಣಿಯಾಗಿರುವಂತೆ ಒಪ್ಪಿಸಿಯೇ ಕಳಿಸಿಕೊಟ್ಟರಂತೆ. ಮರುದಿನ ಬೆಳಗ್ಗೆ ಮುಖ್ಯಮಂತ್ರಿ ಪಕ್ಕದಲ್ಲೇ ನಿಂತು ಫೋಜು ಕೊಡುತ್ತಿದ್ದ ಚಂದ್ರಶೇಖರ್ ಬಿಜೆಪಿ ಶಾಸಕರನ್ನೂ ಮೀರಿಸಿ ಯಡ್ಡಿಯನ್ನು ಹೊಗಳಿಬಿಟ್ಟ.


ರಾಜಶೇಖರ್‌ಪಾಟೀಲ್

ಅಲ್ಲಿಗೆ ಚಂದ್ರಶೇಖರ್ ಖರೀದಿಯಾಗಿದ್ದಾನೆಂಬ ಬಗ್ಗೆ ಸಿದ್ದುಗೆ ಯಾವುದೇ ಅನುಮಾನಗಳಿರಲಿಲ್ಲ. ಒಂದಷ್ಟು ಅಡ್ವಾನ್ಸ್ ಕೊಟ್ಟು ಆಯಾ ಪಕ್ಷದಲ್ಲೇ ತಮ್ಮ ಏಜೆಂಟನಂತೆ ಇರಿಸಿ ಸಮಯ ಬಂದಾಗ ರಾಜೀನಾಮೆ ಕೊಡಿಸುವುದು ಒಂದು ತಂತ್ರವಾದರೆ, ಮತ್ತೊಂದು ಆಗಿಂದಾಗ್ಗೆ ರಾಜೀನಾಮೆ ಕೊಡಿಸಿ ಮರ್ಮಾಘಾತ ಮಾಡಿಸುವುದು. ಇದಕ್ಕೆ ತಾಜಾ ಉದಾಹರಣೆಯಂತಿರುವವನು ಜಗಳೂರಿನ ಎಸ್.ವಿ. ರಾಮಚಂದ್ರ.


ಈತ ಶಾಮನೂರು ಶಿವಶಂಕರಪ್ಪನ ಬಲಗೈ ಬಂಟನಂತಿದ್ದ. ಶಾಮನೂರರೇ ಕಾಂಗ್ರೆಸ್ ಟಿಕೆಟ್ ಕೊಡಿಸಿ ದುಡ್ಡೂಕಾಸು ಹಾಕಿ ಜಗಳೂರಿನಿಂದ ಗೆಲ್ಲಿಸಿಕೊಂಡಿದ್ದರು. ಅಕ್ಟೋಬರ್ 17ರ ವಿಜಯದಶಮಿಯ ರಾತ್ರಿ ತನಕ ಕಾಂಗ್ರೆಸ್ ಶಾಸಕರು ಬೀಡುಬಿಟ್ಟಿದ್ದ ಲ್ಯಾವೆಲ್ಲಿ ರಸ್ತೆಯ ಚಾನ್ಸರಿ ಹೋಟೇಲಿನಲ್ಲಿ ಮಿಕ್ಕೆಲ್ಲಾ ಶಾಸಕರಿಗೆ ವಿಸ್ಕಿ ಹುಯ್ದುಕೊಂಡಿದ್ದ ರಾಮಚಂದ್ರ ಸೋಮವಾರ ಬೆಳಗ್ಗೆ ಹಬ್ಬಕ್ಕೆಂದು ಹೋಗಿಬರ್ತೀನಿ ಎಂದು ಶಾಮನೂರರ ಬಳಿಯೇ ಅನುಮತಿ ಪಡೆದಿದ್ದ. ಮಿಕ್ಕೆಲ್ಲಾ ಶಾಸಕರ ಗ್ಲಾಸಿಗೆ ವಿಸ್ಕಿ ಹುಯ್ಯುತ್ತಿದ್ದವನು ತಾನು ಮಾತ್ರ ಕುಡಿಯದೇ ಹುಷಾರಾಗಿದ್ದಾಗಲೇ ಕಾಂಗ್ರೆಸ್ ನಾಯಕರು ಎಚ್ಚರಿಕೆ ವಹಿಸಬೇಕಿತ್ತು. ಧಣಿ ಶಾಮನೂರರನ್ನೇ ಯಾಮಾರಿಸಿದ ರಾಮಚಂದ್ರ ಅಕ್ಟೋಬರ್ 18ರ ಸೋಮವಾರ ದಾವಣಗೆರೆಗೆ ಬಂದದ್ದೇ ತಡ ಸಂಸದ ಜಿ.ಎಂ. ಸಿದ್ದೇಶ್ ತಿಪ್ಪಾರೆಡ್ಡಿಯ ಮನೆಗೊಯ್ದು ಡೀಲು ಕುದುರಿಸಿದ್ದಾರೆ. ಸದ್ಯ ಬಿಜೆಪಿಆಪ್ತರೇ ಬಾಯಿಬಿಟ್ಟಂತೆ ರಾಮಚಂದ್ರ 50 ಕೋಟಿಗೆ ಬಕರಿಯಾಗಿದ್ದಾನೆ.


ಬಸವರಾಜನ್

ಈ 50 ಕೋಟಿ ಉತ್ಪ್ರೇಕ್ಷೆ ಎಂದಿಟ್ಟುಕೊಂಡರೂ ಕನಿಷ್ಠ 25 ಕೋಟಿಯಾದರೂ ಗಿಟ್ಟಿರಲೇ ಬೇಕು. ಏಕೆಂದರೆ ಇಲ್ಲಿಗೆ ಆರು ತಿಂಗಳ ಹಿಂದೆಯೇ ರಾಮಚಂದ್ರ ಆಪರೇಷನ್ ಕಮಲಕ್ಕೆ ಬಲಿಯಾದ ಸುದ್ದಿಯಿತ್ತು. ಆವತ್ತು ಅಡ್ವಾನ್ಸಾಗಿ ಶ್ರೀರಾಮುಲು ಕೈಯಿಂದ ಒಂದು ಕೋಟಿ ಪಡಕೊಂಡು ಉಳಿಕೆ ಕಾಸು ಕೊಟ್ಟರೆ ರಾಜೀನಾಮೆ ಬರೆದು ಕೊಡ್ತೀನಿ ಎಂದು ರಾಮಚಂದ್ರ ರೆಡಿಯಾಗಿದ್ದ. ಆ ಹೊತ್ತಿಗಾಗಲೇ ಬಹುಮತಕ್ಕೆ ಅಗತ್ಯವಿದ್ದಷ್ಟು ಶಾಸಕರನ್ನು ಬಿಜೆಪಿ ಖರೀದಿಸಿ ಆಗಿತ್ತಾದ್ದರಿಂದ ಶ್ರೀರಾಮುಲು 'ಈಗ ಬೇಡ ನಾನು ಹೇಳಿದಾಗ ಬರುವಿಯಂತೆ' ಎಂದು ಹಾಗೇ ತಡೆದಿರಿಸಿದ್ದು ಬಹುಶಃ ಈಗ ಕಾರ್ಯಗತಗೊಂಡಿದೆ.

ಐದು ವರ್ಷಗಳ ಕಾಲ ಕ್ಯಾಬಿನೆಟ್ ಮಂತ್ರಿಯಾಗಿ ಫಲವತ್ತಾದ ಖಾತೆ ಇದ್ದಾಗ್ಯೂ 25 ಕೋಟಿ ದೋಚುವುದು ಕಷ್ಟವಾಗಿರುವಾಗ ಉಳಿಕೆ ಎರಡು ವರ್ಷಗಳ ಎಮ್ಮೆಲ್ಲೇಗಿರಿ 25 ಕೋಟಿಯ ಮುಂದೆ ಯಾವ ಲೆಕ್ಕ?

ವಿರೋಧ ಪಕ್ಷದ ಯಾರೇ ಶಾಸಕನೊಬ್ಬ ತನ್ನ 5 ವರ್ಷದ ಎಮ್ಮೆಲ್ಲೇಗಿರಿಯಲ್ಲಿ ಕನಿಷ್ಠ 5 ಕೋಟಿ ಕೂಡ ಸಂಪಾದಿಸುವುದು ದುಸ್ತರವಾಗಿರುವಾಗ 25 ಕೋಟಿ ಕೊಡುತ್ತೇನೆಂದರೆ ಬೇಡ ಅನ್ನುವವರ್‍ಯಾರು? ಇಂಥ ಹಪಾಹಪಿಯ ಶಾಸಕರನ್ನೇ ಆಯ್ದು ಬಿಜೆಪಿ ಗಾಳ ಹಾಕುತ್ತಿದೆ. ಅರಕಲಗೂಡು ಕಾಂಗ್ರೆಸ್ ಶಾಸಕ ಎ. ಮಂಜು ಮತ್ತು ಕುಣಿಗಲ್‌ನ ರಾಮಸ್ವಾಮಿಗೌಡರಿಗೆ ಶೋಭಾಕರಂದ್ಲಾಜೆ ಗಾಳ ಹಾಕಿ ಕೂತಿದ್ದಾರೆ ಎಂಬ ರೂಮರ್ ಇತ್ತಾದರೂ ನಂತರ ಅದು ಸುಳ್ಳಾಯಿತು. ಕೆ.ಆರ್. ಪೇಟೆಯ ಕೆ.ಬಿ. ಚಂದ್ರಶೇಖರ್ ಮತ್ತು ಚಾಮರಾಜನಗರದ ಶಾಸಕ ಪುಟ್ಟರಂಗಶೆಟ್ಟಿಗಾಗಿ ಅಶೋಕ್ ಬಲೆ ಬೀಸಿದ್ದಾರೆ. ಏನೇ ಲಗಾಟಿ ಹೊಡೆದರೂ ಮುಂಬರುವ ಚುನಾವಣೆಯಲ್ಲಿ ಕೆ.ಆರ್. ಪೇಟೆಯಿಂದ ಚಂದ್ರಶೇಖರ್ ಗೆಲ್ಲಲಾರ. ಮಾಜಿ ಸ್ಪೀಕರ್ ಕೃಷ್ಣರ ವಿರುದ್ಧ ಎಷ್ಟು ಕೋಟಿ ಸುರಿದರೂ ಜನ ಆತನ ಕೈ ಹಿಡಿಯುವುದು ಕಷ್ಟ. ... ಬಂದಷ್ಟು ಗುಂಜಿಕೊಂಡು ಪರಾರಿಯ... ಚಂದ್ರಶೇಖರ್ ತುದಿಗಾಲಲ್ಲಿ ನಿಂ...


ಪುಟ್ಟರಂಗಶೆಟ್ಟಿ

ಚಾಮರಾಜನಗರದ ಪುಟ್ಟ...ಶೆಟ್ಟಿ ವಾಟಾಳ್ ವಿರುದ್ಧ ಗ... ಒಂದು ಪವಾಡ. ಕಾಂಗ್ರೆಸ್ ಅಧಿ... ಬಂದಾಗೆಲ್ಲ ಚಾಮರಾಜನಗರದ... ವಾಟಾಳ್‌ರನ್ನು ಗೆಲ್ಲಿಸಿಕೊ... ಬಂದಿದ್ದಾರೆ. ಹೇಗೂ ಮುಂಬ... ಚುನಾವಣೆಯಲ್ಲಿ ತಾನು ಗೆಲ್ಲಲಾರೆ ... ಪುಟ್ಟರಂಗಶೆಟ್ಟಿಗೆ ಗೊತ್ತಾಗಿ ಹೋಗಿದೆ. 25 ಕೋಟಿ ಕೊಟ್ಟರೂ ಸಾಕು ತನ್ನಂತಾನೇ ಮಾರಿಕೊ... ಶೆಟ್ಟಿ ಅಣಿಯಾಗಿದ್ದಾನೆ. ದುರಂತವೆಂದರೆ ಸಿದ್ಧಗಂಗೆ ... ಸುತ್ತೂರು ಸ್ವಾಮಿಗಳಂಥವರೇ ಆಪರೇಷನ್ ಕಮ... ಕೈಜೋಡಿಸಿರುವುದು!

ಹೆಗ್ಗಡದೇವನಕೋಟೆಯ ಎ... ಬೀಚನಹಳ್ಳಿ ಚಿಕ್ಕಣ್ಣನ್ನು ಕರೆಸಿಕೊಂಡು ... ಜೊತೆ ಕೈ ಜೋಡಿಸುವಂತೆ ಸುತ್ತೂ... ಸ್ವಾಮಿಗಳೇ ಡೀಲು ಕುದುರಿಸುತ್ತಾರೆ... ಎಂಥಾ ಅಸಹ್ಯವಲ್ಲವೆ? ಹಾಗೇ ಚಿಕ್ಕ... ಕನ ಹಳ್ಳಿಯ ಜೆಡಿಎಸ್ ಶಾಸಕ ಸು... ಬಾಬುಗೆ ಸಂಸದ ಬಸವರಾಜು ... ಮಂತ್ರಿ ಸೋಮಣ್ಣ ಸೇರಿಕೊಂಡು ... ಗಂಗೆಯ ಸ್ವಾಮಿಗಳಿಂದ ಫೋನ್ ಮ... ದ್ದಾರಂತೆ. ಅದು 25 ಕೋಟಿಯ ... ರೆಡಿ ಮಾಡಿಕೊಂಡೇ ಸೋಮಣ್ಣ ದ... ನಿಂತಿದ್ದಾನೆ. ಮತ್ತೊಂದೆಡೆ ಕಟ್ಟಾ ನ... ಬಂಗಾರಪೇಟೆ ಎಮ್ಮೆಲ್ಲೇ ನಾರಾಯಣ... ಮತ್ತು ದೇವನಹಳ್ಳಿ ಶಾಸಕ ವೆಂಕಟಸ್ವಾಮಿಯನ್ನು ಹಿ... ಹಾಕಲು ಬೋನು ರೆಡಿಮಾಡಿಟ್ಟಿದ್ದಾನೆ. ಮೈಪರಚಿಕೊಂಡರೂ ತಾನು ಈ ಬಾರಿ ಗೆಲ್... ಎಂಬುದು ವೆಂಕಟಸ್ವಾಮಿಗೆ ನಿಕ್ಕಿಯಾಗಿದೆ. ಇನ್... ವರ್ಷದಲ್ಲಿ ಎಷ್ಟೇ ಗೆಬರಿದರೂ 1 ಕೋಟಿ ಹುಟ್ಟುವುದಿಲ್ಲ. ಕಟ್ಟಾ ಕೊಟ್ಟಷ್ಟು ಈಸಿಕೊಂಡು ಮುಗಿಯಲು ವೆಂಕಟಸ್ವಾಮಿ ರೆಡಿಯಾಗಿದ್ದಾನೆ.

ಆದರೆ ಬಂಗಾರಪೇಟೆಯ ನಾರಾಯಣಸ್ವಾಮಿ... ಪಳಗಿಸಿದ್ದು ಮಾತ್ರ ವರ್ತೂರು ಪ್ರಕಾಶ್. ನಿನಗ್ಯಾಕೆ, ... ನಿಗಮವೊಂದಕ್ಕೆ ಛೇರ್ಮನ್ ಮಾಡಿಸ್ತೀನಿ ಕಟ್ಟಾ ಸಾಹ... ಕೈಯಲ್ಲಿ ದುಡ್ಡನ್ನೂ ಕೊಡಿಸ್ತೀನಿ' ಎಂದಿದ್ದನ್ನು ನ... ನಾರಾಯಣಸ್ವಾಮಿ ಅಕ್ಷರಶಃ ಕುರಿಯಂತೆ ತನ್ನ ರಾಜಿ... ಬರೆದು ಕೊಟ್ಟಿದ್ದಾನೆ.

ಅತ್ತ ಉತ್ತರ ಕರ್ನಾಟಕದಲ್ಲಿ ಕನಿಷ್ಠ ... ಡಜನ್ ಶಾಸಕರನ್ನಾದರೂ ಖರೀದಿ... ರೆಡ್ಡಿ ಗ್ಯಾಂಗ್ ಕಾರ್ಯಾಚರಣೆಗಿಳಿದಿದೆ... ಪೈಕಿ ಮೊದಲು ಕೇಳಿಬಂದ ಹೆಸರೇ... ಜಲಪುರದ ಕಾಂಗ್ರೆಸ್ ಶಾಸಕ ಮಾಲ... ಗುತ್ತೇದಾರನದ್ದು. ಗಾಲಿ ರೆಡ್ಡಿ ... ಶ್ರೀರಾಮುಲು ಸೇರಿಕೊಂಡೇ ಮಾಲ... ನಿಗೆ ಬಲೆಬೀಸಿದ್ದಾರೆ. ಆದರೆ ಮಾಲ... ನಿಗೂ ಮುನ್ನ ಹುಮುನಾಬಾದ್ ಕಾ... ಶಾಸಕ ರಾಜಶೇಖರ್ ಪಾಟೀಲ್ ಬಿ... ಸೇರುವ ಸಾಧ್ಯತೆಗಳೇ ಹೆಚ್ಚಿವೆ. ಏ... ರಾಜಶೇಖರ ಪಾಟೀಲನ ತಂದೆ ಬಸ... ಪಾಟೀಲ ಸದ್ಯ ಬಿಜೆಪಿಯ ಎಮ್ಮೆಲ್ಸಿ. ಹಿಂದೆ ... ಕಾಲದಲ್ಲಿ ಇಂಧನ ಮಂತ್ರಿಯಾಗಿದ್ದ ಬಸವ... ಪಾಟೀಲರಿಗೆ ಕಳೆದ ಪರಿಷತ್ ಚುನಾವಣೆಯಲ್ಲಿ ಕಾ... ಟಿಕೇಟ್ ಕೊಡಲಿಲ್ಲ. ಅದೇ ಸಿಟ್ಟಿಗೆ ಅಪ್ಪ ಬಿಜೆಪಿ... ಅಲ್ಲಿ ಟಿಕೆಟ್ ಗಿಟ್ಟಿಸಿ ಪರಿಷತ್ತಿಗೆ ಗೆದ್ದು ಬಂದ. ರಾಜಶೇಖರ ಪಾಟೀಲ್ ಹೆಸರಿಗಷ್ಟೇ ಹುಮನಾಬ... ಶಾಸಕನಾದರೂ ಮನಸ್ಸೆಲ್ಲ ಅಪ್ಪನ ಜೊತೆ ಬಿಜೆಪಿಯ... ಸದ್ಯ ಮಗನನ್ನು ಬಿಜೆಪಿಗೆ ಮಾರಿಕೊಳ್ಳಲು ಅಪ್ಪನೇ ಚ... ಆರಂಭಿಸಿದ್ದಾನೆ. ಏನಿಲ್ಲ ಅಂದರೂ 25 ಕೋಟಿಗೆ ... ಮೋಸವಿಲ್ಲ, ಆದರೆ ಲೋಭಿ ಅಪ್ಪ 50 ಕೋ... ಪಟ್ಟು ಹಿಡಿದಿದ್ದಾನೆ. ಎಷ್ಟು ಗಿಟ್ಟುತ್ತೋ ಗೊ... ಚಿತ್ರದುರ್ಗದ ಜೆಡಿಎಸ್ ಶಾಸಕ ಎಸ್.ಕೆ. ಬಸವರ... ಸದ್ಯ ಈಗಲ್ಟನ್ ರೆಸಾರ್ಟಿನಲ್ಲಿದ್ದಾರಾದರೂ ಕರು... ರೆಡ್ಡಿ ಜೊತೆ ಈಗಾಗಲೇ ಡೀಲು ಕುದುರಿಸಿಕೊಂಡಿದ... ರೂಮರ್ ಇದೆ. ಅದು ಸಣ್ಣ ಮೊತ್ತವಲ್ಲ 70 ಕೋ...

ಇದನ್ನು ಉತ್ಪ್ರೇಕ್ಷೆ ಎಂದೇ ಇಟ್ಟುಕೊಂಡರೂ ... 35 ಕೋಟಿಗೆ ಲೆಕ್ಕ ಹಾಕಿದರೂ ಇಷ್ಟೊಂದು ... ಯಡ್ಡಿ ಸರ್ಕಾರಕ್ಕೆ ಎಲ್ಲಿಂದ ಬರುತ್ತದೆ? ಐವತ್ತು ಕೋ... ಕೊಟ್ಟು ಶಾಸಕರನ್ನು ಖರೀದಿಸುವ ಸರ್ಕಾರ ನಾಳೆ ... ಭರಿಸಿಕೊಳ್ಳಬೇಕೆಂದರೆ ಒಂದೇ ಗಣಿ ಲೂಟಿಗಿಳಿಯ... ಅಥವಾ ಎಷ್ಟು ರೈತರ ಭೂಮಿ ನೋಟಿಫೈ ... ಆನಂತರ ಬಿಲ್ಡರುಗಳಿಗಾಗಿ ಡೀನೋಟಿಫೈ ಮಾಡಬ...

ಸರ್ಕಾರವೊಂದರ ಉಳಿವಿಗಾಗಿ ಪ್ರಜಾತ... ಕೊಲೆಯಷ್ಟೇ ಅಲ್ಲ; ನಾಡಿನ ಸಂಪತ್ತೂ ಲೂಟಿಯಾಗ... ರೈತರ ಭೂಮಿಯೂ ದೋಚಲ್ಪಡಲಿದೆ. ಈ ಪುರುಷ... ಯಡ್ಡಿ ಸರ್ಕಾರ ಉಳಿಯಬೇಕೆ?

• ರಾ. ಸೋಮನ...

ಕುಲಗೆಟ್ಟ ಸ್ಪೀಕರ್, ಮಣ್ಣುಗೂಡಿದ ಪಾವಿತ್ರ್ಯ

ಸ್ಪೀಕರ್ ಸ್ಥಾನಕ್ಕೊಂದು ಘನತೆಯಿದೆ. ಏನೇ ಹಂಗು-ನೆಂಟಸ್ತಿಕೆಯಿದ್ದರೂ ಕನಿಷ್ಠ ಖುರ್ಚಿಯ ಪಾವಿತ್ರ್ಯಕ್ಕಾದರೂ ಬೋಪಯ್ಯ ನೀತಿವಂತರಂತೆ ನಡಕೊಳ್ಳಬೇಕಾಗಿತ್ತು. ದುರಂತವೆಂದರೆ ಆಪರೇಷನ್ ಕಮಲದ ಕಿತಾಪತಿಯಲ್ಲಿ ಸ್ಪೀಕರ್ ಬೋಪಯ್ಯನವರೇ ಮೇಲೆ ಬಿದ್ದು ಕೈ ಗಲೀಜು ಮಾಡಿಕೊಂಡಿದ್ದಾರೆ.

ಕಾಯ್ದೆ ಪ್ರಕಾರ ಯಾರೇ ಶಾಸಕ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದರೆ ಖುದ್ದಾಗಿ ಸ್ಪೀಕರ್ ಛೇಂಬರಿಗೆ ಬರಬೇಕು. ತನ್ನ ಖಾಲಿ ಲೆಟರ್‌ಹೆಡ್ ತಂದೋ ಅಥವಾ ಬಿಳಿ ಹಾಳೆಯಲ್ಲೋ ಸ್ಪೀಕರ್ ಎದುರೇ ಕೂತು ತನ್ನ ಕೈಯಾರೆ ರಾಜೀನಾಮೆ ಬರೆದುಕೊಡಬೇಕು. ಈ ರೀತಿ ಶಾಸಕನೊಬ್ಬ ಸ್ಪೀಕರ್ ಎದುರು ಕೂತು ರಾಜೀನಾಮೆ ಬರೆದು ಕೊಡುತ್ತಿರುವುದನ್ನು ವೀಡಿಯೋ ಚಿತ್ರೀಕರಣ ಮಾಡಿಕೊಳ್ಳಬೇಕು. ಜೊತೆಗೆ ಈತನೇ ಸಂಬಂಧಪಟ್ಟ ಶಾಸಕ ಎಂಬುದನ್ನು ವಿಧಾನಸಭೆಯ ಸೆಕ್ರೆಟರಿ ಎಸ್.ವಿ. ಪಾಟೀಲ್ ಗುರುತಿಸಿ ಪ್ರಮಾಣೀಕರಿಸಬೇಕು.



ಬೋಪಯ್ಯ

ಇದು ಶಾಸಕನೊಬ್ಬನ ರಾಜೀನಾಮೆ ಅಂಗೀಕರಿಸುವಲ್ಲಿ ಪಾಲಿಸಬೇಕಾದ ನಿಯಮಾವಳಿ. ವಿಕಟವೆಂದರೆ ಚನ್ನಪಟ್ಟಣದ ಶಾಸಕ ಅಶ್ವತ್ಥನ ರಾಜೀನಾಮೆ ಪತ್ರವನ್ನು ಜನಾರ್ದನ ರೆಡ್ಡಿಯ ಪಿಎ ಅನಿಲ್ ಚಿಟಗೇರಿ ಎಂಬಾತ ತಂದು ಸ್ಪೀಕರ್‌ಗೊಪ್ಪಿಸುತ್ತಾನೆ. ಅದೂ ವಿಧಾನಸೌಧದ ಸ್ಪೀಕರ್ ಛೇಂಬರಿಗಲ್ಲ, ಶಾಸಕರ ಭವನದ ಸ್ಪೀಕರ್ ಕೋಣೆಗೆ.

ಇಲ್ಲಿ ಸ್ಪೀಕರ್ ಬೋಪಯ್ಯ ಕಾಟಾಚಾರಕ್ಕೂ ಕಾಯ್ದೆ ಪಾಲಿಸುವುದಿಲ್ಲ, ಯಾರೋ ಶಾಸಕನ ರಾಜೀನಾಮೆ ಪತ್ರ ಎಂದು ಇನ್ಯಾರೋ ತಂದುಕೊಟ್ಟದ್ದನ್ನೇ ಕಣ್ಣುಮುಚ್ಚಿ ಅಂಗೀಕರಿಸುತ್ತಾರೆ. ಜಗಳೂರು ಶಾಸಕ ಎಸ್.ವಿ. ರಾಮಚಂದ್ರನ ರಾಜೀನಾಮೆ ಪ್ರಕರಣ ಎಂಥ ಗೋಲ್‌ಮಾಲ್ ಎಂದರೆ, ಅಕ್ಟೋಬರ್ 19 ರ ಮಂಗಳವಾರ ಸಂಜೆ 4 ರ ಹೊತ್ತಿಗೆ ವಿಧಾನಸೌಧದ ಸ್ಪೀಕರ್ ಕೊಠಡಿಗೆ ಫ್ಯಾಕ್ಸ್ ಒಂದು ಬರುತ್ತದೆ. ಅದು ರಾಮಚಂದ್ರನ ರಾಜೀನಾಮೆ ಪತ್ರದ ಜೆರಾಕ್ಸ್ ಪ್ರತಿಯಂತಿದ್ದ ಫ್ಯಾಕ್ಸ್ ಕಾಪಿ. ಬಂದದ್ದು ದಾವಣಗೆರೆಯ ಸಂಸದ ಸಿದ್ದೇಶ್ ಮನೆಯಿಂದ. ನಿಜಕ್ಕೂ ಅದು ರಾಮಚಂದ್ರನದ್ದೇ ಸಹಿಯಾ? ಅಸಲೀ ಸಹಿಯಾ? ಇತ್ಯಾದಿ ಯಾವುದನ್ನೂ ಪರಿಶೀಲಿಸದೇ ರಾತ್ರಿ 10 ರ ಹೊತ್ತಿಗೆಲ್ಲಾ ಸ್ಪೀಕರ್ ರಾಜೀನಾಮೆಯನ್ನು ಅಂಗೀಕರಿಸುತ್ತಾರೆ.

ಈ ಎರಡೂ ಪ್ರಕರಣಗಳಲ್ಲಿ ಕನಿಷ್ಠ ನೀತಿ ನಿಯಮಾವಳಿಯನ್ನೂ ಅನುಸರಿಸಿಲ್ಲ. ಒಂದೆಡೆ ಫ್ಯಾಕ್ಸ್ ಪ್ರತಿಯನ್ನು ಆಧರಿಸಿದರೆ ಮತ್ತೊಂದೆಡೆ ಯಾರೋ ತಂದು ಕೊಟ್ಟದ್ದನ್ನು ನಂಬಿ ರಾಜೀನಾಮೆ ಅಂಗೀಕರಿಸಿದ್ದಾರೆ. ಪಕ್ಷೇತರರ ವಿಷಯದಲ್ಲಿ ಕಾಯ್ದೆ ಅವಕಾಶ ಇಲ್ಲದಿದ್ದರೂ ಅಧಿಕಪ್ರಸಂಗಿಯಂತೆ ಉದ್ಧಟ ಕ್ರಮ ಜರುಗಿಸುತ್ತಾರೆ. ಅದೇ ವಿರೋಧ ಪಕ್ಷಗಳ ಶಾಸಕರ ರಾಜೀನಾಮೆ ವಿಷಯದಲ್ಲಿ ಎಲ್ಲಾ ಕಾನೂನುಗಳನ್ನು ಮರೆತು ಆಳುವ ಪಕ್ಷದ ದುರಾಚಾರಕ್ಕೆ ಕೈಜೋಡಿಸುತ್ತಾರೆ.

ಇಂಥ ಕುಲಗೆಟ್ಟ ಸ್ಪೀಕರ್ ಇದ್ದರೆಷ್ಟು ಬಿಟ್ಟರೆಷ್ಟು? ಇಂಥವರಿಂದ ಯಾರು ತಾನೇ ನ್ಯಾಯ ನಿರೀಕ್ಷಿಸಲು ಸಾಧ್ಯ?



"ನಿನ್ನ ಹೆಂಡತಿ ಓಡಿಹೋದಳೊಂತ ಹೇಳಿದ್ರೆ ಪ್ರಿಂಟ್ ಮಾಡ್ತೀಯಾ?"

ರಾಜ್ಯ ರಾಜಕೀಯದ ಡ್ರಾಮಾಗಳನ್ನು ಶಾಸಕರ ಪಕ್ಷಾಂತರದ ಊಹಾಪೋಹಗಳ ಸುದ್ದಿ ಬಿತ್ತರಿಸುವುದರಲ್ಲಿ ಈಗ ಪೈಪೋಟಿಯೇ ನಡೆಯುತ್ತಿದೆ. ಪ್ರಧಾನವಾಗಿ ಟಿವಿ ಚಾನೆಲ್‌ಗಳು ಹಾಗೂ ಪ್ರಮುಖ ಡೈಲಿಗಳು ಪೋಣಿಚ್ಚಿ ವರದಿಗಳನ್ನು ತೇಲಿಬಿಡುತ್ತಿವೆ. ಇದರಿಂದಾಗಿ ಕಾಂಗ್ರೆಸ್-ದಳ-ಬಿಜೆಪಿಯೊಳಗೂ ಆತಂಕ ಕಳವಳಗಳೇಳುತ್ತಿವೆ. ಪ್ರಮುಖ ರಾಜಕಾರಣಿಗಳೇ ಪತ್ರಕರ್ತರಿಗೆ ಫೋನ್ ಮಾಡಿ 'ಏನ್ ಸಾರ್ ನ್ಯೂಸ್, ಅದು ನಿಜನಾ, ಇದು ನಿಜಾನಾ?' ಎಂದು ಕೇಳುತ್ತಿದ್ದರೆ ಇವುಗಳಲ್ಲಿ ಕೆಲವು ನೈಜ ಸುದ್ದಿಗಳಿದ್ದರೆ ಉಳಿದವೆಲ್ಲಾ ಬರೀ ಉತ್ಪ್ರೇಕ್ಷೆ ಮಾತ್ರ.

ಮೊನ್ನೆ ಹೀಗಾಯಿತು.

ಕನ್ನಡದ ಪ್ರಮುಖ ದಿನಪತ್ರಿಕೆಯೊಂದರ ಮುಖಪುಟದಲ್ಲೇ ಆರೆಂಟು ಕಾಂಗ್ರೆಸ್ ಶಾಸಕರ ಹೆಸರು ಪ್ರಕಟಿಸಿ ಅವರೆಲ್ಲಾ ರಾಜೀನಾಮೆ ನೀಡಿ ಬಜೆಪಿ ಸೇರುತ್ತಿದ್ದಾರೆಂದು ಪ್ರಕಟಿಸಲಾಗಿತ್ತು. ಆ ಶಾಸಕರ ಪಟ್ಟಿಯಲ್ಲಿ ಅರಕಲಗೂಡಿನ ಕಾಂಗ್ರೆಸ್ ಶಾಸಕ ಎ.ಮಂಜುರ ಹೆಸರೂ ಇತ್ತು. ಆದರೆ ಕಾಂಗ್ರೆಸ್ ಲೀಡರ್‌ಗಳೊಂದಿಗೆ ಸದಾ ಕಾಣಿಸಿಕೊಳ್ಳುತ್ತಿರುವ ವಾಲೆಮಂಜು ಪದೇಪದೇ ತಾನು ಪಕ್ಷ ಬಿಡುತ್ತಿಲ್ಲ ಎಂದು ಹೇಳುತ್ತಿದ್ದರೂ ರೂಮರ್‌ಗಳಂತೂ ನಿಲ್ಲುತ್ತಿಲ್ಲ. ಸ್ಥಿತಿ ಹೀಗಿದ್ದಾಗ ಮೊನ್ನೆ ಕನ್ನಡ ಡೈಲಿ ಮಂಜು ಹೆಸರು ಪ್ರಿಂಟಿಸಿ ಪಕ್ಷಾಂತರದ ಕತೆ ಬಗ್ಗೆ ಪುನಃ ಬರೆದದ್ದು ನೋಡಿ ಮಂಜುಗೆ ಮೈಯೆಲ್ಲಾ ಉರಿದುಹೋಗಿದೆ. ತಕ್ಷಣ ಫೋನೆತ್ತಿಕೊಂಡು ಪತ್ರಿಕೆಯ ಸಂಪಾದಕನನ್ನು ತರಾಟೆಗೆ ತಗೊಂಡಿದ್ದಾರೆ. ಆ ಮಹಾನುಭಾವ ಮಳ್ಳಿಯಂತೆ. "ಹೌದಾ ಸಾರ್, ಯಾರೋ ನಮ್ಮ ರಿಪೋರ್ಟರ್ ಬರೆದುಬಿಟ್ಟಿದ್ದಾನೆ, ನಾನು ಗಮನಿಸಲಿಲ್ಲ" ಅಂತಾ ದೇಶಾವರಿ ಮಾತಾಡಿದನಂತೆ. ಅದರಿಂದ ಇನ್ನಷ್ಟು ಸಿಟ್ಟಾದ ಮಂಜು "ಅಲ್ರಿ ಯಾವನ್ರಿ ಅವನು, ನಾಳೆ ನಿಮ್ ಹೆಂಡ್ತಿ ಯಾವ್ನೊನ್ ಜೊತೆಗೊ ಓಡಿಹೋದಳೊಂತ ಬರೆದ್ರೆ ಅದನ್ನೇ ಪ್ರಿಂಟ್ ಮಾಡ್ತೀರೇನ್ರಿ ನೀವು?"ಎಂದು ತಾರಾಮಾರ ಉಗಿದರಂತೆ! ಹೀ-ಹೀಗೆ ಬೈಸಿಕೊಂಡ ಸಂಪಾದಕನ ಕಚೇರಿಯ ವರದಿಗಾರರೇ ಮೊನ್ನೆ ಈ ಘಟನೆಯನ್ನು ಪ್ರೆಸ್‌ಕ್ಲಬ್‌ನಲ್ಲಿ ರೀಟೆಲಿಕಾಸ್ಟ್ ಮಾಡುತ್ತಿದ್ದರು.

ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿಗೆ 38 ಕೋಟಿ ರೂ. ಡೀಲ್!

ಬಂಗಾರಪೇಟೆಯ ಕಾಂಗ್ರೆಸ್‌ನ ನಾರಾಯಣಸ್ವಾಮಿ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಲು 38 ಕೋಟಿ ರೂ.ಗಳ ಡೀಲು ಕುದುರಿಸಿಕೊಂಡಿದ್ದಾನೆ!

ಈ ಡೀಲು ಕುದುರಿಸಿದವನು ಬಿಜೆಪಿಯ ಭೂಗಳ್ಳ ಕಟ್ಟಾ ಸುಬ್ರಮಣ್ಯನಾಯ್ಡು!

ಈ ಬಿಜೆಪಿಗಳ ಆಪರೇಷನ್ ಕಮಲದ ಆಮಿಷ ಹೇಗಿದೆಯೆಂದರೆ ಈ ಹಿಂದೆಲ್ಲಾ ಎಲೆಕ್ಷನ್ ಟಿಕೆಟ್ ಗಿಟ್ಟಿಸಲು ಹಣ ಕೊಡಬೇಕಾಗುತ್ತಿತ್ತು. ಟಿಕೆಟ್ ಪಡೆದ ನಂತರ ಎಲೆಕ್ಷನ್ ಗೆಲ್ಲಲೂ ಹತ್ತಾರು ಕೋಟಿ ವ್ಯಯಿಸಬೇಕಾಗಿ ಬರುತ್ತಿತ್ತು. ಈಗ ಈ ಅಸಹ್ಯ ವ್ಯಾಪಾರವನ್ನು ಬಿಜೆಪಿ ಇನ್ನೊಂದು ಹಂತಕ್ಕೆ ಕೊಂಡೊಯ್ದಿದೆ. ಆಯ್ಕೆಯಾದ ಶಾಸಕ ತನಗೆ ಆ ಸ್ಥಾನ ಬೇಡ ಎಂದರೂ ಹಣ ಸಿಗುವಂತೆ ಮಾಡುತ್ತಿರುವ ಹೊಸ ರೀತಿಯ ಕರಪ್ಷನ್ ಇದು.


ಈ ನಾರಾಯಣ ಸ್ವಾಮಿ ಜೊತೆ ಹಣದ ಡೀಲು ಕುದುರಿಸಿದ ಕಟ್ಟಾ ನಾಯ್ಡು ಮುಂದಿನ ಎಲೆಕ್ಷನ್‌ನಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿಯೂ ಭರವಸೆ ಕೊಟ್ಟಿದ್ದಾನೆ. ಆದರೆ ಬಂಗಾರಪೇಟೆಯ ರಾಜಕೀಯ ಅಷ್ಟು ಸಲೀಸಾಗಿಲ್ಲ. 2008ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನಿಂದ ನಿಂತಿದ್ದ ನಾರಾಯಣಸ್ವಾಮಿ ಕೇವಲ ಏಳು ಸಾವಿರ ಓಟಿನಿಂದ ಗೆದ್ದಿದ್ದ. ಅವತ್ತು ಅವನಿಗೆ ಪ್ರತಿಸ್ಪರ್ಧಿಯಾಗಿದ್ದುದು ಬಿಜೆಪಿಯ ವೆಂಕಟಮುನಿಯಪ್ಪ. ನಾ. ಸ್ವಾಮಿಗೆ 49 ಸಾವಿರ ಓಟು ಬಿದ್ದರೆ ವೆಂಕಮುನಿಯಪ್ಪನಿಗೆ 42 ಸಾವಿರ ಓಟು ಬಿದ್ದಿದ್ದವು. ಜೊತೆಗೆ ಜೆಡಿಎಸ್‌ನ ವಿಶೇಷ 12 ಸಾವಿರ ಓಟ್ ಕಿತ್ತಿದ್ದರು. ನಾಳೆ ನಾರಾಯಣಸ್ವಾಮಿ ಮತ್ತೆ ಬಿಜೆಪಿಯಿಂದ ನಿಂತರೆ ಹಾಲಿ ಬಿಜೆಪಿಯಲ್ಲಿರುವ ವೆಂಕಟಮುನಿಯಪ್ಪ ಸಹಜವಾಗೇ ಕಾಂಗ್ರೆಸ್ ಕ್ಯಾಂಡಿಡೇಟ್ ಆಗುತ್ತಾರೆ. ಫೈಟ್ ನೇರವಾಗಿಯೇ ನಡೆಯುತ್ತದೆ. ಈ ನಾರಾಯಣ ಸ್ವಾಮಿ ಶಾಸಕನಾಗಿ ಗೆದ್ದ ಮೇಲೆ ನಯಾಪೈಸೆಯ ಕೆಲಸ ಮಾಡಿಲ್ಲ, ಬರೀ ಲ್ಯಾಂಡ್ ಡೀಲ್ ಪೊಲೀಸರು ಹಾಗೂ ಸರ್ಕಾರಿ ಅಧಿಕಾರಿಗಳಿಂದ ಹಫ್ತಾ ವಸೂಲಿಯನ್ನೇ ನಿತ್ಯ ಕಾಯಕ ಮಾಡಿಕೊಂಡಿದ್ದ. ಬಂಗಾರಪೇಟೆಯ ದಕ್ಷ ತಹಶೀಲ್ದಾರ್ ಆಗಿದ್ದ ದಾಕ್ಷಾಯಿಣಿ ಎಂಬುವವರಿಗೆ ಕಿರುಕುಳ ಕೊಡುತ್ತಾ ತರಲೆ ಎಬ್ಬಿಸಿದ್ದ.

ಈಗ ರಾಜ್ಯ ರಾಜಕೀಯದಾಟದಲ್ಲಿ ಅರಾಜಕ ಪರಿಸ್ಥಿತಿಯ ಲಾಭ ಪಡೆದು ಬರೋಬ್ಬರಿ 38 ಕೋಟಿ ರೂಪಾಯಿ ಜೇಬಿಗಿಳಿಸಿದ್ದಾನೆ.

ಬಂಗಾರಪೇಟೆಯ ಜನ ಥೂ..ಥೀ.. ಎಂದು ಉಗಿಯುತ್ತಿದ್ದಾರೆ.

ಮರೆಯಾದ ಆದರ್ಶವಾದಿ ಯುವಕನೊಬ್ಬನ ಸುತ್ತ....

ಆ ಯುವಕನಲ್ಲಿ ಎಲ್ಲವೂ ಇತ್ತು. ಕಲಘಟಗಿಯಂತಹ ಚಿಕ್ಕ ಊರಿನಲ್ಲಿ ಹುಟ್ಟಿದ್ದರೂ ತಾನು ಏನನ್ನಾದರೂ ಸಾಧಿಸಬೇಕೆಂಬ ಛಲವಿತ್ತು. ಪಿ. ಲಂಕೇಶರ ಬರಹಗಳನ್ನು ಓದುತ್ತಾ ಅವರ 'ಮುಕ್ತ ವಿಶ್ವವಿದ್ಯಾಲಯ'ದಲ್ಲಿ ಕಲಿತಿದ್ದ ಆತನಲ್ಲಿ ಪ್ರಗತಿಪರ ಧೋರಣೆಗಳಿದ್ದವು, ಜಾತ್ಯತೀತ ಮನೋಭಾವವಿತ್ತು. ಆತ ಕಂಡಿದ್ದ ಕನಸುಗಳ ಹಾದಿಯಲ್ಲಿ ಅವನ ಕೈ ಹಿಡಿದು ನಡೆಯಲು ಓರ್ವ ಸಂಗಾತಿಯೂ ಇದ್ದಳು. ಅಪಾರವಾಗಿ ಆತನನ್ನು ಪ್ರೀತಿಸುತ್ತಿದ್ದ ತಂದೆ ಮಲ್ಲಿಕಾರ್ಜುನ ಮತ್ತು ತಾಯಿ ಗೌರಮ್ಮ ಇದ್ದರು. ಅವನನ್ನು ಮೆಚ್ಚಿ ಹಿಂಬಾಲಿಸುತ್ತಿದ್ದ ತಮ್ಮ ಮುತ್ತುರಾಜನೂ ಇದ್ದ.



ಇಷ್ಟೆಲ್ಲ ಹೊಂದಿದ್ದ ಆತನ ಹೆಸರು ಸಂಗಮೇಶ್ ಬಳಿಗೇರ್. ಇನ್ನೂ 33 ರ ಹರೆಯ. ಆಗಲೇ ಜನಪ್ರಿಯವಾಗಿದ್ದ 'ಸಂಗಮೇಶ್ ಖಾನಾವಳಿ' ನಡೆಸುತ್ತಿದ್ದ. ಅದಕ್ಕೆಂದು ಹಗಲೂರಾತ್ರಿ ದುಡಿಯುತ್ತಿದ್ದ. ಸಾಲಸೋಲಗಳು ದೂರವಾಗಿ ತನ್ನ ಕಾಲ ಮೇಲೆ ತಾನು ಗಟ್ಟಿಯಾಗಿ ನಿಲ್ಲುವ ಹೊಸ್ತಿಲಿನಲ್ಲಿದ್ದ. ಆದರೆ ಚಿಕ್ಕ ಎಡವಟ್ಟೊಂದನ್ನು ಮಾಡಿಕೊಂಡು, ಅದನ್ನು ಯಾರೊಂದಿಗೂ ಹಂಚಿಕೊಳ್ಳದೆ, ಏಕಾಂಗಿಯಾಗಿ ದುಃಖಿಸಿ ಕಳೆದ ವಾರ ಆತ್ಮಹತ್ಯೆಗೆ ಶರಣಾದ.

ಸಂಗಮೇಶ್ ಅಪ್ಪನ ಅಭಿಮಾನಿ. ಅವನ ಮುಗ್ಧತೆ ಅಪ್ಪನಿಗೆ ಇಷ್ಟವಾಗಿತ್ತು. ಸಾಧ್ಯವಾದಾಗಲೆಲ್ಲ ಬೆಂಗಳೂರಿಗೆ ಬಂದು ಆತನ ತಾಯಿ ಗೌರಮ್ಮ ಮಾಡಿದ್ದ ಚಟ್ನಿಪುಡಿಯನ್ನು ಅಪ್ಪನಿಗೆ ತನ್ನ ಪ್ರೀತಿಯ ಕಾಣಿಕೆಯಾಗಿ ಕೊಟ್ಟು ಹೋಗುತ್ತಿದ್ದ. ಅಪ್ಪ ಹೋದನಂತರ ಒಮ್ಮೆ ಆಫೀಸಿಗೆ ಬಂದ ಸಂಗಮೇಶ್ ಚಟ್ನಿಪುಡಿಯನ್ನು ಎರಡು ಪ್ರತ್ಯೇಕ ಬಾಟಲಿಗಳಲ್ಲಿ ತಂದಿದ್ದ. ಏಕೆ ಹೀಗೆ ಅಂತ ಕೇಳಿದ್ದಕ್ಕೆ "ಒಂದು ಗೌರಕ್ಕನಿಗೆ, ಇನ್ನೊಂದು ಬೇಬಿ ಅಕ್ಕನಿಗೆ" ಎಂದಿದ್ದ. ಹೀಗೆ ಅಪ್ಪನ ಬಗ್ಗೆ ಆತನಿಗಿದ್ದ ಪ್ರೀತಿ ಮತ್ತು ಅಭಿಮಾನವನ್ನು ನಮ್ಮಿಬ್ಬರಿಗೂ ಹಂಚಿದ್ದ.



ಅಪ್ಪನ 'ಅಕ್ಕ' ಕಾದಂಬರಿ ಆಧರಿಸಿ ಬೇಬಿ ನಿರ್ದೇಶಿಸಿದ್ದ 'ದೇವೀರಿ' ಚಿತ್ರವನ್ನು ಈ ಹುಡುಗ ಎಷ್ಟು ಮೆಚ್ಚಿದ್ದನೆಂದರೆ ಒಮ್ಮೆ ಆಕೆಯನ್ನೂ, ಅವಳ ಚಿತ್ರದ ರೀಲ್‌ಗಳನ್ನೂ ಕಲಘಟಗಿಗೆ ಕರೆದುಕೊಂಡು ಹೋಗಿ ಅಲ್ಲಿ ಆ ಚಿತ್ರದ ಪ್ರದರ್ಶನ ಮತ್ತು ಚರ್ಚೆಯನ್ನು ಏರ್ಪಡಿಸಿದ್ದ. ಹಲವೊಮ್ಮೆ ನಮ್ಮಿಬ್ಬರಿಗೂ ಫೋನ್ ಮಾಡಿ ತನ್ನ ಕಷ್ಟ, ಸುಃಖಗಳನ್ನು ಹೇಳುತ್ತಿದ್ದ. ಆದರೆ ಎಲ್ಲ ಯುವಕರಂತೆ ಈತನೂ ಆಗಾಗ್ಗೆ ತನ್ನ ಮೊಬೈಲ್ ನಂಬರ್ ಅನ್ನು ಬದಲಾಯಿಸುತ್ತಿದ್ದರಿಂದ ಅವನೊಂದಿಗಿನ ಸಂಪರ್ಕ ಹಲವೊಮ್ಮೆ ಕಡಿದುಬೀಳುತ್ತಿತ್ತು.

ಒಮ್ಮೆ ಸಂಗಮೇಶನನ್ನು ಮಾತನಾಡಿಸಿ ಬಹಳ ತಿಂಗಳುಗಳು ಉರುಳಿದ ನಂತರ ಹುಬ್ಬಳ್ಳಿಗೆ ಹೋದಾಗ ಬೇಬಿ "ಆ ಸಂಗಮೇಶ್ ಹುಬ್ಬಳ್ಳಿಯಲ್ಲೊಂದು ಖಾನಾವಳಿ ತೆರೆದಿದ್ದಾನಂತೆ. ಹೋಗಿ ನೋಡು" ಅಂದಳು. ಆದರೆ ಆ ಖಾನಾವಳಿಯ ಹೆಸರೇನು, ಅದು ಯಾವ ಏರಿಯಾದಲ್ಲಿದೆ ಎಂದೆಲ್ಲ ಗೊತ್ತಿರಲಿಲ್ಲ. ಆದರೂ ಅವನ ಬಗ್ಗೆ ನಮ್ಮ ವಿನಯ್ ಹುರಳಿಕೊಪ್ಪಿ ಮುಂದೆ ಪ್ರಸ್ತಾಪಿಸಿದಾಗ "ಇಲ್ಲೊಂದು ಸಂಗಮೇಶ್ ಖಾನಾವಳಿ ಅಂತ ಇದೆಯಂತೆ. ಅಲ್ಲಿ ಊಟ ತುಂಬಾ ಚೆನ್ನಾಗಿರುತ್ತಂತೆ. ಅದೇ ಇರಬಹುದಾ?" ಅಂದ.



ಅಲ್ಲಿ ಹೋಗಿ ನೋಡಿದರೆ ಅದೇ ನಮ್ಮ ಸಂಗಮೇಶನ ಖಾನಾವಳಿ ಆಗಿತ್ತು. ಅವನನ್ನೂ ಅವನ ಸಹೋದರ, ಗೆಳತಿ, ತಂದೆ ಎಲ್ಲರನ್ನೂ ನೋಡಿ ನನಗೆ ತುಂಬಾ ಖುಷಿಯಾಗಿತ್ತು. ಅವನಿಗೂ ಅಷ್ಟೇ. ಎಷ್ಟೇ ಒತ್ತಾಯ ಮಾಡಿದರೂ ನಾವು ಮಾಡಿದ್ದ ಊಟಕ್ಕೆ ಹಣ ತೆಗೆದುಕೊಳ್ಳಲು ನಿರಾಕರಿಸಿದ್ದ. ಆನಂತರ ನಾನು ಹುಬ್ಬಳ್ಳಿಗೆ ಹೋದಾಗಲೆಲ್ಲ ಅವರ ಖಾನಾವಳಿಯಲ್ಲೇ ಊಟ ಮಾಡುತ್ತಿದ್ದದ್ದು.

ಇತ್ತೀಚೆಗೆ ನಾನು ಈಶಾನ್ಯ ರಾಜ್ಯಗಳ ಪ್ರವಾಸದಲ್ಲಿದ್ದಾಗ ಸಂಗಮೇಶ್ ನನಗೆ ಫೋನ್ ಮಾಡಿ "ನಿಮ್ಮನ್ನು ಭೇಟಿಯಾಗಬೇಕು. ಬೆಂಗಳೂರಿಗೆ ಬಂದಿದ್ದೇನೆ. ಆಫೀಸಿಗೆ ಬರಲೆ?" ಎಂದು ಕೇಳಿದ. ಆಗ ನಾನು "ಆದರೆ ನಾನು ಈಗ ಇಂಫಾಲ್‌ನಲ್ಲಿದ್ದೇನೆ. ಏನು ಸಮಾಚಾರ?" ಅಂದೆ. "ಏನೋ ಸಮಸ್ಯೆ ಆಗಿದೆ. ಯಾವಾಗ ವಾಪಸ್ ಬರ್ತೀರಿ?" ಅಂದ. "ಮೂವತ್ತನೆ ತಾರೀಖು. ಅದಾದ ಮೇಲೆ ಬಾ, ಮಾತಾಡೋಣ" ಅಂದೆ. ಆದರೆ ಕೆಲ ನಿಮಿಷಗಳ ನಂತರ ಮತ್ತೆ ಫೋನ್ ಮಾಡಿದ ಸಂಗಮೇಶ್ ನನ್ನಿಂದ ಬೇಬಿಯ ನಂಬರ್ ಪಡೆದು ಅವಳನ್ನು ಭೇಟಿ ಆಗುವುದಾಗಿ ಹೇಳಿದ.

ಆದರೆ ನಾಲ್ಕೈದು ದಿನಗಳಾದರೂ ನನ್ನಾಗಲಿ ಅಥವಾ ಬೇಬಿಗಾಗಲಿ ಫೋನ್ ಮಾಡಲೇ ಇಲ್ಲ. ಈ ಹುಡುಗನಿಗೆ ಏನಾಗಿರಬಹುದು ಎಂದು ಯೋಚಿಸಿದ ನಾವು ಅವನಿಗೆ ಫೋನ್ ಮಾಡುತ್ತಲೇ ಇದ್ದೆವು. ಆದರೆ ಪ್ರತಿ ಬಾರಿ ಅದು ಸ್ವಿಚ್ ಆಫ್ ಆಗಿರುತ್ತಿತ್ತು. ಬೇಬಿಯಂತೂ ಅವನಿಗೆ ಹಲವಾರು ಎಸ್‌ಎಂಎಸ್‌ಗಳನ್ನು ಕಳುಹಿಸಿ "ಆದಷ್ಟು ಬೇಗ ನನಗೆ ಫೋನ್ ಮಾಡು" ಎಂದಿದ್ದಳು. ಆದರೂ ಅವನ ಪತ್ತೆಯೇ ಇರಲಿಲ್ಲ.

ನಾನು ಬೆಂಗಳೂರಿಗೆ ವಾಪಸ್ ಬಂದನಂತರ ಸಂಗಮೇಶನನ್ನು ಪತ್ತೆಹಚ್ಚಲು ನಮ್ಮ ವಿನಯ್‌ಗೆ ಹೇಳಿದೆ. ಆತ ಎರಡು ಬಾರಿ ಖಾನಾವಳಿಗೆ ಹೋದಾಗಲೂ ಅದು ಬಂದ್ ಆಗಿತ್ತು. ಕೊನೆಗೆ ನಾನು "ಆ ಹೋಟೆಲ್ ಬಿಲ್ಡಿಂಗ್ ಮಾಲೀಕರನ್ನು ಕೇಳು, ಅವರಿಗೆ ಏನಾದರೂ ಗೊತ್ತಿರಬಹುದು" ಎಂದು ಸೂಚಿಸಿದೆ.

ಆಗಲೇ ಸಂಗಮೇಶನ ಸಾವಿನ ಸುದ್ದಿ ನಮ್ಮನ್ನು ಅಪ್ಪಳಿಸಿದ್ದು.

ಏನಾಗಿತ್ತೆಂದರೆ 'ಸಂಗಮೇಶ್ ಖಾನಾವಳಿ'ಯ ಯಶಸ್ಸಿನಿಂದ ಸ್ಫೂರ್ತಿ ಪಡೆದಿದ್ದ ಸಂಗಮೇಶ್ ಅಂತಹದ್ದೇ ಇನ್ನೊಂದು ಖಾನಾವಳಿಯನ್ನು ತೆರೆಯುವ ಸಾಹಸಕ್ಕೆ ಕೈಹಾಕಿದ್ದ. ಆದರೆ ಅದಕ್ಕೆಂದು ಬೇಕಾದಷ್ಟು ಹಣ ಅವನ ಕೈಯಲ್ಲಿರಲಿಲ್ಲ. ಲಕ್ಷಾಂತರ ರೂಪಾಯಿ ಸಾಲ ಮಾಡಿದ. ಎರಡೂ ಹೋಟೆಲ್‌ಗಳನ್ನು ನಡೆಸಿಕೊಂಡು ಹೋಗುವುದರಲ್ಲೇ ಹೈರಾಣಾದ. ಹೊಸ ಹೋಟೆಲ್ ಕೈಕಚ್ಚಿತು. ಸಾಲಗಾರರ ಕಾಟ ಪ್ರಾರಂಭವಾಯಿತು. ಸಂಗಮೇಶ್ ದಿಕ್ಕೆಟ್ಟ. ಬೆಂಗಳೂರಿಗೆ ಬಂದ. ದುರದೃಷ್ಟವಶಾತ್ ನಾನು ಆಗ ಇಲ್ಲಿರಲಿಲ್ಲ.

ಅವನಿಗೆ ಏನನ್ನಿಸಿತೊ. ಬೇಬಿಗೂ ಫೋನ್ ಮಾಡದೆ ಕಲಘಟಗಿಗೆ ಹಿಂದಿರುಗಿದ. ಕೆಲದಿನ ಮನೆಯಲ್ಲಿದ್ದವನು ಒಂದು ದಿನ ಯಾರಿಗೂ ಹೇಳದೆ ಮನೆ ಬಿಟ್ಟು ಹೊರಟುಹೋದ. ಆತ ಎಲ್ಲಿದ್ದಾನೆ, ಏನು ಮಾಡುತ್ತಿದ್ದಾನೆ ಎಂದು ಅವನ ಮನೆಯ ಯಾರಿಗೂ ಗೊತ್ತಿರಲಿಲ್ಲ.

ಹೋದ ವಾರ ಸಂಗಮೇಶ್ ಆತ್ಮಹತ್ಯೆ ಮಾಡಿಕೊಂಡ ನಂತರ ಗೊತ್ತಾಗಿದ್ದೇನೆಂದರೆ ಆತ ಪೂಣೆಗೆ ಹೋಗಿ ಅಲ್ಲಿ ಯಾವುದೋ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಮತ್ತು ಅಲ್ಲಿಯೇ ಜಿಗುಪ್ಸೆಗೆ ಬಿದ್ದು ನಿದ್ರೆ ಮಾತ್ರೆ ತೆಗೆದುಕೊಂಡು ಪ್ರಾಣಬಿಟ್ಟ ಎಂದು.

ಆತ್ಮಹತ್ಯೆ ಮಾಡಿಕೊಂಡ ಸಂಗಮೇಶ್ ತನ್ನ ತಂದೆ-ತಾಯಿಯನ್ನು ದುಃಖದಲ್ಲಿ ಮುಳುಗಿಸಿದ್ದಾನೆ, ಆತನನ್ನು ನಂಬಿದ್ದ ಯುವತಿಯ ಕೈಬಿಟ್ಟಿದ್ದಾನೆ. ಬದುಕಿದ್ದಾಗ ಅಪಾರ ಭರವಸೆ ಮೂಡಿಸಿದ್ದ ಸಂಗಮೇಶ್ ಕೊನೆಗೂ ತನ್ನ ಜೀವನದಲ್ಲಿ ಸಾಧಿಸಿದ್ದು ಇಷ್ಟನ್ನೇ ಎಂದು ಹೇಳುವುದಕ್ಕೆ ಬೇಸರ ಮತ್ತು ನೋವು ಆಗುತ್ತಿದೆ.

ನಮ್ಮ ಯುವಕರಿಗೆ ನಾನು ಹೇಳಲು ಇಷ್ಟಪಡುವುದು ಆತ್ಮಹತ್ಯೆ ಯಾವುದಕ್ಕೂ ಪರಿಹಾರವಲ್ಲ; ಬದಲಾಗಿ ಅದರಿಂದ ಆಗುವ ನಷ್ಟ ಮತ್ತು ನೋವುಗಳನ್ನು ಯಾರಿಂದಲೂ ಭರಿಸಲಾಗುವುದಿಲ್ಲ.

ಆದ್ದರಿಂದ ಕಷ್ಟಗಳು ಎದುರಾದರೆ ಅದನ್ನು ನಿಮ್ಮ ಪ್ರೀತಿಪಾತ್ರರೊಂದಿಗೆ ಹಂಚಿಕೊಳ್ಳಿ, ನಿಮ್ಮ ಮನಸ್ಸಿನಲ್ಲಿರುವ ನೋವುಗಳನ್ನು ಸ್ನೇಹಿತರ ಮುಂದೆ ತೋಡಿಕೊಂಡು ಅದನ್ನು ಹಗುರ ಮಾಡಿಕೊಳ್ಳಿ. ಈ ಜಗತ್ತು ಎಷ್ಟು ವಿಸ್ಮಯಕಾರಿ ಅಂದರೆ ನೀವು ಅಂದಾಜಿಸದೆ ಇರುವ ದಿಕ್ಕಿನಿಂದ ಸಹಾಯಹಸ್ತ ಚಾಚಿಬರುತ್ತದೆ. ಮಾತ್ರವಲ್ಲ, ಯಾವುದು ಇವತ್ತು ನಿಮಗೆ ಸಹಿಸಲಾಗದಷ್ಟು ನೋವು ಮತ್ತು ಸಂಕಟ ನೀಡುತ್ತಿದೆಯೋ ಅದೆಲ್ಲ ಸ್ವಲ್ಪ ಕಾಲದ ನಂತರ ಗೌಣವಾಗುತ್ತದೆ. ನಾನು ಹೇಳುತ್ತಿರುವುದು ನಿಜ, ನನ್ನನ್ನು ನಂಬಿ.

ಸಂಗಮೇಶ್ ಬದುಕಿದ್ದಾಗ ಓರ್ವ ಆದರ್ಶ ಯುವಕನಾಗಿದ್ದ, ಆದರೆ ತನ್ನ ಸಮಸ್ಯೆಗಳನ್ನು, ಆತಂಕಗಳನ್ನು ಯಾರೊಂದಿಗೂ ಹಂಚಿಕೊಳ್ಳದೆ ಅವುಗಳೇ ಆತನನ್ನು ವಶಪಡಿಸಿಕೊಳ್ಳುವುದಕ್ಕೆ ಬಿಟ್ಟ. ಅದು ಆತ ಮಾಡಿದ ಮಹಾ ದೊಡ್ಡ ತಪ್ಪು.

ನನ್ನ ಪರಿಸ್ಥಿತಿ ನೋಡಿ. "ಎಲ್ಲಾ ಅಡೆತಡೆಗಳನ್ನು ಮೀರಿ ನಿಲ್ಲುವುದನ್ನು ಸಂಗಮೇಶ್ ಎಂಬ ಯುವಕನಿಂದ ಕಲಿಯಿರಿ" ಎಂದು ಹೇಳುವ ಬದಲಾಗಿ ಇವತ್ತು "ಈ ಸಂಗಮೇಶನ ಹಾದಿ ಹಿಡಿಯಬೇಡಿ" ಎಂದು ಎಚ್ಚರಿಸುವ ದೌರ್ಭಾಗ್ಯವೂ ನನ್ನದಾಗಿದೆ.

ಸಂಗಮೇಶನ ತಂದೆ-ತಾಯಿ, ಪತ್ನಿ ಸಹೋದರನಿಗೆ ಮತ್ತು ಸಹೋದರಿಗೆ ಆತನ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ಸಿಗಲಿ ಎಂದು ಆಶಿಸುತ್ತೇನೆ.

• ಗೌರಿ

'ಅನಂತ್' ಮನೆಯಲ್ಲಿ ಷಡ್ಯಂತ್ರ

ಅನಂತ್ ಸಿಎಂ ರೆಡ್ಡಿ ಡಿಸಿಎಮ್!



ಸದ್ಯ ಯಡ್ಡಿ ವಿರುದ್ಧದ ಕಾರ್ಯಾಚರಣೆಯ ನೇತೃತ್ವ ಗಣಿರೆಡ್ಡಿಗಳದ್ದೇ ಆದರೂ ಹಿಂದೆ ನಿಂತು ಬುಗುರಿ ಆಡಿಸುತ್ತಿರುವುದು ಅನಂತ್‌ಕುಮಾರ್. ಅದಕ್ಕೆ ತಕ್ಕಂತೆ ಗಣಿರೆಡ್ಡಿಗಳ ಉಪಮುಖ್ಯಮಂತ್ರಿ ಗಾದಿಯ ದಾಹ ಕೂಡ ಉಲ್ಬಣಿಸಿದೆ. ಗಣಿಕಳ್ಳರ ಇಂಥ ಕಿತಾಪತಿಗೆ ಕೇಂದ್ರ ನಾಯಕಿ ಸುಷ್ಮಾ ಸ್ವರಾಜ್ ಪಂಪ್ ಹೊಡೆಯುತ್ತಿರುವುದೇ ಯಡ್ಡಿಯ ಆತಂಕಕ್ಕೆ ಮೂಲಕಾರಣವಂತೆ. ಇದು ಯಡ್ಡಿಗೆ ಗೊತ್ತಿಲ್ಲವೆಂದೇನಲ್ಲ, ಆ ಕಾರಣಕ್ಕೇ 'ಎಲ್ಲಿಯತನಕ ನಾನು ಸಿಎಂ ಆಗಿರ್ತೀನೋ ಅಲ್ಲಿಯತನಕ ಉಪಮುಖ್ಯಮಂತ್ರಿ ಅನ್ನೋ ಹುದ್ದೇನೇ ಇರೋದಿಲ್ಲ-ಎಂದು ಪದೇಪದೇ ಒತ್ತೊತ್ತಿ ಹೇಳುವ ಯಡ್ಡಿಯ ಹೊಟ್ಟೆ ಸಂಕಟಕ್ಕೆ ಬೇರೆ ಕಾರಣಗಳಿಲ್ಲ. ಶತಗತಾಯ ಗಣಿರೆಡ್ಡಿಗಳಿಗೆ ಡಿಸಿಎಂ ಹುದ್ದೆ ಬೇಕಿದೆ. ಗಣಿಕಳ್ಳರ ಇಂಥ ದುರಾಶೆಯನ್ನು ಮುಂದಿಟ್ಟುಕೊಂಡು ತಾನು ಮುಖ್ಯಮಂತ್ರಿಯಾಗಬೇಕೆಂಬ ದುರಾಲೋಚನೆಯೊಂದು ರಾಷ್ಟ್ರನಾಯಕ ಅನಂತ್‌ಕುಮಾರ್ ತಲೆ ಹೊಕ್ಕಿದೆ.

● ರಾ. ಸೋಮನಾಥ್
ra.somanath2010@gmail.com

ಇತ್ತ ಅತೃಪ್ತರು ಕೊಟ್ಟ ಪೆಟ್ಟು, ಅತ್ತ ಕುಮಾರಸ್ವಾಮಿ, ದೇವೇಗೌಡರು ಹಾಕಿದ ಬರೆಯಿಂದಾದ ಗಾಯಕ್ಕೆ ಯಡ್ಡಿಯ ಬೆನ್ನಿಗಿರುವವರೇ ಮತ್ತೆ ಮತ್ತೆ ಬರೆ ಎಳೆದರೆ ಹೇಗಿರುತ್ತೆ?

ಕರ್ಮವೋ, ದೌರ್ಭಾಗ್ಯವೋ ಗೊತ್ತಿಲ್ಲ ಈ ಸಲದ ವಿಜಯದಶಮಿಯಂತೂ ಯಡ್ಡಿಯ ಪಾಲಿಗೆ ವಾಸಿಸಲಾಗದ ಮತ್ತೊಂದು ಗಾಯಮಾಡಿದೆ. ಹೇಳಿಕೊಳ್ಳುವಂತಿಲ್ಲ, ಇದ್ದೂ ಅನುಭವಿಸುವಂತಿಲ್ಲ.



ಇದೇ ಅಕ್ಟೋಬರ್ 17ರಂದು ವಿಜಯದಶಮಿಯ ಹಬ್ಬದ ರಾತ್ರಿ ಬಸವನಗುಡಿಯ ಅನಂತ್‌ಕುಮಾರ್ ಮನೆಯಲ್ಲಿ ನಡೆದ ಷಡ್ಯಂತ್ರವೇನಾದರೂ ಸಾಕಾರಗೊಂಡಿತೆಂದರೆ ಬಿಜೆಪಿ ಆಳ್ವಿಕೆಯ ಉಳಿದೆರಡು ವರ್ಷಗಳ ಪೈಕಿ ಮೊದಲ ವರ್ಷ ಅನಂತ್‌ಕುಮಾರ್ ಮುಖ್ಯಮಂತ್ರಿಯಾಗಿ ಗಾಲಿ ಜನಾರ್ದನರೆಡ್ಡಿ ಉಪಮುಖ್ಯಮಂತ್ರಿಯಾಗುತ್ತಾರೆ. ಉಳಿದ ಒಂದು ವರ್ಷ ಬಾಕಿ ಇರುತ್ತದೆಯಲ್ಲ; ಅದೇ ಹೊತ್ತಿಗೆ ಚುನಾವಣೆ ಬೇರೆ ಬರುತ್ತದೆಯಲ್ಲ; ಆಗ ಜಗದೀಶ್ ಶೆಟ್ಟರ್‌ರನ್ನು ಮುಖ್ಯಮಂತ್ರಿ ಮಾಡಿ ಡಿಸಿಎಂ ಗಾದಿಗೆ ಬಳ್ಳಾರಿಯ ರೌಡಿ ಶ್ರೀರಾಮುಲುವನ್ನು ತರುವುದು!

ಇದು ವಿಜಯದಶಮಿಯ ರಾತ್ರಿ ಅನಂತ್‌ಕುಮಾರ್ ಮನೆಯಲ್ಲಿ ರೂಪುಗೊಂಡ ಯಡ್ಡಿ ದಮನದ ಬ್ಲೂಪ್ರಿಂಟು ಮಾತ್ರ.

ನಾನಿಲ್ಲ ಅಂದ್ರೆ...?

ಇದು ಯಡ್ಡಿಗೆ ಗೊತ್ತಿಲ್ಲವೆಂದೇನಲ್ಲ, ಆ ಕಾರಣಕ್ಕೇ 'ಎಲ್ಲಿಯತನಕ ನಾನು ಸಿಎಂ ಆಗಿರ್ತೀನೋ ಅಲ್ಲಿಯತನಕ ಉಪಮುಖ್ಯಮಂತ್ರಿ ಅನ್ನೋ ಹುದ್ದೇನೇ ಇರೋದಿಲ್ಲ-ಎಂದು ಪದೇಪದೇ ಒತ್ತೊತ್ತಿ ಹೇಳುವ ಯಡ್ಡಿಯ ಹೊಟ್ಟೆ ಸಂಕಟಕ್ಕೆ ಬೇರೆ ಕಾರಣಗಳಿಲ್ಲ, ಶತಗತಾಯ ಗಣಿರೆಡ್ಡಿಗಳಿಗೆ ಡಿಸಿಎಂ ಹುದ್ದೆ ಬೇಕಿದೆ. ಗಣಿಕಳ್ಳರ ಇಂಥ ದುರಾಶೆಯನ್ನು ಮುಂದಿಟ್ಟುಕೊಂಡು ತಾನು ಮುಖ್ಯಮಂತ್ರಿಯಾಗಬೇಕೆಂಬ ದುರಾಲೋಚನೆಯೊಂದು ರಾಷ್ಟ್ರನಾಯಕ ಅನಂತ್‌ಕುಮಾರ್ ತಲೆ ಹೊಕ್ಕಿದೆ. ಇಷ್ಟೇ ಆಗಿದೆ ಎಂದಮೇಲೆ ತಾನೂ ಏಕೆ ಮುಖ್ಯಮಂತ್ರಿಯಾಗಬಾರದೆಂಬ ಲೋಭಿತನಕ್ಕೆ ಶೆಟ್ಟರು ಬೀಳದೇ ಇರುತ್ತಾರಾ?

ಬಹುಶಃ ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿಯೇ ಯಡ್ಡಿ ತಮ್ಮ ನಾಲಿಗೆಯ ಹಿಡಿತ ಕಳಕೊಳ್ಳುತ್ತಿದ್ದಾರೆ. ಅತೃಪ್ತರು ಬೆನ್ನಿಗಿರಿದು ಇನ್ನೇನು ರಾಷ್ಟ್ರಪತಿ ಆಳ್ವಿಕೆ ಬಂದೇಬಿಟ್ಟಿತು ಎಂಬಂಥ ಅಲ್ಲೋಲಕಲ್ಲೋಲದ ಪರಿಸ್ಥಿತಿಯಲ್ಲೂ ಗೋಲ್ಡನ್ ಪಾಮ್ ರೆಸಾರ್ಟ್‌ನಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಯಡ್ಡಿ ಹೇಳಿದ್ದೇನು?

'ನಾನು ಮುಖ್ಯಮಂತ್ರಿ ಆಗಿದ್ದರೇನೇ ಸರ್ಕಾರ ಉಳಿತದೆ. ಪಕ್ಷಾನೂ ಉಳಿತದೆ. ಹಾಗೊಮ್ಮೆ ನಾನು ಮುಖ್ಯಮಂತ್ರಿಯಾಗಿರೋದೇ ಬೇಡ ಅಂದ್ರೆ ಸರ್ಕಾರ ಯಾಕಿರಬೇಕು? ಪಕ್ಷ ತಾನೇ ಯಾಕಿರಬೇಕು?'

ಇದು ಕೇವಲ ಗೋಲ್ಡನ್ ಪಾಮ್ ರೆಸಾರ್ಟಿನ ಶಾಸಕಾಂಗ ಪಕ್ಷದ ಸಭೆಯಲ್ಲಷ್ಟೇ ಯಡ್ಡಿಯ ಬಾಯಿಂದ ಬಂದ ಮಾತಲ್ಲ, ಇದಾಗಿ ಆರನೇ ದಿನಕ್ಕೆ ಅಂದರೆ ಅಕ್ಟೋಬರ್ 16 ರಂದು ತಮ್ಮ ಮನೆಯಲ್ಲೇ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಮತ್ತಿಂಥದ್ದೇ ಆರ್ತನಾದ ಯಡ್ಡಿಯ ಬಾಯಿಂದ ಹೊಮ್ಮುತ್ತದೆ. 'ನಾಯಕತ್ವದ ಬದಲಾವಣೆ ಆಗಬೇಕು ಅಂತ ಯಾರಾದ್ರೂ ಒತ್ತಾಯ ಮಾಡೋದಾದ್ರೆ ಒಂದಂತೂ ನೆನಪಿಟ್ಟುಕೊಳ್ಳಿ, ಇದು ನನ್ನ ಸರ್ಕಾರ. ನಾನು ಮುಖ್ಯಮಂತ್ರಿ ಆಗಿದ್ದರಷ್ಟೇ ಸರ್ಕಾರವೂ ಉಳೀತದೆ ಪಕ್ಷವೂ ಉಳಿಯುತ್ತದೆ!'


ವಿಮಲಾಗೌಡ


ನಂದೀಶ್


ಮೋಹನ್

ಅನಂತ್‌ನ ಹಬ್ಬದೂಟ

ಪಕ್ಷೇತರ ಮಂತ್ರಿಗಳು, ತನ್ನದೇ ಪಕ್ಷದ ಅತೃಪ್ತರು ತಿರುಗಿಬಿದ್ದು ಇನ್ನೇನು ಸರ್ಕಾರವೇ ನಿಕಾಲಿಯಾಗುತ್ತಿದೆ. ಎನ್ನುವಾಗಲೂ ಯಡ್ಡಿ ತಾನು ಮುಖ್ಯಮಂತ್ರಿ ಆಗಿದ್ದರಷ್ಟೇ ಸರ್ಕಾರ ಮತ್ತು ಪಕ್ಷ ಉಳಿಯಲು ಸಾಧ್ಯ ಎಂದು ಮತ್ತೆ ಮತ್ತೆ ಗೋಳಾಡುತ್ತಾರೆಂದರೆ; ಹೊರಗಿನ ಅಪಾಯದಷ್ಟೇ ಒಳಗಿನ ಅಪಾಯವೂ ತನ್ನ ವಿನಾಶಕ್ಕಾಗಿ ಹಾತೊರೆಯುತ್ತಿರುವುದು ಗೊತ್ತಿರಲೇಬೇಕಲ್ಲವೆ?

ಯಾವ ಅಕ್ಟೋಬರ್ 16ರಂದು ತಮ್ಮ ಮನೆಯಲ್ಲೇ ಕರೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಯಡ್ಡಿ ಮೇಲ್ಕಂಡಂತೆ ಎಚ್ಚರಿಕೆ ಕೊಟ್ಟಿದ್ದರೋ ಅದರ ಮರುದಿನವೇ ಅಂದರೆ ವಿಜಯದಶಮಿ ಹಬ್ಬದ ರಾತ್ರಿಯೇ ನಡೆಯಬಾರದ್ದು ನಡೆದುಹೋಗಿತ್ತು. ಪ್ರತಿ ವಿಜಯದಶಮಿಯಂದು ಸಂಸದ ಅನಂತ್‌ಕುಮಾರ್ ತಮ್ಮ ಆಪ್ತರು, ಹಿತೈಷಿಗಳನ್ನು ಕರೆದು ಹಬ್ಬದೂಟ ಮಾಡಿಸುತ್ತಾರೆ. ನಿನ್ನೆ ಮೊನ್ನೆಯ ತನಕ ಇದು ಕೇವಲ ಅನಂತ್ ಆಪ್ತ ಬಳಗಕ್ಕಷ್ಟೇ ಸೀಮಿತವಾಗಿದ್ದದ್ದು ಈ ಬಾರಿ ವಿಚಿತ್ರ ರಾಜಕೀಯಕ್ಕೆ ತಿರುಗಿತ್ತು.

ಬಸವನಗುಡಿಯ ಅನಂತ್ ಮನೆಯ ಹಬ್ಬದೂಟಕ್ಕೆ ಈ ಬಾರಿ ಯಾವತ್ತಿಗೂ ಬರದಿದ್ದ ಗಣಿಕಳ್ಳ ಗಾಲಿ ಜನಾರ್ದನ ರೆಡ್ಡಿ ಬಂದಿದ್ದ. ಆತನ ಬೆನ್ನಿಗೇ ಸಂಸದರಾದ ಪಿ.ಸಿ. ಮೋಹನ್ ಮತ್ತು ಡಿ.ಬಿ. ಚಂದ್ರೇಗೌಡರು ಬಂದಿದ್ದಾರೆ. ಜೊತೆಗೆ ಗೋವಿಂದ ಕಾರಜೋಳ, ಚಿಂಚೋಳಿಯ ಶಾಸಕ ಸುನೀಲ್ ವಲ್ಯಾಪುರೆ, ತಿಪಟೂರು ಶಾಸಕ ನಾಗೇಶ್ ಒಬ್ಬೊಬ್ಬರಾಗಿ ಹಾಜರಾಗುತ್ತಾರೆ. ಸಂಜೆ ಏಳುಗಂಟೆಯಾಗುತ್ತಿದ್ದಂತೆ ಕೆ.ಆರ್. ಪುರಂ ಶಾಸಕ ನಂದೀಶ್‌ರೆಡ್ಡಿ, ಜಯನಗರದ ವಿಜಯಕುಮಾರ್, ಬೊಮ್ಮನಹಳ್ಳಿಯ ಸತೀಶ್‌ರೆಡ್ಡಿ, ಯಲಹಂಕದ ವಿಶ್ವನಾಥ್‌ರೆಡ್ಡಿ, ದಾಸರಹಳ್ಳಿಯ ಮುನಿರಾಜು, ರಾಜರಾಜೇಶ್ವರಿನಗರದ ಶ್ರೀನಿವಾಸ್, ಬೆಂಗಳೂರು ದಕ್ಷಿಣದ ಕೃಷ್ಣಪ್ಪ ಇತ್ಯಾದಿ ಬೆಂಗಳೂರಿನ ಒಬ್ಬೊಬ್ಬರೇ ಶಾಸಕರಾದಿಯಾಗಿ ಅನಂತ್ ಮನೆ ಹೊಕ್ಕಿದ್ದಾರೆ. ಸುರೇಶ್‌ಕುಮಾರ್, ಕಟ್ಟಾ, ಅಶೋಕ್ ಮತ್ತು ಕರಂದ್ಲಾಜೆಯ ಹೊರತಾಗಿ ಮಂತ್ರಿಗಳಲ್ಲದ ಬೆಂಗಳೂರಿನ ಅಷ್ಟೂ ಶಾಸಕರೆಲ್ಲ ಆವತ್ತು ಅನಂತ್ ಮನೆಯಲ್ಲಿದ್ದರು.

ಚಂದ್ರೇಗೌಡನ ಬತ್ತಿ

ಕೆಲ ಹೊತ್ತು ಗಾಲಿ ಜನಾರ್ದನರೆಡ್ಡಿಯ ಜೊತೆ ಪ್ರತ್ಯೇಕವಾಗಿ ಏನೋ ಗಹನ ಸಂಗತಿಯನ್ನು ಚರ್ಚಿಸಿದಂತೆ ಮಾಡಿದ ಅನಂತ್‌ಕುಮಾರ್ ತಕ್ಷಣವೇ ಮಹಿಳಾ ನಾಯಕಿ ವಿಮಲಾಗೌಡರಿಗೆ ಫೋನ್ ಮಾಡಿ ಬರಹೇಳುತ್ತಾರೆ. ಅರ್ಧ ಗಂಟೆಯಲ್ಲೇ ಪ್ರತ್ಯಕ್ಷರಾದ ವಿಮಲಾಗೌಡರನ್ನು ಪಿ.ಸಿ. ಮೋಹನ್ ಮತ್ತು ಚಂದ್ರೇಗೌಡರ ಜೊತೆ ಕರೆದೊಯ್ದು ಮತ್ತೇನನ್ನೋ ಚರ್ಚಿಸಿದ್ದೇ ಮತ್ತೆ ಹೊರಬಂದು ಎಲ್ಲರಿಗೂ ಊಟ ಮಾಡುವಂತೆ ಕೋರುತ್ತಾರೆ. ರಾತ್ರಿ 9ಕ್ಕೆ ಶುರುವಾದ ಊಟ, ಕೂಟ, ಚರ್ಚೆ ಇತ್ಯಾದಿಗಳೆಲ್ಲ ಮುಗಿದದ್ದು ರಾತ್ರಿ 11ಕ್ಕೆ.

ದುಂಡುಮೇಜಿನ ಗೋಷ್ಠಿಯಂತೆ ನಡೆದ ಹಬ್ಬದೂಟದ ಮಧ್ಯೆಯೇ ಡಿ.ಬಿ. ಚಂದ್ರೇಗೌಡರು 'ಲೀಡರ್‌ಶಿಪ್ ಚೇಂಜ್ ಆದರಷ್ಟೇ ಸರ್ಕಾರ ಉಳಿಯಬಹುದೇನೋ' ಎಂದು ಪೀಠಿಕೆ ಹಾಕುತ್ತಾರೆ. ಹೌದು There is no alternative...!ಎಂದು ಪಿ.ಸಿ. ಮೋಹನ್ ದನಿಗೂಡಿಸಿದ್ದಾರೆ. ಚಿಂಚೋಳಿ ಶಾಸಕ ಸುನೀಲ್ ವಲ್ಯಾಪುರೆ ಮತ್ತು ತಿಪಟೂರಿನ ನಾಗೇಶ್ ಏಕಾಏಕಿ ಆವೇಶಭರಿತರಾಗಿ ಅನಂತ್‌ಕುಮಾರ್‌ರತ್ತ ಕೈಮಾಡಿದ್ದೇ 'ನೋಡಿ ಸಾರ್; ನೀವು ಸಿಎಂ ಆಗೋದಾದ್ರೆ ಮಾತ್ರ ನಾವು ಸುಮ್ಮನಿರ್ತೀವಿ. ಇದನ್ನೆಲ್ಲ ನೋಡ್ಕೊಂಡು ನಾವಂತೂ ಸುಮ್ಮನಿರೋಕ್ಕಾಗಲ್ಲ, ಈ ಮನುಷ್ಯ ಸಿ.ಎಂ. ಕುರ್ಚಿಗೇ ನಾಲಾಯಕ್ಕು...' ಎಂದು ಕೆಂಡಾಮಂಡಲರಾಗುತ್ತಾರೆ. ಅಷ್ಟಕ್ಕೇ ನಂದೀಶ್‌ರೆಡ್ಡಿ ಅನಂತ್‌ರನ್ನುದ್ದೇಶಿಸಿ 'ನೀವೇನೇ ಡಿಸೀಷನ್ ತಗೊಂಡ್ರೂ ನಾವೆಲ್ಲಾ ನಿಮ್ಮ ಬೆನ್ನಿಗಿದ್ದೀವಿ ಸಾರ್' ಎಂದು ಬಿಟ್ಟ. ಜಯನಗರದ ವಿಜಯ್‌ಕುಮಾರ್, ಬೆಂಗಳೂರು ದಕ್ಷಿಣದ ಕೃಷ್ಣಪ್ಪ ಮತ್ತು ಬೊಮ್ಮನ ಹಳ್ಳಿಯ ಸತೀಶ್‌ರೆಡ್ಡಿ ಸೇರಿ ದಂತೆ ನೆರೆದಿದ್ದ ಬೆಂಗಳೂರಿನ ಶಾಸಕರೆಲ್ಲ ನಂದೀಶ್‌ರೆಡ್ಡಿಯ ಮಾತಿಗೆ ತಲೆ ಅಲ್ಲಾಡಿಸುತ್ತಾರೆ.

ರಾತ್ರಿ 11ರ ಹೊತ್ತಿಗೆ ನಾಯಕಿ ವಿಮಲಾಗೌಡರ ಬಾಯಿಂದ ನಿರ್ಣಯ ಹೊರ ಬಿದ್ದಿದೆ. ಆ ಪ್ರಕಾರ ಬಿಜೆಪಿ ಆಳ್ವಿಕೆ ಇನ್ನೆರಡು ವರ್ಷ ಬಾಕಿಯಿದ್ದಂತೆ ಅನಂತ್‌ಕುಮಾರ್ ಮುಖ್ಯಮಂತ್ರಿ ಯಾಗುವುದು ಮತ್ತು ಜನಾರ್ದನರೆಡ್ಡಿ ಉಪಮುಖ್ಯಮಂತ್ರಿಯಾಗುವುದು. ಕೊನೆಯ ವರ್ಷ ಅಂದರೆ ಚುನಾವಣೆ ಸಮೀಪಿಸುತ್ತಿದ್ದಂತೆ ಉಳಿಕೆ ಒಂದು ವರ್ಷದ ಮಟ್ಟಿಗೆ ಲಿಂಗಾಯಿತರ ಆಕ್ರೋಶ ತಣಿಸಲು ಜಗದೀಶ್ ಶೆಟ್ಟರನ್ನು ಮುಖ್ಯಮಂತ್ರಿಗಾದಿಗೆ ತಂದು ಉಪಮುಖ್ಯಮಂತ್ರಿಯಾಗಿ ಶ್ರೀರಾಮುಲುವನ್ನು ಮಾಡುವುದು!

ಇಂಥದೊಂದು ಷಡ್ಯಂತ್ರ ಅಖೈರುಗೊಳಿಸಿಕೊಂಡೇ ಗಾಲಿ ಜನಾರ್ದನರೆಡ್ಡಿ ಅನಂತ್‌ಕುಮಾರ್ ಮನೆ ಬಿಟ್ಟಿದ್ದಾನೆ. ಡಿ.ಬಿ. ಚಂದ್ರೇಗೌಡ ಮತ್ತು ಪಿ.ಸಿ. ಮೋಹನ್ ಬೆಂಕಿಗೆ ಗಾಳಿ ಹಾಕಿದ್ದಾರೆ. ಒಂದು ಡಜನ್ ಬಿಜೆಪಿ ಶಾಸಕರ

▶▶ 13

ಮಂತ್ರಿಗಳೆಂಬ ದಂಡಪಿಂಡಗಳೂ, ಕಾಯಲು ನಿಂತ ತ್ರಿಮೂರ್ತಿಗಳೂ


ಉಮೇಶ್ ಕತ್ತಿ


ಸುರೇಶ್‌ಕುಮಾರ್


ಬಸ

ಸೆದ್ಯದ ಆಪತ್ತಿನಿಂದ ಯಡ್ಡಿಯನ್ನು ಬಚಾವು ಮಾಡಲು ಹೆಣಗಾಡುತ್ತಿರುವವರಾದರೂ ಯಾರು? ಅಶೋಕ್, ಅನಂತ್‌ಕುಮಾರ್ ಮತ್ತು ಗಣಿರೆಡ್ಡಿಯ ಹೊರತಾಗಿ ಮಿಕ್ಕೆಲ್ಲ ಮಂತ್ರಿಗಳು ತಾವಾಯಿತು ತಮ್ಮ ಖಿಮಾಯಿಯಾಯಿತು ಎಂಬಂತೆ ತೆಪ್ಪಗೆ ಇದ್ದು ಬಿಟ್ಟಿದ್ದಾರೆ. ನಿನ್ನೆಮೊನ್ನೆಯ ತನಕ ಗೃಹಮಂತ್ರಿಯಾಗಿದ್ದ ವಿ.ಎಸ್. ಆಚಾರ್ಯರ ಬೆನ್ನಿಗೆ ಇನ್ನೊಬ್ಬ ಶಾಸಕನಿಲ್ಲ, ಕಾಂಟ್ರಾಕ್ಟು, ಕಮೀಶನ್, ನೇಮಕಾತಿ ದಂಧೆಯಲ್ಲಿ ಮೂಟೆಗಟ್ಟಲೇ ರೊಕ್ಕ ಬಾಚಿಕೊಂಡು ಅದನ್ನು ಮನೆಗೆ ಸಾಗಿಸಿ ಪತ್ನಿ ಚೆನ್ನಮ್ಮನ ಕೈಗೊಪ್ಪಿಸಿ ಬರುವುದರಲ್ಲೇ ಬಿಜಿಯಾಗಿರುವ ಬಸವರಾಜ ಬೊಮ್ಮಾಯಿ ಒಬ್ಬೇ ಒಬ್ಬ ಶಾಸಕನಿಗೂ ನಯಾಪೈಸೆಯ ನೆರವಾಗಿಲ್ಲ.

ಉಮೇಶ್ ಕತ್ತಿ, ಸುರೇಶ್ ಕುಮಾರ್, ಕಾಗೇರಿ, ಮುರುಗೇಶ್ ನಿರಾಣಿ ಇತ್ಯಾದಿಗಳೆಲ್ಲ ಮಂತ್ರಿಗಳೇ ಆದರೂ ಯಡ್ಡಿಯ ಪಾಲಿಗೆ ದಂಡಪಿಂಡಗಳೇ. ಇವರೆಲ್ಲ ಕನಿಷ್ಠ ಒಬ್ಬೊಬ್ಬ ಶಾಸಕನನ್ನು ಮೇಂಟೇನ್ ಮಾಡಿ ಬೆನ್ನಿಗಿಟ್ಟುಕೊಂಡಿದ್ದರೂ ಯಡ್ಡಿಗೆ ಈ ಗತಿ ಬರುತ್ತಿರಲಿಲ್ಲ. ಅತ್ತ ಹೈಕಮಾಂಡಿಗೂ ರೊಕ್ಕ ಪೂರೈಸಿ, ಇತ್ತ ಆರೆಸ್ಸೆಸ್ ಹೊಟ್ಟೆಯನ್ನೂ ಹೊರೆದು, ಜೊತೆಗೆ ತಾನೂ ತನ್ನ ಮಕ್ಕಳೂ ಸಾಕಷ್ಟು ಖಿಮಾಯಿಸುವುದರಲ್ಲೇ ಹೈರಾಣಾಗುವ ಯಡ್ಡಿಗೆ ಶಾಸಕರ ಕಪ್ಪಕಾರ್ಪಣ್ಯಕ್ಕೆ ತಲೆ ಕೊಡಲು ಟೈಮಾದರೂ ಎಲ್ಲಿದೆ?

ಸಂಪುಟದ ಇತರೇ ಮಂತ್ರಿಗಳು ಕನಿಷ್ಠ ಒಬ್ಬೊಬ್ಬ ಶಾಸಕರನ್ನು ಸಂಭಾಳಿಸಿಕೊಂಡಿದ್ದರೂ ಯಡ್ಡಿಯ ತಾಪತ್ರಯ ಕಮ್ಮಿಯಾಗುತ್ತಿತ್ತು. ಈಗ Once again ಯಡ್ಡಿ ಗಣಿರೆಡ್ಡಿಗಳನ್ನೋ, ಅಶೋಕ್‌ರನ್ನೋ ಕಾಡಿಬೇಡಿ ಶಾಸಕರನ್ನು ಸಂಭಾಳಿಸುವಂತೆ ನೋಡಿಕೊಳ್ಳಬೇಕಾಗಿದೆ. ಸದ್ಯ ಅನಂತ್, ಅಶೋಕ್ ಮತ್ತು ಗಣಿರೆಡ್ಡಿಗಳು ಟ್ರಬಲ್ ಶೂಟರ್‌ಗಳಾಗಿ ಕಾರ್ಯಾಚರಣೆಗಿಳಿದಿದ್ದಾರಾದರೂ ಈ ಮೂವರೂ ಪ್ರತ್ಯೇಕವಾಗಿ ತಮ್ಮದೇ ರೀತಿಯಲ್ಲಿ ಆಪರೇಟ್ ಮಾಡುತ್ತಿದ್ದಾರೆ.

ಹೀಗಾಗಿ ಅನಂತ್, ರೆಡ್ಡಿ, ಅಶೋಕ್ ಪೈಕಿ ಪ್ರತಿಯೊಬ್ಬರಿಗೂ ತಮ್ಮಿಂದಾಗಿಯೇ ಯಡ್ಡಿ ಸರ್ಕಾರ ಉಳಿದಿದೆ ಎಂಬ ಹಮ್ಮು ನೆತ್ತಿಗೇರಿದೆ. ತಾನೇ ನಿಂತು ಸರ್ಕಾರವನ್ನು ಉಳಿಸಿರುವಾಗ ತಾನೇಕೆ ಮುಖ್ಯಮಂತ್ರಿಯಾಗಬಾರದು ಎಂಬುದು ಅನಂತ್ ದುರಾಶೆಯಾದರೆ, ಅಶೋಕ್ ಮತ್ತು ಗಾಲಿರೆಡ್ಡಿ ಉಪಮುಖ್ಯಮಂತ್ರಿಯಾಗಲು ಹೊರಟಿದ್ದಾರೆ.

ಏನೋ ಮಾಡಲು ಹೋಗಿ ಇನ್ನೇನನ್ನೋ ಮಾಡಿಕೊಂಡಂತಾಗಿದೆ ಯಡ್ಡಿಯ ಪಾಡು.



ಎಕ್ಕ-ರಾಜ-ರಾಣಿ ನಿನ್ನ ಕೈಯೊಳಗೆ...
ಡಿಮಣ್ಣು ಜನರ ಬಾಯೊಳಗೆ

ಟಕ ರಾಜಕೀಯ ಕ್ಷಣದಿಂದ ಕ್ಷಣಕ್ಕೆ ರಂಗೇರು ಖ್ಯಮಂತ್ರಿ ಯಡಿಯೂರಪ್ಪ ಈಗ ಬಿಜೆಪಿಯ ಡ್ ತಾಳಕ್ಕೆ ತಕ್ಕಂತೆ ಕುಣಿಯುವ ಬದಲು ತರನ ಲೋ-ಕಮಾಂಡ್ ತಾಳಕ್ಕೆ ತಕ್ಕಂತೆ ತಾಗಿದೆ! ಯಾಕೆಂದರೆ ಈಗ ಬಿಜೆಪಿ ಸರ್ಕಾರದ ಳಿವಿನ ಪ್ರಶ್ನೆ 'ಲೋ-ಕಮಾಂಡ್' ವರ್ತೂರ್ ಬ ಅವಕಾಶವಾದಿ-ಗಣಿಕಳ್ಳ ಜನಾರ್ದನ ರೆಡ್ಡಿ ಹ್ಕೊಂಡ ಶಾಸಕನೆಂಬ ಕತ್ತೆಯ ಕೈಯಲ್ಲಿದೆ. ಷಿತ 'ದೇವರ ಪಕ್ಷ'ವಾದ ಬಿಜೆಪಿ ಇಂತಹ 'ಪುಣ್ಯ'ಪಡೆಯಲು ಯೋಗ್ಯವಾಗಿದೆ ಬಿಡಿ! ಬಹಳ ಜನಪ್ರಿಯವಾಗಿರುವ 'ಜಾಕಿ' ಸಿನಿಮಾ ಕ್ಕಾ-ರಾಜಾ-ರಾಣಿ' ತರಹವೇ ಇವತ್ತು ಬಿಜೆಪಿಯ ಖ್ಯ ಕಾರ್ಡ್‌ಗಳು ಈ ಪಕ್ಷೇತರ ವರ್ತೂರು ಯಲ್ಲಿದೆ. ಹಾಗಾಗಿ ಪ್ರಕಾಶನ ಎಲ್ಲ ಡಿಮ್ಯಾಂಡು ಒಪ್ಪಿಕೊಂಡರೆ ಸರಿ. ಇಲ್ಲವೆಂದರೆ ಮುಖ್ಯಮಂತ್ರಿ ಬಾಯಿಯಲ್ಲಿ 'ಹಿಡಿ ಮಣ್ಣು' ಗ್ಯಾರಂಟಿ!!

ಶ.ಪ್ರಕಾಶನ ಡಿಮ್ಯಾಂಡುಗಳು ಒಂದೆಡೆಯಾದರೆ ಪಕ್ಷದ ತರೆಹೇವಾಗಿ ಶಾಸಕರ ಡಿಮ್ಯಾಂಡುಗಳೂ ಉದ್ಭವವಾಗಿದ್ದು ಯಡ್ಡಿಗೆ ತಲೆನೋವು ತಂದಿದೆ. ಸದ್ಯಕ್ಕೆ ಎಲ್ಲಾ ಬಿಜೆಪಿ ಶಾಸಕರ ಆಸೆ ಒಂದೇ. ಮಾಡಿ ಯಡ್ಡಿ ಸಂಪುಟದಲ್ಲಿ ಸಚಿವ ಸ್ಥಾನವನ್ನು ಂಬುದು. ಅದಕ್ಕಾಗಿ ಈಗ ಶಾಸಕರು ತಮ್ಮ ಕ್ತಿ ಬಳಸಿ ಮುಖ್ಯಮಂತ್ರಿಯನ್ನು ಓಲೈಸಲು ದ್ದಾರೆ.

ಗಿನ ಅಪ್ಪಚ್ಚುರಂಜನ್ ಮೊನ್ನೆ ತಲಕಾವೇರಿಯಿಂದ ನ್ನು ತಂದು ಸಿಎಂಗೆ ಕೊಟ್ಟು 'ಪುನೀತ'ರಾದರು. ಷತ್ ಸದಸ್ಯ ವೀರಯ್ಯ ಒಂದಿಷ್ಟು ದಲಿತ ನ್ನು ಕಟ್ಟಿಕೊಂಡು ಸಿಎಂ ಮನೆ ಮುಂದೆ ತನ್ನ ನ್ನ ತೋರಿಸಿ ಮಂತ್ರಿ ಪದವಿಗೆ ಅರ್ಜಿ ಸಿದರು. ಈ ಮಧ್ಯೆ ಪ್ರಕಾಶ್‌ಗೌಡ ಕೂಡಾ ಕಡಿಮೆಯಿಲ್ಲ ಎಂದು ಸಿಎಂ ನಿವಾಸದ ಮುಂದೆ ಮಾನಿಗಳ ಸಮ್ಮುಖದಲ್ಲಿ ಯಡ್ಡಿಗೆ ಹಾರತುರಾಯಿ ಇದೀಗ ಗಂಗಾವತಿಯ ಪರಣ್ಣ ಮುನವಳ್ಳಿ ವಿ ಕ್ಯಾಮೆರಾಮನ್‌ಗಳ ಜೊತೆಗೆ ಸಿಎಂ ಮನೆಗೆ ಟ್ಟು ಅವರಿಗೆ ಶಾಲು ಹೊದಿಸಿ ಹಾರ ಹಾಕಿ ಪದವಿಗಾಗಿ ತನ್ನ ಮನವಿ ನೀಡಿದ್ದಾನೆ.

ಲ್ಲದರ ಮಧ್ಯೆ ಚಿಕ್ಕಮಗಳೂರಿನ ಶಾಸಕ ತಾನು ಈಗಾಗಲೇ ಮಂತ್ರಿಯಾಗಿದ್ದೇನೆ ಮೆಯಲ್ಲೇ ಟಿವಿಗಳಿಗೆ ಸಂದರ್ಶನ ದ್ದನೆ. ತುಮಕೂರಿನ ಸೊಗಡು ಶಿವಣ್ಣ ಗೇ ಆಗುತ್ತಾರೆ ಎಂದು ಅವರ ಅಭಿಮಾನಿ ಡುತ್ತಿದ್ದಾರೆ. ಜೊತೆಗೆ ಬೆಳ್ಳುಬ್ಬಿ ತೆರ ಸ್ಥಾನ ಬಿಜಾಪುರದ ಅಪ್ಪು ಪಟ್ಟಣಶೆಟ್ಟಿಗೆ ಸಿಂದು ಆತನ ಹಿಂಬಾಲಕರು ಖುಷಿ ದ್ದಾರೆ.

ಹೊರತಾಗಿಯೂ ತಮ್ಮ ತಮ್ಮ ಜಿಲ್ಲೆಯ ತಮ್ಮ ತಮ್ಮ ಜಾತಿಯ ನೆಪದಲ್ಲಿ ಮತ್ತು ತಮ್ಮ ಡ್‌ಫಾದರ್‌ಗಳ ಮಾರ್ಗದರ್ಶನದಲ್ಲಿ ತಮಗೆ ಸ್ಥಾನ ನೀಡಲೇಬೇಕೆಂದು ಯಡ್ಡಿ ಮುಂದೆ ಇನ್ನೂ ಶಾಸಕರು ದುಂಬಾಲು ಬೀಳುತ್ತಲೇ ಇದ್ದಾರೆ. ಸು ತಮಾಷೆಯ ಸಂಗತಿ ಏನೆಂದರೆ, ಹೀಗೆ ಶಕ್ತಿ ನಡೆಸಿದ್ದರೆ ಮಾತ್ರ ಯಡ್ಡಿ ಮಂತ್ರಿಸ್ಥಾನ ನೀಡುತ್ತಾರೆ ರಾಂಗ್ ಸಿಗ್ನಲ್‌ಅನ್ನು ಶಾಸಕರಿಗೆ ನೀಡಿದ್ದೇ ಸಚಿವ ಸೋಂ ರೇಣುಕಾಚಾರ್ಯ! ಆದರೆ ದಿನಕ್ಕೊಬ್ಬ ಮ್ಮ ಮನೆ ಮುಂದೆ ಹಾಜರಾಗಿ ಮಂತ್ರಿಸ್ಥಾನಕ್ಕಾಗಿ ಜರಾಯಿಸಿರುವುದನ್ನು ನೋಡಿ ಯಡ್ಡಿಗೆ ರೋಸಿ ದೆ. ಆದರೆ ಪಾಪ, ಈ ಹಿಂದೆ ಇಂತಹ ಅರ್ಜಿ ವಾಚಾಮಗೋಚರ ದಬಾಯಿಸುತ್ತಿದ್ದ ಯಡ್ಡಿಯ ಈಗ ಬಂದ್ ಆಗಿದೆ. ಯಾಕೆಂದರೆ ಇದೇ ಶಾಸಕರ ಬೆಂಬಲ ಅವರಿಗೆ ಬೇಕಲ್ಲವೆ ತಮ್ಮ ಮುಖ್ಯಮಂತ್ರಿ ಗಾದೆಯನ್ನು ರಕ್ಷಿಸಿಕೊಳ್ಳಲು!! ಆದ್ದರಿಂದ ಬಿಜೆಪಿ ಶಾಸಕರ ಎಲ್ಲಾ ಏಲುಪೈಲಾಟಗಳನ್ನು ಸಹಿಸಿಕೊಳ್ಳುವ ದರ್ದು ಇವತ್ತು ಯಡಿಯೂರಪ್ಪ ನಂದು.

ಇದೆಲ್ಲಾ ಹೊರನೋಟಕ್ಕೆ ನಡೆಯುತ್ತಿರುವುದು. ಆದರೆ ಜನರಿಗೆ ಕಾಣಿಸದಂತೆ ಒಳಗೊಳಗೇ ಯಡ್ಡಿ ಮೇಲೆ ಇನ್ನಷ್ಟು ಒತ್ತಡವನ್ನು ಹೇರಲಾಗುತ್ತಿದೆ. ಒಂದೆಡೆ ಬಿಜೆಪಿ ನಾಯಕರ ಶಿಫಾರಸ್ಸುಗಳು, ಇನ್ನೊಂದೆಡೆ ಆರೆಸ್ಸೆಸ್ಸಿನ ಚೆಡ್ಡಿಗಳ ಕ್ಯಾಂಡಿಡೇಟುಗಳು, ಮಗದೊಂದೆಡೆ ಪ್ರಸ್ತುತ 'ಆಪರೇಷನ್ ಕಮಲ'ದ ಮೂಲಕ ಬಿಜೆಪಿ ತೆಕ್ಕೆಗೆ ಬಿದ್ದು 'ಚೆಡ್ಡಿಗಳಿಗೆ ಜೈ'' ಎನ್ನುತ್ತಿರುವವರ ಮುಲಾಜು. ಎಲ್ಲರನ್ನೂ ಕಟ್ಟಿಕೊಳ್ಳುವಂತಿಲ್ಲ, ಯಾರನ್ನೂ ಬಿಡುವಂತಿಲ್ಲ. ಅಂತಹ ಬಿಕ್ಕಟ್ಟು ಯಡ್ಡಿಯದ್ದು.



ಎಲ್ಲ ದಿಕ್ಕುಗಳಿಂದ ಇಂತಹ ಒತ್ತಡವಿರುವಾಗ ಯಡ್ಡಿ ನಿಜವಾಗಿಯೂ ಸಂಪುಟ ಪುನರ್ರಚನೆ ಮಾಡುತ್ತಾರೆಯೇ? ಎಂಬ ಪ್ರಶ್ನೆಯಂತೂ ಕಾಡುತ್ತದೆ. ಯಾಕೆಂದರೆ ಆತ ಕಳೆದ ಬಾರಿ ಸಂಪುಟ ಪುನರ್ರಚನೆ ಮಾಡಿದ್ದು ಜೇನುಗೂಡಿಗೆ ಕಲ್ಲೆಸೆದಂತಾಗಿತ್ತು. ಅದರ ಪರಿಣಾಮದಿಂದ ಇವತ್ತೂ ಯಡ್ಡಿ ಮೈ, ಕೈ ಪರಚಿಕೊಳ್ಳುತ್ತಿದ್ದಾರೆ. ಹೀಗಿರುವಾಗ ಆತ ಮತ್ತೊಮ್ಮೆ ಜೇನುಗೂಡಿಗೆ ಕಲ್ಲೆಸೆಯುವ ಧೈರ್ಯ ಮಾಡುತ್ತಾರೆಯೇ? ಅತೃಪ್ತ ಶಾಸಕರಿಂದ ಕಚ್ಚಿಸಿಕೊಳ್ಳಲು ಯಡ್ಡಿ ತಯಾರಾಗಿದ್ದಾರೆಯೇ?

ಆದರೆ ರಾಜ್ಯ ರಾಜಕೀಯ ಪರಿಸ್ಥಿತಿ ಎಂತಹ ಹೀನಾಯವಾಟ್ಟಕ್ಕೆ ತಲುಪಿದೆಯೆಂದರೆ ಸಂಪುಟ ಪುನರ್ರಚನೆಯ ಕಸರತ್ತು ಯಡ್ಡಿಗೆ ಅನಿವಾರ್ಯವಾಗಿದೆ. ಸದ್ಯದಲ್ಲೇ ಸಂಪುಟವನ್ನು ಪುನರ್ರಚನೆ ಮಾಡಿ ವರ್ತೂರ್ ಪ್ರಕಾಶನಿಗೆ ಬೇಕಾದ ಇಲಾಖೆಯನ್ನು ಕೊಡದಿದ್ದರೆ ಆತ ಮತ್ತೆ ಕಾಂಗ್ರೆಸ್ಸೋ ಅಥವಾ ಜೆಡಿಎಸ್ ಪಾಳ್ಯಕ್ಕೆ ಹಾರಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಎಲ್ಲಾ ಸಾಧ್ಯತೆಗಳೂ ಇವೆ. ಹಾಗಂತ ವರ್ತೂರು ಮತ್ತು ಬಿಜೆಪಿಯ ಹಲವಾರು ಶಾಸಕರಿಗೆ ಮಂತ್ರಿ ಪದವಿ ನೀಡಿದರೆ, ಇನ್ನುಳಿದ ಆಕಾಂಕ್ಷಿಗಳ ಭಿನ್ನಮತವನ್ನು ಮತ್ತೆ ಎದುರಿಸಬೇಕಾದ ಅಪಾಯವಂತೂ ಇದ್ದೇ ಇದೆ.

ಇಂತಹ ಬಿಕ್ಕಟ್ಟಿನ ಸಮಯದಲ್ಲಿ ನವೆಂಬರ್ 2ರ ಮೊದಲು ಯಡ್ಡಿ ತನ್ನ ಸಂಪುಟಕ್ಕೆ ಸಣ್ಣಮಟ್ಟಿನ ಸರ್ಜರಿ ನಡೆಸಲಿದ್ದಾರೆ ಎಂಬುದು ಅವರ ಹತ್ತಿರದವರ ಲೆಕ್ಕಾಚಾರ. ಯಾಕೆಂದರೆ ಐದು ಜನ ಪಕ್ಷೇತರ ಶಾಸಕರ ಅನರ್ಹತೆ ಪ್ರಶ್ನೆಯ ವಿಚಾರದಲ್ಲಿ ಸರ್ಕಾರಕ್ಕೆ ಮುಖಭಂಗವಾಗುವ ಸಾಧ್ಯತೆ ಇದೆ. ಆ ಸಂದರ್ಭದಲ್ಲಿ ವಿಪಕ್ಷಗಳು ಮತ್ತೆ ಕಾರ್ಯೋನ್ಮುಖರಾಗಿ ವರ್ತೂರು ಮತ್ತು ಇತ್ಯಾದಿ ಶಾಸಕರನ್ನು ಹೈಜಾಕ್ ಮಾಡುವ ಹೆದರಿಕೆ ಯಡ್ಡಿಗಿದೆ. ಆ ಕಾರಣಕ್ಕಾಗಿಯೇ ಸದ್ಯಕ್ಕೆ ವರ್ತೂರು ಪ್ರಕಾಶ್ ಮತ್ತು ರಾಜುಗೌಡನನ್ನು ಯಡ್ಡಿ ತನ್ನ ಸಂಪುಟಕ್ಕೆ ಸೇರಿಸಿಕೊಳ್ಳುವ ಸಾಧ್ಯತೆಗಳಿವೆ.

ಸದ್ಯಕ್ಕೆ ಬಿಜೆಪಿಯೊಂದಿಗೆ ಇರುವ ಏಕೈಕ ಪಕ್ಷೇತರ ಅಭ್ಯರ್ಥಿಯೆಂದರೆ ವರ್ತೂರು ಪ್ರಕಾಶ್ ಮಾತ್ರ. ಹೀಗಾಗಿ ದಿನದಿಂದ ದಿನಕ್ಕೆ ಬದಲಾಗುತ್ತಿರುವ ರಾಜಕೀಯ ಸನ್ನಿವೇಶದಲ್ಲಿ ಈ ಮನುಷ್ಯ ಯಾವಾಗ ಬೇಕಾದರೂ, ಯಾವ ಪಕ್ಷಕ್ಕಾದರೂ ಹಾರಲು ಸರ್ವಸ್ವತಂತ್ರನಾಗಿದ್ದಾರೆ. ಆದ್ದರಿಂದ ಆತನನ್ನು ಮಂತ್ರಿ ಮಾಡುವ ಮುಖಾಂತರ ಆತನನ್ನು ಕಟ್ಟಿಹಾಕುವ ಹುನ್ನಾರವೂ ಯಡ್ಡಿಯದ್ದಾಗಿದೆ. ಆದರೆ ವರ್ತೂರು ಮುಂದಿಟ್ಟಿರುವ ಡಿಮ್ಯಾಂಡಿನಂತೆ ಆತನಿಗೆ ಗೃಹಖಾತೆ ಅಥವಾ ಸಾರಿಗೆ ಖಾತೆಯನ್ನು ಯಡ್ಡಿ ನೀಡುತ್ತಾರೆಯೇ ಎಂಬುದಷ್ಟೇ ಸದ್ಯಕ್ಕೆ ಉಳಿದಿರುವ ಕುತೂಹಲ.

ವರ್ತೂರ್ ಮತ್ತು ರಾಜೂಗೌಡ - ಈ ಇಬ್ಬರು ಶಾಸಕರನ್ನು ಸಂಪುಟಕ್ಕೆ ತೆಗೆದುಕೊಳ್ಳುವ ಮುಖಾಂತರ ಯಡ್ಡಿ ಉಳಿದ ಶಾಸಕರಿಗೆ ಒಂದು ಸಂದೇಶ ನೀಡಲು ಹೊರಟಿದ್ದಾರೆ. ಒಂದೆಡೆ ವರ್ತೂರ್‌ಗೆ ಸಚಿವ ಸ್ಥಾನ ನೀಡುವ ಮುಖಾಂತರ ತಾನು ಕೊಟ್ಟ ಮಾತಿನಂತೆ ಪಕ್ಷಾಂತರಿಗಳಿಗೆ ಸಚಿವ ಸ್ಥಾನ ನೀಡಿದ್ದೇನೆ ಎಂದೂ, ಆ ಮೂಲಕ ಉಳಿದ ಪಕ್ಷಾಂತರಿಗಳಿಗೂ ತನ್ನ ಮೇಲೆ ವಿಶ್ವಾಸ ಮೂಡಿ ಅವರೆಲ್ಲ ಮತ್ತೆ ತನ್ನ ಸರ್ಕಾರವನ್ನು ಬೆಂಬಲಿಸುವಂತೆ ಮಾಡುವುದು.

ಸದ್ಯಕ್ಕೆ ಯಡ್ಡಿ ಒಟ್ಟು ಆರು ಜನರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬಹುದು. ಆದರೆ ಅರ್ಧಡಜನ್ ಶಾಸಕರನ್ನು ಒಮ್ಮೆಲೆ ಮಂತ್ರಿ ಮಾಡುವ ದುಸ್ಸಾಹಸಕ್ಕೆ ಯಡ್ಡಿ ಕೈಹಾಕಲಾರರು. ಆದಕ್ಕಾಗಿ ಪೂರ್ವಭಾವಿಯಾಗಿ ವರ್ತೂರ್ ಮತ್ತು ರಾಜುಗೌಡರನ್ನು ಮಂತ್ರಿ ಮಾಡಿದ ನಂತರ ಪರಿಸ್ಥಿತಿಯನ್ನು ಮತ್ತೊಮ್ಮೆ ಅವಲೋಕಿಸಿ ಮುಂದಿನ ಕಾರ್ಯತಂತ್ರ ಹೆಣೆಯಲಿದ್ದಾರೆ. ಇವರಿಬ್ಬರೂ ಮಂತ್ರಿಯಾದ ನಂತರ ಯಾವ್ಯಾವ ಶಾಸಕರೂ, ಯಾವ್ಯಾವ ರೀತಿಯಲ್ಲಿ ಭಿನ್ನಮತೀಯ ಚಟುವಟಿಕೆಯನ್ನು ತಾರಕಕ್ಕೆ ಕೊಂಡೊಯ್ಯುತ್ತಾರೋ ಎಂದು ಕಾದು ನೋಡಲು ಯಡ್ಡಿ ನಿರ್ಧರಿಸಿರುವಂತಿದೆ. ಹೀಗಾಗಿ ಉಳಿದ ನಾಲ್ಕು ಸ್ಥಾನಗಳು ಭರ್ತಿಯಾಗಲು ಕೆಲವು ವಾರಗಳೇ ಬೇಕಾಗಬಹುದು.



ತಾನು ಮಂತ್ರಿಯಾಗಿಯೇ ಬಿಟ್ಟಿದ್ದೇನೆ ಎಂಬ ಅಹಂನಲ್ಲಿದ್ದ ಚಿಕ್ಕಮಗಳೂರಿನ ಸಿ.ಟಿ.ರವಿಗೆ ಅದೇ ಜಿಲ್ಲೆಯ ಶಾಸಕ ಶೃಂಗೇರಿಯ ಜೀವರಾಜ್ ಒಂದು ಶಾಕ್ ನೀಡಿದ್ದಾರೆ. ದಿಢೀರನೆ ಮುಖ್ಯ ಸಚೇತಕ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವ ಜೀವರಾಜ್ ತಾನೂ ಕೂಡಾ ಮಂತ್ರಿ ಪದವಿ ಆಕಾಂಕ್ಷಿ ಎಂಬುದನ್ನು ಪ್ರದರ್ಶಿಸಿದ್ದಾರೆ. ಈಗ ಇವರಿಬ್ಬರ ನಡುವ ಯಾರಿಗೆ ಗೂಟದ ಕಾರು ಸಿಗುತ್ತದೋ ನೋಡಬೇಕು. ಆದರೆ ಸಿ.ಟಿ.ರವಿ ಮಂತ್ರಿಯಾಗುವುದು ಮಾಜಿ ರಾಜ್ಯಾಧ್ಯಕ್ಷ ಸದಾನಂದಗೌಡ, ಗೃಹಸಚಿವ ಆರ್.ಅಶೋಕ್‌ಗೆ ಸುತರಾಂ ಇಷ್ಟವಿಲ್ಲ. ಇದಕ್ಕೆ ಕಾರಣ ಬಿಜೆಪಿ ಪಕ್ಷದಲ್ಲಿನ 'ಗೌಡರ ಗದ್ದಲ'. ರಾಜ್ಯಾಧ್ಯಕ್ಷ ಈಶ್ವರಪ್ಪ ಅವರನ್ನು ಹೊರತುಪಡಿಸಿದರೆ ರವಿಗೆ ಬೇರೆ ಯಾರದ್ದೂ ಬೆಂಬಲ ಇಲ್ಲವೇ ಇಲ್ಲ.

ಅದೇ ರೀತಿ ತುಮಕೂರಿನ ಸೊಗಡು ಶಿವಣ್ಣ ಮತ್ತು ಕೊಡಗಿನ ಅಪ್ಪಚ್ಚುರಂಜನ್ ಮಂತ್ರಿಯಾಗುವುದು ಗ್ಯಾರಂಟಿ ಎಂಬ ಮಾತು ಕೇಳಿಬರುತ್ತಿದೆ. ಆದರೆ ಮುಖ್ಯಮಂತ್ರಿಯ ಯಡ್ಡಿಯ ಆಪ್ತರ ಪ್ರಕಾರ ಇವರಿಬ್ಬರ ಬಗ್ಗೆಯೂ ಯಡ್ಡಿಗೆ ಅಂತಹ ಪ್ರೀತಿಯಾಗಲಿ, ವಿಶ್ವಾಸವಾಗಲಿ ಇಲ್ಲವೇ ಇಲ್ಲ! ಈ ಎಲ್ಲಾ ಕಾರಣಗಳಿಂದ ಹನ್ನೊಂದು ಜನ ಶಾಸಕರ ಅನರ್ಹತೆ ಕೋರ್ಟ್‌ನಲ್ಲಿ ಇತ್ಯರ್ಥವಾಗುವತನಕ ಸುಮ್ಮನಿರಲು ಯಡ್ಡಿ ತೀರ್ಮಾನಿಸಿದ್ದಾರೆ. ಒಂದುವೇಳೆ ಕೋರ್ಟ್ ಅನರ್ಹತೆಯ ತೀರ್ಪನ್ನು ಎತ್ತಿ ಹಿಡಿದರೆ ಯಡ್ಡಿ ನಿರಾತಂಕರಾಗುತ್ತಾರೆ. ಆಗ ಮತ್ತೆ ತನ್ನ ಹಿಟ್ಲರ್ ಪ್ರವೃತ್ತಿಯನ್ನು ತೋರಿಸಿ ತನ್ನ ಹಿಂಬಾಲಕರಿಗೆ ಮಾತ್ರ ಮಂತ್ರಿ ಸ್ಥಾನ ನೀಡುವ ಸಾಧ್ಯತೆಗಳಿವೆ.

ಈ ಸಂದರ್ಭದಲ್ಲಿ ಮೂಲಬಿಜೆಪಿ ಶಾಸಕರನ್ನು ಮತ್ತು ವಲಸೆ ಬಂದ ಶಾಸಕರನ್ನು ಸಮಾನವಾಗಿ ನೋಡುವ ಒಂದು ಕಾರ್ಯತಂತ್ರವನ್ನು ಕೂಡ ಯಡ್ಡಿ ಹೆಣೆದುಕೊಂಡಿದ್ದಾರೆ. ಅದರಂತೆ ತನ್ನ ಸಚಿವ ಸಂಪುಟದಿಂದ ನಾಲ್ಕು ಜನ ಸದಸ್ಯರನ್ನು ಕೈಬಿಡುವ ಆಲೋಚನೆಯೂ ಯಡ್ಡಿ ತಲೆಯಲ್ಲಿದೆ. ಸದ್ಯಕ್ಕೆ ಸಚಿವರಾದ ಕಟ್ಟಾ ಸುಬ್ರಮಣ್ಯ ನಾಯ್ಡು, ಉದಾಸಿ, ಕಾಗೇರಿ, ರವೀಂದ್ರನಾಥ್, ರೇವೂ ಬೆಳಮಗಿ ಇವರ ನೆತ್ತಿಯ ಮೇಲೆ ತೂಗುಗತ್ತಿ ನೇತಾಡುತ್ತಿದೆ. ಈ ಐವರು ಸಚಿವರಲ್ಲಿ ನಾಲ್ವರನ್ನು ಸಂಪುಟದಿಂದ ಕೈಬಿಟ್ಟು ಹೊಸಬರನ್ನು ಸೇರಿಸಿಕೊಳ್ಳುವ ಉದ್ದೇಶವನ್ನು ಯಡ್ಡಿ ಮತ್ತು ಈಶ್ವರಪ್ಪ ಹೊಂದಿದ್ದಾರೆ. ಇದರಲ್ಲಿ ಭೂಹಗರಣದಲ್ಲಿ ಸಿಕ್ಕಿಕೊಂಡಿರುವ ಕಟ್ಟಾ ಸುಬ್ರಮಣ್ಯನಾಯ್ಡು ಮತ್ತು ನಿರುಪದ್ರವಿ ಸ್ವಜಾತಿ ಉದಾಸಿ - ಇವರಿಬ್ಬರಲ್ಲಿ ಒಬ್ಬರಿಗೆ ಖೊಕ್ ಖಂಡಿತ.

ಮುಖ್ಯಮಂತ್ರಿ ಸಿಂಹಾಸನವನ್ನು ಉಳಿಸುವ ಏಕೈಕ ಉದ್ದೇಶದಿಂದ ನಾಲ್ಕುಜನ ದಂಡಪಿಂಡ ಸಚಿವರನ್ನು ಕೈಬಿಟ್ಟರೆ ಒಟ್ಟು ಎಂಟು ಸ್ಥಾನಗಳು ಖಾಲಿಯಾದಂತಾಗುತ್ತದೆ. ಆಗ ವಲಸೆ ಶಾಸಕರಿಗೂ ಮತ್ತು ಮೂಲ ಬಿಜೆಪಿಯವರಿಗೂ ಮಂತ್ರಿ ಸ್ಥಾನ ನೀಡಬಹುದು ಎಂಬುದು ಯಡ್ಡಿಯ ರಾಜಕೀಯ ಲೆಕ್ಕಾಚಾರ. ಈ ಎಲ್ಲಾ ಕಾರಣದಿಂದ ಒಂದು ವಾರದೊಳಗೆ ಸಂಪುಟಕ್ಕೆ ಸಣ್ಣ ಸರ್ಜರಿ ಮಾಡಿ ಇಬ್ಬರು ಶಾಸಕರನ್ನು ಸಂಪುಟಕ್ಕೆ ತೆಗೆದುಕೊಳ್ಳಲಿರುವ ಯಡ್ಡಿ ಅನಂತರ ಪಕ್ಷದ ಭಿನ್ನಮತ ಚಟುವಟಿಕೆಯನ್ನು ನೋಡಿ ತೂಗಿ ಮಂತ್ರಿ ಪದವಿಗಳನ್ನು ಹಂಚಲಿದ್ದಾರೆ.

ಆದರೆ ಈ ಬಾರಿ ಜಿಲ್ಲಾವಾರು ಮತ್ತು ಜಾತಿವಾರುಗಿಂತ ಶಾಸಕನ ಬಲಪ್ರದರ್ಶನದ ಆಧಾರದ ಮೇಲೆ ಮಂತ್ರಿಸ್ಥಾನ ಸಿಗಲಿದೆ ಎಂಬುದು ಬಹುತೇಕ ಶಾಸಕರಿಗೆ ಈಗಾಗಲೇ ಮನವರಿಕೆಯಾಗಿದೆ. ಅದಕ್ಕಾಗಿಯೇ ಈಗಲೇ ಸಿಎಂ ಮನೆ ಮುಂದೆ ದಿನಕ್ಕೊಬ್ಬ ಶಾಸಕ ತನ್ನ ಬಾಡಿಗೆ ಅಭಿಮಾನಿಗಳೊಂದಿಗೆ ಮುಖ್ಯಮಂತ್ರಿಯನ್ನು ಭೇಟಿಯಾಗುತ್ತಿದ್ದಾರೆ.

ಮೂರು ವರ್ಷಗಳ ಹಿಂದೆ ಅಧಿಕಾರಕ್ಕಾಗಿ ಯಾರ ಕಾಲು ಹಿಡಿಯಲೂ ಸಿದ್ಧರಿದ್ದ ಯಡ್ಡಿ ಈಗ ವರ್ತೂರ್ ಪ್ರಕಾಶನಂತ ಪಕ್ಷೇತರ ಶಾಸಕನ ಕಾಲಿಗೆ ಬಿದ್ದಿದ್ದಾರೆಂದರೆ, ಯಾರೊಬ್ಬ ಸಚಿವ ಸ್ಥಾನದ ಆಕಾಂಕ್ಷಿಯನ್ನು ನಿರ್ಲಕ್ಷಿಸಿದರೂ ಮತ್ತೆ ಭಿನ್ನಮತವನ್ನು ಎದುರಿಸುವ ಅಪಾಯದಲ್ಲಿ ಯಡ್ಡಿ ಬದುಕುತ್ತಿದ್ದಾರೆಂದರೆ, ಅವರ ಸ್ಥಿತಿ ಎಂತಹದ್ದಿರಬೇಕೆಂದು ಊಹಿಸಿ. ಇಂತಹ ಓರ್ವ ಚಿಂತಾಜನಕ ವ್ಯಕ್ತಿ ಈ ರಾಜ್ಯದ ಮುಖ್ಯಮಂತ್ರಿ ಆಗಿರಬೇಕೇ?


• ಸದಾಶಿವ ಶೆಣೈ
shenoylankesh@gmail.com


ರಾಮದಾಸ್ ದರ್ಬಾರಿನಲ್ಲಿ ಮೈಸೂರು ದಸರಾ ಎಷ್ಟು ಸುಂದರಾ?

ಮೈಸೂರಿನಲ್ಲಿ ಈ ಬಾರಿಯ ದಸರಾ ಪ್ರಕ್ರಿಯೆ ಶುರುವಾಗುವ ಹೊತ್ತಿಗೆ ಬೆಂಗಳೂರಿನಲ್ಲಿ ಯಡಿಯೂರಪ್ಪನವರ ಸರ್ಕಾರದ ವಿವಿಧ ವಿನೋದಾವಳಿಗಳು ತಾರಕಕ್ಕೇರಿದ್ದವು. ಹೊಸದಾಗಿ ಮಂತ್ರಿಯಾಗಿದ್ದ ರಾಮದಾಸ್ ಮೈಸೂರಿನ ಉಸ್ತುವಾರಿ ಹೊತ್ತುಕೊಂಡು ಬಂದು ಮೆರೆಯಲು ರೆಸಾರ್ಟ್ ಬಂಧನ ಅಡ್ಡಿಯಾಗಿತ್ತು, ಅತ್ತ ಶಂಕರಲಿಂಗೇಗೌಡರ ಥಕಥೈ ಬೇರೆ ದಸರಾಗೆ ಮುಂಚೆಯೇ ಜನರಿಗೆ ಸಾಕಷ್ಟು ರಂಜನೆ ಒದಗಿಸಿತ್ತು. ಹೀಗಾಗಿ ದಸರಾದ ಸಿದ್ಧತೆ ರಾಜಕೀಯ ಸೋಂಕಿನಿಂದ ಮುಕ್ತವಾಗಿತ್ತು.

ಮೊದಲ ಹಂತದ ವಿಶ್ವಾಸಮತ ಮುಗಿದ ಮೇಲೆ ಸಾಕಷ್ಟು ಆತ್ಮವಿಶ್ವಾಸದಿಂದಲೇ ದಸರಾ ಉಸ್ತುವಾರಿಗೆ ಬಂದ ರಾಮದಾಸ್, ಪೋಸು ಕೊಟ್ಟಿದ್ದೇ ಹೆಚ್ಚು. ಈ ಬಾರಿಯ ದಸರಾ ವೇಳೆಗೆ ಯಡ್ಡಿ ಸರ್ಕಾರ ಅಸ್ಥಿರತೆಯಲ್ಲಿದ್ದುದರಿಂದ ಲೂಟಿಕೋರ ಕಾಂಟ್ರಾಕ್ಟರ್‌ಗಳು ಹಿಂದಿನಂತೆ ಹಸಿಹಸಿಯಾಗಿ ತಿನ್ನಲು ದಸರಾ ಸಮಿತಿಗಳ ಉಸ್ತುವಾರಿ ಹೊತ್ತಿದ್ದ ಡಿಸಿ ಹರ್ಷ ಗುಪ್ತ ಬಿಟ್ಟಿರಲಿಲ್ಲ. ಆದರೂ ಅಧಿಕಾರಿಗಳ ಮತ್ತು ಕಂಟ್ರಾಕ್ಟರ್‌ಗಳ ಜಂಟಿ ಭೋಜನಕ್ಕೆ ಭಕ್ಷ್ಯಗಳ ಕೊರತೆಯೇನಾಗಿಲ್ಲ.

ದಸರಾ ಕಡೆ ಜೆಡಿಎಸ್‌ನ ಮೇಯರ್ ಸಂದೇಶ್‌ಸ್ವಾಮಿ ಮತ್ತು ಕಾಂಗ್ರೆಸ್‌ನ ಜಿ.ಪಂ. ಅಧ್ಯಕ್ಷ ಸಿದ್ಧಾರ್ಥರನ್ನು ಬಿಟ್ಟರೆ ಮಿಕ್ಕವರ್‍ಯಾರೂ ಇತ್ತ ಕಡೆ ತಲೆಯನ್ನೂ ಹಾಕದಿದ್ದುದರಿಂದ ಅಧಿಕಾರಿಗಳ ಮತ್ತು ಕಾಂಟ್ರಾಕ್ಟರ್‌ಗಳ ಮೇಯ್ದಾಟಕ್ಕೆ ಯಾವ ಅಡೆತಡೆಗಳೂ ಇಲ್ಲದಂತಾಗಿತ್ತು. ಅದರಲ್ಲೂ ನಗರ ಪಾಲಿಕೆಯ ಆಯುಕ್ತ ರಾಯ್ಕರ್ ಪಾಲಿಗೆ ಪಿತೃಪಕ್ಷದ ಹಬ್ಬದೂಟ ಸಖತ್ತಾಗಿಯೇ ನಡೆದಿದೆ. ಸಹಜವಾಗಿಯೇ ರಾಮದಾಸ್ ಬಂಟರು ದಸರಾ ಉಪಸಮಿತಿಗಳಲ್ಲಿ ಸೇರಿಕೊಂಡಿದ್ದಾರೆ. ರಮೇಶ್, ರಾಮ್‌ಪ್ರಸಾದ್, ಗಣೇಶ್ ರಾವ್‌ರಂತಹ ಚೆಡ್ಡಿಚತುರರನ್ನು ಉಪಸಮಿತಿಗಳಲ್ಲಿ ಬಲವಂತವಾಗಿ ತುರುಕಲಾಗಿದ್ದು, ಅವರು ಕೆಲಸ ಮಾಡಿದ್ದಕ್ಕಿಂತ ಸಿಕ್ಕ ಪ್ಯಾಕೇಜ್‌ನಲ್ಲಿ ತಮ್ಮ ತಮ್ಮ ಲೆವಲ್ಲಿಗೆ ಹಣ ಮಾಡಿಕೊಂಡಿದ್ದಾರೆ. ಅದರಲ್ಲೂ ಕ್ಯಾತಮಾರನಹಳ್ಳಿಯ ಕೋಮುಗಲಭೆಯ ಸಂದರ್ಭದಲ್ಲಿ ಪೆಟ್ಟು ತಿಂದು ಮನೆ ಸೇರಿದ್ದ ಬಿಜೆಪಿಯ ಗಿರಿಧರ್‌ನನ್ನು ಪ್ರವಾಸೋದ್ಯಮ ಉಪಸಮಿತಿಗೆ ಅಧ್ಯಕ್ಷನನ್ನಾಗಿ ಮಾಡಲಾಗಿದೆ. ಡಿಸಿ ಹರ್ಷಗುಪ್ತ ಪ್ರಾಮಾಣಿಕರು ಎನ್ನುವುದರಲ್ಲಿ ಎರಡು ಮಾತಿಲ್ಲ, ಅದೇ ಸಾಚಾತನ ಉಪಸಮಿತಿಗಳ ಉಸ್ತುವಾರಿ ಹೊತ್ತಿದ್ದ ನಗರಪಾಲಿಕೆಯ ಅಧಿಕಾರಿಗಳಲ್ಲಿರಲಿಲ್ಲ, ಪಾಲಿಕೆ ಅಧಿಕಾರಿಗಳಾದ ಎಸಿ ಸಿದ್ದಪ್ಪ ಮಹೇಶ್, ಶಂಕರ್ ಎಂಬ ಪಾಕಡಾಗಳು ಮಂಡ್ಯ ಮೂಲದ ಮೋಹನ್ ಮತ್ತು ಶಿವಕುಮಾರ್ ಎಂಬ ಜೋಡಿ ಗುತ್ತಿಗೆದಾರರ ಜೊತೆ ಡೀಲಾಗಿ 2 ಕೋಟಿ ಪ್ಯಾಚ್‌ವರ್ಕ್‌ನಲ್ಲಿ ಬರೋಬ್ಬರಿ 60 ಲಕ್ಷಗಳನ್ನು ಜೇಬಿಗಿಳಿಸಿಕೊಂಡಿದ್ದಾರೆಂದು ಪಾಲಿಕೆಯ ಮೂಲಗಳೇ ಹೇಳುತ್ತಿವೆ.





ಡಿಸಿ ಹರ್ಷಗುಪ್ತರು ತಮ್ಮ ಎಡಬಿಡಂಗಿತನದಿಂದ ದಸರಾ ಪ್ರಸಾರದ ಹಕ್ಕನ್ನು ಖಾಸಗಿ ಚಾನಲ್ಲುಗಳಿಗೆ ಮಾರಾಟ ಮಾಡಲು ಹೋಗಿ ಪ್ರಜ್ಞಾವಂತರಿಂದ ಉಗಿಸಿಕೊಂಡಿದ್ದರೂ, ಬುದ್ಧಿವಂತಿಕೆ ಪ್ರದರ್ಶನ ಮಾಡಿಲ್ಲ. ಡಿಸಿ ಸಾಹೇಬರು ಕೆಲಸಕ್ಕೆ ಬಾರದ ಉಪಸಮಿತಿಗಳನ್ನ ಬಲವಂತವಾಗಿ ಸೃಷ್ಟಿ ಮಾಡಿರುವಂತೆ ಕಾಣುತ್ತಿದೆ. ಗಾಳಿಪಟ ಬಿಡಲು, ಯೋಗ ಮಾಡಿಸಲು ಉಪಸಮಿತಿಗಳನ್ನ ರಚಿಸಿರುವುದೇ ಇದಕ್ಕೆ ಸಾಕ್ಷಿ. ಮಹಾರಾಣಿ ಶೋಭಕ್ಕನ ದರ್ಬಾರಿನಲ್ಲಿ ಗ್ರಾಮೀಣ ದಸರಾ ಮತ್ತು ಮಹಿಳಾ ದಸರಾ ಎಂಬ ಬ್ಲಾಗಲಗಳು ಶುರುವಾಗಿದ್ದವು. ರಾಮದಾಸ್ ಕೂಡ ಮನರಂಜನಾ ದಸರಾ, ಮನೆ ಮನೆ ದಸರಾ, ಜೈಲು ದಸರಾ ಅಂತೆಲ್ಲಾ ಘೋಷಣೆ ಮಾಡಿದ್ದಾರೆ. ಡಿಸಿಯವರು ಆತುರದಲ್ಲಿ ರಚಿಸಿದ 35 ಉಪಸಮಿತಿಗಳ ಸದಸ್ಯರು ಜವಾಬ್ದಾರಿ ವಹಿಸುವುದರಲ್ಲಿ ಬಹಳಷ್ಟು ಯಡವಟ್ಟುಗಳನ್ನ ಮಾಡಿಕೊಂಡಿದ್ದಾರೆ.

ಹಳೆಯ ಪರಂಪರೆ ಮುಂದುವರೆಸಿದಾಗಲೂ, ಇಂದಿನ ಜನಜೀವನಕ್ಕೆ ಸಂಬಂಧಿಸಿದ ಟ್ಯಾಬ್ಲೋಗಳನ್ನು ಮಾಡುವುದು ದಸರಾದ ಸಾಮಾನ್ಯ ರೂಢಿ. ಆದರೆ ಈ ಬಾರಿಯ ಟ್ಯಾಬ್ಲೋಗಳಲ್ಲಿ ಕರ್ನಾಟಕವನ್ನಾಳಿದ ರಾಜರುಗಳು ಎಂಬ ಹೆಸರಿನಲ್ಲಿ ಹತ್ತಾರು ಟ್ಯಾಬ್ಲೋಗಳು ರಾರಾಜಿಸಿವೆ. ಟಿಪ್ಪು ಸುಲ್ತಾನ್‌ಗೆ ದ್ರೋಹ ಬಗೆದು, ಬ್ರಿಟಿಷರಿಗೂ ಸೇವೆ ಸಲ್ಲಿಸಿದ ದಿವಾನ್ ಪೂರ್ಣಯ್ಯನದ್ದೂ ಒಂದು ಟ್ಯಾಬ್ಲೋ ಇತ್ತು. ಟಿಕೆಟ್ ಮಾರಾಟದಲ್ಲೂ ಭಾರೀ ಅವ್ಯವಹಾರ ನಡೆದು ಹೋಗಿದೆ. ಟಿಕೆಟ್‌ಗಳನ್ನು ನುಂಗಿದವರಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳದ್ದೇ ಸಿಂಹಪಾಲು. ಈ ಕಥೆ ಇಷ್ಟಕ್ಕೇ ಮುಗಿಯದೆ ಪಾಲಿಕೆಯ ಅಧಿಕಾರಿಗಳೇ ಮುಂದೆ ನಿಂತು ಟಿಕೆಟ್‌ಗಳನ್ನು ಬ್ಲ್ಯಾಕ್‌ನಲ್ಲಿ ಮಾರಾಟ ಮಾಡಿ ಹಣ ಎಣಿಸಿದ್ದಾರೆ.

ಈ ಬಾರಿಯ ದಸರಾಗೆ 400 ವರ್ಷಗಳ ದಸರಾ ಎಂಬ ವಿಶೇಷ ಬೇರೆ ಇತ್ತು, ಅದಕ್ಕಾಗಿ ಒಂದು ಲೋಗೋವನ್ನೂ ಮಾಡಿಸಲಾಗಿದೆ. ಇದರದ್ದೇ ಒಂದು ಕಥೆ ಇದೆ. ರಾಮ್ ಅಂಡ್ ಸನ್ಸ್ ಎಂಬ ಕಂಪೆನಿಯೊಂದು ತನ್ನ ಕಂಪೆನಿ ಜಾಹೀರಾತಿಗೆ ಆನೆ ಅಂಬಾರಿಯಿದ್ದ ಲೋಗೋ ಒಂದನ್ನು ಮಾಡಿಸಿಕೊಂಡಿತ್ತು, ಡಿಸಿ ಹರ್ಷ ಗುಪ್ತರಿಗೆ ಇದು ಚೆನ್ನಾಗಿ ಕಂಡು, 25,000 ರೂ.ಗಳಿಗೆ ಅದನ್ನು ಕೊಳ್ಳಲು ಮುಂದಾದರು. ಆದರೆ ರಾಮ್ ಅಂಡ್ ಸನ್ಸ್‌ನವರು ಪುಕ್ಕಟೆ ಕೊಟ್ಟಿದ್ದಾರೆ. ಇಷ್ಟು ಹೊತ್ತಿಗೆ ಮೈಸೂರಿಗೆ ವಾಪಸ್ಸು ಬಂದು ವಕ್ಕರಿಸಿಕೊಂಡ ರಾಮದಾಸ್, ತನ್ನ ಬೆಂಬಲಿಗರು ಕೇವಲ 5,000ಕ್ಕೆ ಒಳ್ಳೆಯ ಲೋಗೋ ಬರೆಸಿ ತರುತ್ತಾರೆ ಎಂದು ಹೇಳಿ ಆರ್ಡರ್ ಕೊಡಿಸಿದ್ದಾರೆ. ರಾಮದಾಸ್ ಆಸ್ಥಾನದ ಕಲಾವಿದರು ರಾಮ್ ಅಂಡ್ ಸನ್ಸ್‌ನವರ ಅದೇ ಲೋಗೋದಲ್ಲಿದ್ದ ಆನೆಯನ್ನು ತಿರುವು ಮುರುವು ನಿಲ್ಲಿಸಿ ಹಣ ತಿಂದಿದ್ದಾರೆ. ವಿಧಿಯಿಲ್ಲದೆ 5,000 ತೆತ್ತು 'ಹೊಸ' ಲೋಗೋವನ್ನು ಬಳಸಿಕೊಳ್ಳಲಾಯಿತು.

ದಸರಾ ಸಮಯದಲ್ಲಿ ನಡೆಸುವ ವಸ್ತು ಪ್ರದರ್ಶನಕ್ಕಾಗಿ ಒಂದು ಪ್ರಾಧಿಕಾರವನ್ನೇ ರಚಿಸಲಾಗಿದೆ. ಅದಕ್ಕೊಂದು ಸಿಬ್ಬಂದಿ, ಆಡಳಿತ ಮಂಡಳಿ ಎಲ್ಲಾ ಇದೆ. ಹಾಲಿ ಆರ್ಕೆಸ್ಟ್ರಾ ಮಂಜುನಾಥ್ ಅಧ್ಯಕ್ಷರಾಗಿ, ಹಿರಿಯ ಕೆಎಎಸ್ ಅಧಿಕಾರಿ



ಹೇಮಂತ್‌ಕುಮಾರ್ ಸಿಇಒ ಆಗಿ ಕೆಲಸ ನಿರ್ವಹಿ[illegible] ಹೀಗಿದ್ದೂ ಈ ಬಾರಿ ವಸ್ತುಪ್ರದರ್ಶನಕ್ಕೆ ಗ್ಲೋಬಲ್[illegible] ಕರೆಯಲಾಯಿತು! ಬೆಂಗಳೂರು ಮೂಲದ, [illegible] ಮೈದಾನದಲ್ಲಿ ಫನ್‌ವರ್ಲ್ಡ್ ನಡೆಸುತ್ತಿರುವ [illegible] ಗುತ್ತಿಗೆಯನ್ನೂ ನೀಡಲಾಯಿತು. ಇದಲ್ಲದೇ [illegible] ನಿಗಮ್, ಮಹದೇವನ್ ಮತ್ತು ಕೈಲಾಶ್ ಎಂ[illegible] ರಾಜ್ಯದ ಹಾಡುಗಾರರಿಗೆ ತಲಾ 10 ಲಕ್ಷ[illegible] ಹಾಡಿಸಲಾಯಿತು.

ಎಲ್ಲಾ ವರ್ಗದ ಜನರೂ ಮೆಚ್ಚುವ, ಜನಸಂ[illegible] ಬಿಂಬಿಸುವ ಆಚರಣೆಗಳು ಯಾವುದೇ ಸಮಾಜಕ್ಕೆ [illegible] ಆದರೆ ಪರಂಪರೆಯ ಹೆಸರಿನಲ್ಲಿ ಭೂತವನ್ನು[illegible] ಮೆರೆಸುವ, ಪಾಳೇಗಾರಿ ಸಂಸ್ಕೃತಿಯನ್ನು ಬಿಂಬಿಸು[illegible]ಗಳು ಪ್ರಜಾತಂತ್ರದಲ್ಲಿ ನಡೆಯಬಾರದು. ಬಿಜೆಪಿ[illegible] ಪಾಳೇಗಾರಿ ಮತ್ತು ವ್ಯಾಪಾರಿ ಪಕ್ಷ ಆಡಳಿತದ[illegible] ಅದೆಲ್ಲವೂ ನಡೆದೇತೀರುತ್ತವೆ. ಇಂತಹ ಆ[illegible] ಯಾರ ಉದ್ಧಾರಕ್ಕಾಗಿ ಎಂಬ ಪ್ರಶ್ನೆಯನ್ನಂತೂ ಪ್ರಜಾ[illegible] ನಂಬಿಕೆಯಿರುವವರೆಲ್ಲರೂ ಕೇಳಬೇಕಿದೆ.

• ಲಕ್ಷ್ಮಣ್ ಚೀರ[illegible]

lakshmancheeranahally@g[illegible]

ಸಿಜೆ ಖೆಹರ್‌ರಿಗೆ ಇದು ಬೇಕಿತ್ತೇ?



ಶಾಸಕರ ಅನರ್ಹತೆ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ, ಪ್ರತಿವಾದಿ ಯಡಿಯೂರಪ್ಪನವರ ಜೊತೆ ವೇದಿಕೆ ಹಂಚಿಕೊಂಡು ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಶ್ಯಕತೆ ಹೈಕೋರ್ಟ್ ಮುಖ್ಯ ನ್ಯಾಯಾಧೀಶ ನ್ಯಾ.ಖೆಹರ್ ಅವರಿಗೆ ಬೇಕಿತ್ತೇ?

ಅಧಿಕೃತವಾಗಿ ಖೆಹರ್‌ರ ಹೆಸರು ಆಮಂತ್ರಣ ಪತ್ರಿಕೆಯಲ್ಲೆಲ್ಲೂ ಇಲ್ಲ, ಈ ಹಿಂದೆಯೂ ಹೈಕೋರ್ಟ್ ಭಾಗವಹಿಸಿದ ಸಂಪ್ರದಾಯವೂ ಇಲ್ಲ, ಆದರೂ ದಸರಾದ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಅಂಬಾರಿಗೆ ಹೂವು ಎರಚುವ ಸಂದರ್ಭದಲ್ಲಿ ಮುಖ್ಯಮಂತ್ರಿಯ ಜೊತೆ ಮೇಲೇರಿದ್ದಾರೆ. ಈ [illegible] ಇದುವರೆಗಿನ ಪ್ರೋಟೋಕಾಲ್ ಅನ್ನೂ ಉಲ್ಲಂಘಿಸಲಾಗಿದೆ. ಈ ಕುರಿತು ಸಂಸದ ಎಚ್.ವಿಶ್ವನಾಥ್ ಮತ್ತು ಪ್ರಗತಿಪರರು ಈಗಾಗಲೇ ಪ್ರಶ್ನೆ ಎತ್ತಿದ್ದಾರೆ.

ಕಾಮುಕ ಗಿರೀಶ: ಸೆರಗು ಕಂಡರೆ ಮೃಗವಾಗ್ತಾನೆ!

ಮಂಡ್ಯ ಮೈಸೂರು ಸೀಮೆಯ ಅಮಾಯಕ ಹೆಂಗಳೆಯರಿಗೆ ಒಂದು ಕಂಟಕ ಕಳೆದಂತಾಗಿದೆ. ಇಲ್ಲಿನ ಬಸ್ಸ್ಟಾಪು, ಮಾರ್ಕೆಟ್ಟುಗ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿ ಮಹಿಳೆಯರನ್ನು ಕಾಡುತ್ತಿದ್ದ, ಬಲೆಗೆ ಬಿದ್ದರೆ ಲಾಡ್ಜ್‌ಗಳಿಗೆ ಕರೆದೊಯ್ದು ಅತ್ಯಾಚಾರವೆಸಗಿ ಕೊಲೆ ಮಾಡಿಬಿಡುತ್ತಿದ್ದ ವಿಕೃತ ಹಂತಕ ಗಿರೀಶ್ ಪೊಲೀಸರಿಗೆ ತಗುಲಿಕೊಂಡಿದ್ದಾನೆ.



ಈ ಮೂಲಕ ಮಂಡ್ಯ, ಮದ್ದೂರು ಆಸುಪಾಸಿನಲ್ಲಿ ಆಗಾಗ ಅನಾಥವಾಗಿ ಬಿದ್ದಿರುತ್ತಿದ್ದ ಮಹಿಳೆಯರ ಸಾವಿನ ಹಿಂದಿನ ರಹಸ್ಯವೂ ಬಯಲಾಗಿದೆ. ಈ ಅತ್ಯಾಚಾರ, ಕೊಲೆಗಳ ಹಿಂದಿದ್ದದ್ದು ಗಿರೀಶನೆಂಬ ಕಾಮುಕನೇ ಎಂಬ ವಿಚಾರವೂ ಸಾಬೀತಾಗಿದೆ. ಬಹುಶಃ ಮೈಸೂರಿನ ವಿಘ್ನೇಶ್ವರ ಲಾಡ್ಜಿನಲ್ಲಿ ಮಹಿಳೆಯೊಬ್ಬಳು ಕೊಲೆಯಾದ ವಿಚಾರವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸದೇ ಹೋಗಿದ್ದಿದ್ದರೆ, ಗಿರೀಶನ ಕಾಮುಕತನಕ್ಕೆ ಇನ್ನೊಂದಿಷ್ಟು ಮಂದಿ ಮಹಿಳೆಯರ ಬಲಿಯಾಗಿರುತ್ತಿತ್ತು, ಅದನ್ನು ತಪ್ಪಿಸಿದ ಕೀರ್ತಿ ಮೈಸೂರು ಪೊಲೀಸರಿಗೇ ಸಲ್ಲಬೇಕು.

ನಡೆದದ್ದೇನೆಂದರೆ, ಹದಿನೆಂಟರಂದು ಮೆಲ್ಲಹಳ್ಳಿಯ ಮಂಜುಳಾ ಎಂಬಾಕೆ ವಿಘ್ನೇಶ್ವರ ಲಾಡ್ಜಿನಲ್ಲಿ ಕೊಲೆಯಾಗಿ ಬಿದ್ದಿದ್ದಳು. ಆಕೆಯ ಮೇಲೆ ಅತ್ಯಾಚಾರ ನಡೆದ ಕುರುಹುಗಳೂ ಇದ್ದವು. ಈ ಸಂಬಂಧ ಲಾಡ್ಜ್ ಮಾಲೀಕ ದೂರು ನೀಡಿದ್ದೇ ಪೊಲೀಸರು ಅಖಾಡಕ್ಕಿಳಿದಿದ್ದರು. ಪ್ರಕರಣ ನಡೆದ ಎರಡೇ ದಿನಕ್ಕೆ ಕಾಮುಕ ಗಿರೀಶ ಬೆಂಗಳೂರಿನ ರೈಲ್ವೇ ನಿಲ್ದಾಣದ ಅಂಡರ್‌ಪಾಸ್‌ನಲ್ಲಿ ತಗುಲಿಕೊಂಡ.

ಇದಾದ ಬಳಿಕ ಪೊಲೀಸರು ಗಿರೀಶನನ್ನು ಒಂದು ರೌಂಡು ರುಬ್ಬುತ್ತಲೇ ಆಘಾತಕಾರಿ ಸತ್ಯಗಳು ಹೊರಬಿದ್ದವು. ಆದರನ್ವಯ ಅಂದು ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಸಿಕ್ಕ ಮಂಜುಳಾಳನ್ನು ಬಲೆಗೆ ಕೆಡವಿಕೊಂಡಿದ್ದಾನೆ. ನಂತರ ವಿಘ್ನೇಶ್ವರ ಲಾಡ್ಜಿಗೆ ಕರೆದೊಯ್ದು ಅತ್ಯಾಚಾರವೆಸಗಿದ ಬಳಿಕ ವೇಲಿನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿ ಪರಾರಿಯಾಗಿದ್ದ.

ಆದರೆ ಈ ತನಿಖೆಯ ಸಂದರ್ಭದಲ್ಲೇ ಗಿರೀಶ್ ಈ ಹಿಂದೆ ನಡೆಸಿದ್ದ ಅನಾಹುತಗಳೆಲ್ಲ ಬಯಲಾಗಿವೆ. ಈತ ಪಕ್ಕಾ ಅತ್ಯಾಚಾರಿ, ಕೊಲೆಗಡುಕ ಹಾಗೂ ಸ್ಯಾಡಿಸ್ಟ್. ಈ ವರ್ಷದ ಫೆಬ್ರವರಿ ಹತ್ತರಿಂದ ಈವರೆಗೆ ಹತ್ತಾರು ಹೆಣ್ಣುಮಕ್ಕಳು ಈತನ ತೀಟೆಗೆ ಬಲಿಯಾಗಿದ್ದಾರೆ. ಮೂರ್ನಾಲ್ಕು ಮಂದಿ ಜೀವವನ್ನೂ ಕಳೆದುಕೊಂಡಿದ್ದಾರೆ.

ಬಸ್‌ಸ್ಟ್ಯಾಂಡ್, ಮಾರುಕಟ್ಟೆಗಳಂತಹ ಪ್ರದೇಶಗಳಲ್ಲಿ ಹೊಂಚಿ ಕೂರುತ್ತಿದ್ದ ಗಿರೀಶ್ ಅಮಾಯಕ ಹೆಣ್ಣುಮಕ್ಕಳನ್ನು ಬಲೆಗೆ ಬೀಳಿಸಿಕೊಳ್ಳುತ್ತಿದ್ದ. ನಂತರ ಲಾಡ್ಜ್, ಕಬ್ಬಿನಗದ್ದೆ ಹೊಲಗಳಿಗೆ ಕರೆದೊಯ್ದು ಅತ್ಯಾಚಾರವೆಸಗುತ್ತಿದ್ದ. ಕಾಮ ಕರಗುತ್ತಲೇ ಆತನೊಳಗಿನ ರಾಕ್ಷಸ ರೌದ್ರಾವತಾರ ತಾಳಿ ಹೆಣ್ಣುಮಕ್ಕಳನ್ನು ಕೊಂದು ಮೊಬೈಲ್, ಚಿನ್ನಾಭರಣಗಳನ್ನು ದೋಚಿ ಪರಾರಿಯಾಗುತ್ತಿದ್ದ. ಇವಿಷ್ಟು ವಿಚಾರಗಳನ್ನು ಖುದ್ದು ಆತನೇ ಪೊಲೀಸರ ಮುಂದೆ ಒದರಿದ್ದಾನೆ.

ಇಂಥಾ ವಿಕೃತ ಕಾಮುಕನ ಹಿನ್ನೆಲೆ ಹುಡುಕುತ್ತಾ ಹೋದರೆ ಮತ್ತಷ್ಟು ಅನಾಹುತಕಾರಿ ವಿಚಾರಗಳು ಹೊರ ಬೀಳುತ್ತವೆ. ಈತ ಮೂಲತಃ ಮಂಡ್ಯ ತಾಲ್ಲೂಕಿನ ಕೊಮ್ಮೇರಹಳ್ಳಿಯವನು. ಆರಂಭದಿಂದಲೇ ಪೋಲಿ ಬಿದ್ದು ಮಂಡ್ಯ ಭೂಗತದ ಕದ ತಟ್ಟುವುದೇನೂ ತಡವಾಗಲಿಲ್ಲ. ಬಸರಾಳಿನಲ್ಲಿ ಸೈಕಲ್ ಶಾಪ್‌ವೊಂದನ್ನು ನಡೆಸುತ್ತಿದ್ದ ಗಿರೀಶ್ ರೌಡಿ ಗೋಪಾಲಪುರ ಕಿಟ್ಟಿಯ ಸಹವಾಸಕ್ಕೆ ಬಿದ್ದು ಕತ್ತಲಲೋಕಕ್ಕೆ ಅಡಿಯಿಟ್ಟ. ಹಾಗೆ ಆತ ಸೇರಿಕೊಂಡಿದ್ದು ಚೀರನಹಳ್ಳಿ ಶಿವರಾಮನ ಪಟಾಲಂ ಅನ್ನು.

ಈ ಸಂದರ್ಭದಲ್ಲಿ ವಿಪರೀತ ಪೋಲಿ ಬಿದ್ದ ಗಿರೀಶ್‌ನ ಪುಂಡಾಟಿಕೆ ಕೊಲೆ ಮಾಡುವಂಥ ವಿಪರೀತಕ್ಕೆ ಹೋಯಿತು. ಮಂಡ್ಯ ಭೂಗತದಲ್ಲಿ ಚೀರನಹಳ್ಳಿ V/s ಎಸ್.ಕೆ. ರಾಮಣ್ಣ ಎಂಬಂಥ ಪರಿಸ್ಥಿತಿಯಿದ್ದ ಕಾಲವದು. ಇಂಥಾ ಸಂದರ್ಭದಲ್ಲಿ ಗೋಪಾಲಪುರ ಕಿಟ್ಟಿ ಪಿಇಎಸ್ ಕಾಲೇಜು ಕಿಶೋರ್ ಎಂಬಾತನ ಕೊಲೆಗೆ ಸ್ಕೆಚ್ಚು ಹಾಕಿದ್ದ. ರಾಮಣ್ಣನ ಸೋದರ ಸಂಬಂಧಿ. ಈ ಕೊಲೆಗೆ ಕಿಟ್ಟಿ[illegible] ಸಹಕರಿಸಿದ ಗಿರೀಶ್ ಕಿಶೋರ್‌ನನ್ನು ಗೆಜ್ಜಲಗೆರೆ ಬ[illegible] ರೈತ ಮುಖಂಡರೊಬ್ಬರ ತೋಟಕ್ಕೆ ಎಳೆದೊಯ[illegible] ಮಾಡಿದ್ದ.

ಈ ಪ್ರಕರಣದಲ್ಲಿ ಒಂದೂವರೆ ವರ್ಷ ಜೈ[illegible] ಗಿರೀಶ ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲ[illegible] ಬಚಾವಾದ. ಹಾಗೆ ಹೊರಬಂದವನೆ ಪಕ್ಕಾ [illegible] ಆಗಿ ಬದಲಾದ. ಈ ಅವಧಿಯಲ್ಲೇ ಬೆಂಗಳೂ[illegible] ಕೂಲಿ ಕೆಲಸ ಶುರುವಿಟ್ಟ ಗಿರೀಶ 2009ರವ[illegible] ಇದ್ದ. ಆದರೆ ಈ ಕೂಲಿ ಕೆಲಸದ ಸಂದರ್ಭ[illegible] ಜೊತೆಗಾರ ಕೂಲಿಗಾರನ ಹೆಂಡತಿಯೊಂದಿಗೆ ಸಲು[illegible] ಅದು ದೈಹಿಕ ಸಂಪರ್ಕದ ಮಟ್ಟವನ್ನೂ ತಲು[illegible]

ಹಾಗೆ ರುಚಿ ಹತ್ತಿಸಿಕೊಂಡ ಗಿರೀಶ [illegible] ಮರಳಿದವನೇ ಪಕ್ಕಾ ಕಾಮುಕನಾಗಿ ಬದಲಾಗಿ ಅ[illegible] ಮಹಿಳೆಯರನ್ನು ಬೇಟೆಯಾಡತೊಡಗಿದ. ಇದೀಗ [illegible] ಚುರುಕುತನದಿಂದಾಗಿ ಅದಕ್ಕೊಂದು ಬ್ರೇಕ್ ಬಿ[illegible]


• ವರ[illegible]

ಮಾಟ ಮಾಡಿಸ್ಯಾರೆ ಅಂದ!

ಈ [illegible] ಹಂತಕಗಳು, ಅತ್ಯಾಚಾರಿಗಳು ಮೈಮೇಲ ಲಾರಿ ಹರಿಯುತ್ತಲೇ [illegible] ಪಡ ಮೈಮರೆತರ ಮಹಾನ್ ಪಾತಕಗಳೂ ತಪ್ಪಿಸಿಕೊಳ್ಳುವ [illegible] ಕಡೆಯಿಂದಲೂ ಇಂತಹುದೇ ಒಂದು ತಂತ್ರ ಹೊರಬಿದ್ದಿದೆ.

[illegible] ಪ್ರಕಾರ ಗಿರೀಶನಿಗೆ ಯಾರೋ ಮಾಟ ಮಾಡಿಸಿದ್ದಾರಂತೆ! [illegible] ದರೋಡೆಗಳಿಗೂ ಅದೇ ಕಾರಣವಂತೆ! ಆತನೇ ಹೇಳಿಕೊಂಡ [illegible] ಕೊಲೆ ಮಾಡಬೇಕೆನ್ನಿಸಿ, ಆವೇಶಗೊಂಡು ಮಾನಸಿಕ ಸ್ಥಿಮಿತ ಕಳೆದುಹೋಗುತ್ತದ. [illegible] ದೇಲೋ ಸಿಕ್ಕರ ಅದಾಗಲೇ ಅರಜೀವವಾದವಳ ಪೂರ್ತಿ ಜೀವ ತೆಗೆದು [illegible]

ಪಾಪಿಯ ಬಾಯಿಂದ ಬಂದ ಇಷ್ಟೆಲ್ಲಾ ವಿವರಗಳನ್ನು [illegible] ಆದ, ಕೊಲೆ ಮಾಡಿದ ಮೇಲೆ ಹೆಣದ ಮೈಮೇಲಿನ ಚಿನ್ನ, ಹಣ, [illegible] ಅಂತ ಬಿಡಕೊಡಿಯುವ ಮೂಲಕ ಗಿರೀಶನ ತಪ್ಪಿಸಿಕೊಳ್ಳುವ ನಾಟಕ ಸಮಾಪ್ತಿಗೊಂಡಿದೆ



...ತ್ತರ ಕನ್ನಡ : ಕಾಂಗ್ರೆಸ್ ಕೊಳಕರ ಪರಚಾಟ!

...ತ್ತರ ಕನ್ನಡ ಕಾಂಗ್ರೆಸ್ ಈ ಜನ್ಮದಲ್ಲಿ ...ಗುವ ಹಾಗೆ ಕಾಣಿಸುತ್ತಿಲ್ಲ. ಮ್ಯಾಗಿ ಮತ್ತು ...ೆ ಜಿಲ್ಲಾ ಕಾಂಗ್ರೆಸ್ ಶವಪೆಟ್ಟಿಗೆಗೆ ಹೊಡೆದ ...ಸು ಪ್ರತಿಷ್ಠಿತ ಮೊಳೆಗಳಾಗಿವೆ. ಮೂರನೇ ...ನ್ನು ಈ ಮನೆಮುರುಕ ...ರ ಹಿಂಬಾಲಕರು ಜಡಿಯು ...ಪಿಸಿಸಿ ಔಟ್ ಗೋಯಿಂಗ್ ...ವಿ. ದೇಶಪಾಂಡೆ ಮತ್ತಾತನ ...ವೈರಿ ಮಾರ್ಗರೆಟ್ ಆಳ್ವ ...ಬುಗಳು ಮುಖ ಮೂತಿ ಪರಚಾಡಿ ಕೊಳ್ಳುತ್ತಿದ್ದಾರೆ. ...ಟೀಕೆ, ತೆವಲಿನ ಮಟ್ಟಕ್ಕೆ ...ವ ಈ ಬುರ್ನಾಸ್ ಭಾನ್ಗಡಿ ...ಜನರಿಗೆ ಪುಕ್ಕಟೆ ಮನರಂಜನೆ ...ದೆ.




...ಷೆಯೆಂದರೆ ರಾಷ್ಟ್ರ ನಾಯಕಿ ಪೋಸು ಕೊಡುವ ...ಜ್ಯ ವಾಯಕನ ಗೆಟಪ್‌ನಲ್ಲಿ ಓಲಾಡುವ ಆರ್ವಿಡಿ ಅತ್ಯಲ್ಪರಂತೆ ಆಡುತ್ತಿದ್ದಾರೆ. ತಂತಮ್ಮ ...ಅಡ್ನಕಸುಬಿ ಚೇಲಾಗಳಿಗೆ ಕಡಿವಾಣ ...ಬಿಟ್ಟು ಕುಸ್ತಿಗೆ ಕುಮ್ಮಕ್ಕು ಕೊಡುತ್ತ ಚಂದ ...ದ್ದಾರೆ. ಈ ದೊಡ್ಡವರ ಸಣ್ಣತನದಿಂದ ಇಡೀ ...ಂಗ್ರೆಸ್ ಘಟಕವೇ ಬರ್ಬಾದಾಗಿ ಹೋಗಿದೆ. ...ನಾಡಿಬಡಿತ ಅರ್ಥವಾಗದ ಮ್ಯಾಗಿ ಮತ್ತು ...ಪೊಗರಿನ ಆರ್ವಿಡಿ ಡಿಸಿಸಿ ಕಬ್ಜಾ ಮಾಡಿಕೊಳ್ಳಲು ...ಬೀದಿ ಕಾಳಗವೀಗ ಕ್ಲೈಮ್ಯಾಕ್ಸ್ ತಲುಪಿದೆ.

...ಲ್ಲಾ ಕಾಂಗ್ರೆಸ್‌ನ ಸಾಂಸ್ಥಿಕ ಚುನಾವಣೆ ಪ್ರಕ್ರಿಯೆ ...ಗೀಡಾಗಿದೆ. ಕೆಪಿಸಿಸಿ ಔಟ್‌ಗೋಯಿಂಗ್ ...ರ್ವಿಡಿ ತನ್ನ ಕೊನೆಗಾಲದ ಅಷ್ಟೂ ಅಸ್ತ್ರ ಬಳಸಿ ...ಷ್ಯಸಂಕುಲದ ಸರ್ವನಾಶ ಮಾಡಿಬಿಟ್ಟಿದ್ದಾರೆ. ...ಕೆರಳಿರುವ ಮ್ಯಾಗಿ ಮೇಳ ಒಡತಿಯು ...ದಂತೆ ಕೆಪಿಸಿಸಿ ಕಚೇರಿಗೇ ನುಗ್ಗಿ ದೇಶಪಾಂಡೆಗೆ ...ಸೂಗಿ ಮೊಳಗಿಸಿ ಆಗಿದೆ. ಈ ದಾಳಿಯ ಬಳಿಕ ...ಂಗ್ರೆಸ್‌ನ ಶೀತಲ ಕದನ ಬೀದಿ ಕಾಳಗವಾಗಿ ...ತು! ಎರಡೂ ಬಣದವರು ಪ್ರತೀದಿನ ಪ್ರತಿ ...ಲ್ಲಿ ಪತ್ರಿಕಾಗೋಷ್ಠಿ ಕರೆದು ವೈಯಕ್ತಿಕ ಮೂದಲಿಕೆ, ...ಗಳನ್ನು ರಂಜನೀಯವಾಗಿ ಪ್ರಸ್ತುತ ಪಡಿಸುತ್ತಿದ್ದಾರೆ.


...ೋಬ್ಬರಿ 13 ವರ್ಷ ಶಾಂತಾರಾಮ ಹೆಗಡೆ ...ದ್ಧ ಹೇತ್ಲಾಂಡಿ ಪುಢಾರಿ ಡಿಸಿಸಿ ಅಧ್ಯಕ್ಷನಾಗಿದ್ದ, ದೇಶಪಾಂಡೆಯ ಈ ಗುಲಾಮ ಪಾರ್ಟಿಗೆ ಕೆಡುಕು ಮಾಡಿದ್ದೇ ಜಾಸ್ತಿ. ಸ್ವಂತ ಗ್ರಾಪಂ ಏರಿಯಾದಲ್ಲೂ ಮೂರು ಮತ ಪಾರ್ಟಿಗೆ ತರಲಾಗದ ಈ ಅಡ್ಡಕಸುಬಿಯ ಅವಾಂತರ, ಅಯೋಗ್ಯತೆಯಿಂದ ಕಾಂಗ್ರೆಸ್ ಜಿಲ್ಲೆಯ ದಶದಿಕ್ಕಲ್ಲೂ ದಿವಾಳಿಯೆದ್ದು ಹೋಯ್ತು. ಈಗೀತನಿಗೆ ರಿಟೈರ್‌ಮೆಂಟ್ ಕೊಟ್ಟು 'ಬಂ' ಭಾಮೈದ ಭೀಮಣ್ಣನಾಯ್ಕ ಎಂಬಾತನಿಗೆ ಪಟ್ಟಾಭಿಷೇಕ ಮಾಡಲು ಆರ್ವಿಡಿ ರೆಡಿಯಾಗಿದ್ದಾರೆ. ಆರ್ವಿಡಿಯ ಈ ಕುತಂತ್ರಾದ ಹಿಂದೆ ಜಿಲ್ಲೆಯ ಬಹುಸಂಖ್ಯಾತ ದೀವರ ದೊರೆ 'ಬಂ'ರನ್ನು ಪ್ರಸನ್ನಗೊಳಿಸಿ ತನ್ನ ಸುಪುತ್ರ ಪ್ರಶಾಂತ ದೇಶಪಾಂಡೆಯನ್ನು ಎಂಪಿ ಅಥವಾ ಎಮ್ಮೆಲ್ಲೆ ಮಾಡುವ ದುರಾಲೋಚನೆ ಅಡಗಿದೆ.

ಅನಿವಾರ್ಯವಾಗಿ ಅಧಿಕಾರ ತ್ಯಜಿಸ ಬೇಕಾಗಿರುವ ಶಾಂತ್ಹೆಗಡೆ ಸ್ತಿಮಿತವನ್ನೇ ಕಳಕೊಂಡುಬಿಟ್ಟಿದ್ದಾರೆ. ಆಕಾಶಕ್ಕೆ ಉಗುಳಿ ಎಂಜಲು ತನ್ನ ಮುಸುಡಿ ಮೇಲೆಯೇ ಹಾಕಿಕೊಳ್ಳುತ್ತಿದ್ದಾರೆ. ಬಾಯಿಗೆ ಬಂದಂತೆ ಹಲಬುತ್ತಿದ್ದಾರೆ. ಅತ್ತ ಜಿಲ್ಲೆಯ ತೋಟಿಗರ ಶ್ರೀಮಂತ ಟಿಎಸ್ಎಸ್ ಸೊಸೈಟಿ ಕುರ್ಚಿಯೂ ಅಲುಗುತ್ತಿರುವುದರಿಂದ ಏನು ಮಾಡಬೇಕೆಂದು ತಿಳಿಯುತ್ತಿಲ್ಲ ಶಾಂತ್ಹೆಗ್ಡೆಗೆ, ಪಾಪ! ಮ್ಯಾಗಿ ಬಳಗದ ಮೇಲೆ ಮುಗಿಬಿದ್ದು ತನಗೆ ಶಿರಸಿ ಅಸೆಂಬ್ಲಿ ಟಿಕೆಟ್ ತಪ್ಪಿಸಿದ ಸೇಡು ತೀರಿಸಿಕೊಳ್ಳುತ್ತಿದ್ದಾರೆ. ಆತನಾಡುತ್ತಿರುವ ತೀಟೆಯ ಮಾತುಗಳೇ ಅಧ್ಯಕ್ಷನಾಗಿದ್ದಾಗ ಪಕ್ಷಕ್ಕೆ ಎಂತೆಂಥ ದ್ರೋಹಗಳನ್ನು ಬ್ರಾಹ್ಮಣವಾದಿ ಶಾಂತ್ಹೆಗ್ಡೆ ಮಾಡಿದ್ದನೆಂಬುದನ್ನ ಬಿಚ್ಚಿಡುತ್ತಿವೆಯಷ್ಟೇ.....



ಪೊಕ್ಕು ಪುಢಾರಿ ಶಾಂತ್ಹೆಗ್ಡೆಗೆ ಮೊನ್ನೆ ಇದ್ದಕ್ಕಿದ್ದಂತೆ ಅದೇನಾಯ್ತೋ ಏನೋ? "ಮಾರ್ಗರೆಟ್ ಬಂಟರೆಲ್ಲ ಲೋಫರ್ಸ್.... ಹಾಗಂತ ಹಿಂದಾಕೆ ಎಂಪಿಯಾಗಿದ್ದಾಗ ಜಿಲ್ಲೆಯಲ್ಲಿದ್ದ ಎಸ್ಪಿ ಜೆ.ಬಿ. ಛಬ್ಬ ಸಾಹೇಬರೇ ನನ್ನತ್ರ ಹೇಳಿದ್ರು..." ಎಂದು ಪತ್ರಿಕಾ ಗೋಷ್ಠಿ ಕರೆದೇ ಶಾಂತ್ಹೆಗ್ಡೆ ಬಡಬಡಿಸಿಬಿಟ್ರು! ಮರುದಿನವೇ ನಿವೃತ್ತ ಐಪಿಎಸ್ ಅಧಿಕಾರಿ ಛಬ್ಬ "ನಾನೆಂದೂ ಹಾಗೆಲ್ಲ ಮ್ಯಾಗಿ ಶಿಷ್ಯರ ಬಗ್ಗೆ ಹೇಳಿಲ್ಲ, ಅವರೆಲ್ಲ ನಂಗೆ ಎಸ್ಪಿಯಾಗಿದ್ದಾಗ ಬಾಳ ಸಹಕಾರ ಕೊಟ್ಟಿದ್ರು...... ನನ್ನ ವಿಶ್ರಾಂತ ಕಾಲದಲ್ಲಿ ಶಾಂತ್ಹೆಗ್ಡೆ ತನ್ನ ರಾಜಕೀಯಕ್ಕಾಗಿ ನನ್ನನ್ನು ವಿವಾದಕ್ಕೆ ಎಳಿಬಾರದಿತ್ತು" ಎಂದು ತಪರಾಕಿನೆ ಬಿಗಿದುಬಿಟ್ಟರು ಶಾಂತ್ಹೆಗ್ಡೆಗೆ!!

ಶಾಂತ್ಹೆಗ್ಡೆ ಹೇಳಿದ್ದೇನೋ ಸತ್ಯವೇ. ಆದರೆ ಅದನ್ನು ನೇರಾನೇರ ಹೇಳುವ ಧೈರ್ಯ ಇಲ್ಲದ ಈ ರಣಹೇಡಿ ಛಬ್ಬಗೆ ನೇತಾಡಲು ಹೋಗಿ ಆತನಿಂದ ಮೂತಿಗಿಕ್ಕಿಸಿ ಕೊಳ್ಳುವಂತಾಯ್ತು. ಮ್ಯಾಗಿ ಬಂಟರು ಭಾನ್ಗಡಿ ಭಂಡರೆಂಬುದು ಇಡೀ ಜಿಲ್ಲೆಯಲ್ಲಿರುವ ಜನಾಭಿಪ್ರಾಯ. ಆದರೆ ಈ ಶಾಂತ್ಹೆಗ್ಡೆ ತನ್ನ ತೆವಲು ತೀರಿಸಿಕೊಳ್ಳಲು ಛಬ್ಬ ಬೆನ್ನ ಹಿಂದೆ ಅಡಗಿಕೊಂಡು, ಆತನ ಹೆಗಲಿನ ಮೇಲೆ ಗನ್ ಇಟ್ಟು "ಢಮ್" ಸಿಡಿಸಿದ್ದಾರೆ. ಈ ಹುಸಿ ಶೂಟೌಟ್ ನಂತರ ಉತ್ತರಕನ್ನಡದಲ್ಲಿ ಮ್ಯಾಗಿಯ ಅತೃಪ್ತರ 'ಚರಿತ್ರೆ'ಯ ಚರ್ಚೆಯಾಗುತ್ತಿದೆ.



ಮ್ಯಾಗಿಯ ನಿಕಟವರ್ತಿಗಳಲ್ಲಿ ಹೆಚ್ಚಿನವರು ಜಿಲ್ಲೆಯಲ್ಲಿ ಹೆಸರು ಕೆಡಿಸಿಕೊಂಡ ಭೂಪರೇ. ಮ್ಯಾಗಿ ಬೆಟಾಲಿಯನ್‌ನ "ದಂಡ"ನಾಯಕ ಮೋಂಟಿ ಫರ್ನಾಂಡೀಸ್ ಎಮರ್ಜನ್ಸಿ ವೇಳೆ ವಾಚ್ ಸ್ಮಗ್ಲಿಂಗ್‌ನಲ್ಲಿ ಸಿಕ್ಕಿಬಿದ್ದು ಕೀರ್ತಿಶಾಲಿಯಾಗಿದ್ದಾತ! ಶಿರಸಿಯ ದೀಪಕ್, ಹೊನ್ನಾವರ್ ಎಂಬ ಕ್ರಿಮಿನಲ್‌ಗೆ ಮ್ಯಾಗಿ ಅದ್ಯಾವ ಅರ್ಹತೆಗೆ ಏನೋ ನವಮಂಗಳೂರು ಪೋರ್ಟ್ ಟ್ರಸ್ಟ್‌ನ ಸದಸ್ಯನಾಗಿಸಿದ್ದಾರೆ. ದೋ ನಂಬರ್ ದಂಧೆಯ ಧೀರನೀತ. ಹುದ್ದೆಗಾಗಿ ಸದಾ ಹೋರಾಡುವ ಹುಟ್ಟು ಓರಾಟಗಾರ ರವೀಂದ್ರನಾಥನಾಯ್ಕ ಬ್ಯಾಂಕ್ ಮಾಡಿ ಹಲವರಿಗೆ ಪಂಗನಾಮ ಹಾಕಿದ್ದಾನೆ. ಭಟ್ಕಳದ ರಾಮಾ ಮೊಗೇರನೆಂದರೆ ಜನ ಮೂಗು ಮುರಿಯುತ್ತಾರೆ. ಕಾರವಾರದ ಯೂಸ್‌ಲೆಸ್ ಅಶೋಕ್ ನಾಯ್ಕ ಒಂಥರಾ ಮುಖೇಡಿ ಮಹಾನುಭಾವ. ಜಿ.ಪಂ. ಅಧ್ಯಕ್ಷನಾಗಿದ್ದಾಗ ಹೊನ್ನಾವರದ ಆರ್.ಎಸ್. ರಾಯ್ಕರ್ ಮಾಡಿದ ಲೂಟಿ ಆಸ್ತಿ, ಆ ಬಲದಿಂದಾತ ಎಮ್ಮೆಲ್ಲೆಗಿರಿ ಖರೀದಿಗೆ ಹಾಕುತ್ತಿರುವ ಲಗಾಟಗಳು ಲೋಕ ಪ್ರಸಿದ್ಧ. ಇಂಥ ಲಫಡಾದಾರರೇ ಮ್ಯಾಗಿ ಜಿಲ್ಲೆಗೆ ಬಂದಾಗ ಗಡಿಯಲ್ಲಿ ಭರ್ಜರಿ ಹೂಹಾರ ಹಾಕಿ, ಜಿಲ್ಲೆ ಸುತ್ತಾಡಿಸಿ, ಏನೇನೋ ಚಾಡಿ ಹೇಳಿ ದಿಲ್ಲಿಗೆ ಕಳಿಸಿಕೊಡುವುದು ಮ್ಯಾಗಿಯ ಪ್ರವಾಸ ಪ್ರೊಸಿಜರ್!!

ಜಿಲ್ಲೆಯ ರಾಜಕೀಯ, ಸಾಮಾಜಿಕ ವಲಯದಲ್ಲಿ ಒಂಚೂರೂ ಕ್ರೆಡಿಬಲಿಟಿ ಯಿಲ್ಲದ ಹಲಾಲುಟೋಪಿಗಳನ್ನು ಸುತ್ತಮುತ್ತ ಇಟ್ಟುಕೊಂಡಿದ್ದೇ ಮ್ಯಾಗಿಗೆ ಮುಳುವಾಯ್ತು. ಆಕೆ ಜಿಲ್ಲೆಯ ಅಭಿವೃದ್ಧಿಗೆ ಅದೆಷ್ಟು ಕೋಟಿ ಕೋಟಿ ತಂದು ಸುರಿದರೂ ಅದೆಲ್ಲ ನೀರಲ್ಲಿ ಮಾಡಿದ ಹೋಮದಂತಾಗಿ ಹೋಯ್ತು. ಮ್ಯಾಗಿ ಕಳ್ಳರ "ಗುರು ಮಾತೆ" ಎಂಬ ಆ್ಯಂಟಿ ಇಮೇಜು ಬೆಳೆಯಿತು. ಹಾಗಂತ ಮ್ಯಾಗಿ ಶಿಷ್ಯರ ದೋಷವನ್ನೆಲ್ಲ ಎತ್ತಿಯಾಡುವ ನೈತಿಕತೆ ಮುಗ್ಧ ತೋಟಿಗರ ಮುಂಡಾ ಮೋಚಿ ಆಸ್ಪತ್ರೆ ಕಟ್ಟಿಕೊಂಡಿರುವ, ಕಾಂಗ್ರೆಸ್‌ಗೆ ದೋಖಾ ಹಾಕಿರುವ ದಗಾಕೋರ ಶಾಂತ್ಹೆಗ್ಡೆ ಇಲ್ಲ. ಹಾಗಾಗಿ ಈ ಪಡಪೋಶಿ ನಿವೃತ್ತ ಎಸ್ಪಿ ಛಬ್ಬಗೆ ಗಂಟುಬಿದ್ದು ಹಾಸ್ಯಾಸ್ಪದನಾಗಿದ್ದಾನೆ.

ಸ್ವಯಂಘೋಷಿತ ಸಂಭಾವಿತ ಶಾಂತ್ಹೆಗ್ಡೆ ಹೀಗೆಲ್ಲ ಪಿರ್ಕೀಸ್‌ನಂತೆ ಮಾತಾಡಲು ಕಾರಣವೇನೆಂಬ ಜಿಜ್ಞಾಸೆ ಈಗ ಜಿಲ್ಲೆಯ ಅದರಲ್ಲೂ ಘಟ್ಟದ ಮೇಲಿನ ಹೈಗರ ಕೇರಿ ಕೇರಿಗಳಲ್ಲಿ ನಡೆದಿದೆ. ಪ್ರತಿಷ್ಠಿತ ಅಡಿಕೆ ಬೆಳೆಗಾರರ ಟಿಎಸ್ಎಸ್‌ನಲ್ಲಿ ಶಾಂತ್ಹೆಗ್ಡೆ "ಕಾಫಿರ್" ಎಂಬ ಕೂಗೆದ್ದಿದೆ. ಹೈಗರೇ ಮೋಸಗಾರ ಎಂದು ಮೂದಲಿಸುತ್ತಿದ್ದಾರೆ. ಸಹಕಾರ ಇಲಾಖೆ ಕಾಯ್ದೆ ಕಲಂ 64ರ ಪ್ರಕಾರ ಶಾಂತ್ಹೆಗ್ಡೆ ವಿರುದ್ಧ ವಿಚಾರಣೆ ನಡೆಯುತ್ತಿದೆ. ಇದೇ ಹೊತ್ತಿಗೆ ಕಾಂಗ್ರೆಸ್‌ನಲ್ಲೂ ಆತನ ಅಸಲೀ ಬಣ್ಣ ಬಯಲಾಗಿದೆ.

ಇಂಥ ಸಂಕ್ರಮಣ ಕಾಲದಲ್ಲೇ ಗೋಲ್‌ಮಾಲ್‌ನಲ್ಲಿ ಹೆಲ್ಪಾಗುತ್ತಿದ್ದ ಡಿಸಿಸಿ ಅಧ್ಯಕ್ಷತೆಗೂ ಸಂಚಕಾರ ಬಂದಿರುವುದು ಶಾಂತ್ಹೆಗ್ಡೆಯ ತಲೆ ಕೆಡಿಸಿಬಿಟ್ಟಿದೆ! ಹಾಗಾಗಿಯೇ ಅಧಿಕಾರ ಲಾಲಸೆಯ ಪೊಕ್ಕು ಪುಢಾರಿ ಶಾಂತ್ಹೆಗ್ಡೆಯ ಹುಚ್ಚು ಮನಸ್ಸಿನ ಹತ್ತು ಮುಖವಾಡ ಕಳಚಿ ಬೀಳುತ್ತಿದೆ. ಜತೆಗೆ ಕಾಂಗ್ರೆಸ್‌ನ ಕುಬ್ಜರಾದ ಮ್ಯಾಗಿ, ಆರ್ವಿಡಿಗಳ ಭಂಡತನವೂ ಅನಾವರಣ ಆಗುತ್ತಿದೆ. ಈ ಮದ್ದಾನೆಗಳ ಗುದ್ದಾಟದಲ್ಲಿ ಜಿಲ್ಲಾ ಕಾಂಗ್ರೆಸ್ ಖತಮ್ ಆಗಿ ಹೋಗಿದೆ!!

• ನಹುಶ

...ಅನಂತ್ ಸಿಎಂ–ರೆಡ್ಡಿ ಡಿಸಿಎಮ್!

...0

...ಅನಂತ್ ನಿಷ್ಠೆಗೆ ತಕ್ಕಂತೆ ಯಡ್ಡಿ ದಮನಕ್ಕೆ ಕೈ ...ಸುತ್ತೇವೆಂದು ಮಾತು ಕೊಟ್ಟಿದ್ದಾರೆ. ಈ ಪೈಕಿ ...ಮಾತಾಡದೇ ತೆಪ್ಪಗಿದ್ದದ್ದು ಮಾತ್ರ ದಾಸರಹಳ್ಳಿಯ ...ಚಕ ಶಾಸಕ ಶೆಟ್ಟಿಹಳ್ಳಿ ಮುನಿರಾಜು. ಅದು ಅಶೋಕ್ ...ನ ಆತನ ನಿಷ್ಠೆಯೋ ಅಥವಾ ಹೊಡೆದ ...ಳ್ಳಿಯ ಕಾರಣದ ಭೀತಿಯೋ ಬಲ್ಲವರ್ಯಾರು?

ಮಹಾಮಾರಿ ಸುಷ್ಮಾ

...ದ್ಯ ಯಡ್ಡಿ ವಿರುದ್ಧದ ...ಹರಣೆಯ ನೇತೃತ್ವ ಗಣಿರೆಡ್ಡಿಗಳದ್ದೇ ...ಹಿಂದೆ ನಿಂತು ಬುಗುರಿ ...ತ್ತಿರುವುದು ಅನಂತ್‌ಕುಮಾರ್. ...ಸುತರು ಅಧಿಕಾರಕ್ಕೆ ತಂದ ಯಡ್ಡಿ ...ರವನ್ನು ಒಂದು ವರ್ಷದ ...ದರೂ ಆಳಲೇಬೇಕೆಂಬ ದುರಾಶೆ ...ತಲೆ ಹೊಕ್ಕಿದೆ. ಅದಕ್ಕೆ ತಕ್ಕಂತೆ ...ಡ್ಡಿಗಳ ಉಪಮುಖ್ಯಮಂತ್ರಿ ...ಿ ದಾಹ ಕೂಡ ಉಲ್ಬಣಿಸಿದೆ. ...ರ ಇಂಥ ಕಿತಾಪತಿಗೆ ಕೇಂದ್ರ ನಾಯಕಿ ಸುಷ್ಮಾ ...ಪಂಪ್ ಹೊಡೆಯುತ್ತಿರುವುದೇ ಯಡ್ಡಿಯ ...ಕ್ಕೆ ಮೂಲಕಾರಣವಂತೆ.



ಜಗದೀಶ್ ಶೆಟ್ಟರ್

...ನ್ನೆಯಷ್ಟೇ ಬಿಜೆಪಿ ಹೈಕಮಾಂಡ್‌ನ ಮುಂದೆ ...ಸ್ವರಾಜ್ 'ಗಣಿ ರೆಡ್ಡಿಗಳ ಪೈಕಿ ಒಬ್ಬರನ್ನು ...ಮುಖ್ಯಮಂತ್ರಿ ಮಾಡಿದರಷ್ಟೇ ಯಡ್ಡಿ ಸರ್ಕಾರ ...ವಾಗಿರಲು ಸಾಧ್ಯ. ಇಲ್ಲದೇ ಹೋದರೆ ...ಳ್ಳಾ ನಾಳೆ ಯಡ್ಡಿಯನ್ನು ಇಳಿಸೋ ...ಸಹಗೆ ರೆಡ್ಡಿಗಳು ಖಂಡಿತಾ ಕೈಹಾಕುತ್ತಾರೆ' ...ಬ್ಲಾಕ್‌ಮೇಲ್ ಶೈಲಿಯಲ್ಲಿ ಲಾಬಿ ...ದ್ದೇ ಯಡ್ಡಿಯ ಬ್ಲಡ್‌ಪ್ರೆಶರ್ ಹೆಚ್ಚಾಗಿದೆ.

ಹಾಗಂತ ಹೈಕಮಾಂಡ್ ಆಗಲಿ, ಆರೆಸ್ಸೆಸ್ ಆಗಲಿ ಯಡ್ಡಿಯ ವಿರುದ್ಧವಿದ್ದರೆಂದಾಗಲಿ, ಗಣಿರೆಡ್ಡಿಗಳ ಬುಡಮೇಲು ಕೃತ್ಯಕ್ಕೆ ಗ್ರೀನ್‌ಸಿಗ್ನಲ್ ಕೊಟ್ಟಿದ್ದಾರೆಂದಾಗಲಿ ಅಲ್ಲ. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಮೇಲೆ ನಡೆದ ಆರು ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಯ ಖರ್ಚುವೆಚ್ಚಗಳನ್ನೆಲ್ಲ ನಿಭಾಯಿಸಿದ್ದೇ ಯಡ್ಡಿ. ರಾಜಸ್ತಾನ್, ಮಧ್ಯಪ್ರದೇಶ್, ಗುಜರಾತ್, ಛತ್ತೀಸ್‌ಗಡ್, ಹರ್‍ಯಾಣಾ ಮತ್ತು ಜಾರ್ಖಂಡ್‌ಗಳ ಪೈಕಿ ಗುಜರಾತ್ ಬಿಟ್ಟರೆ ಮಿಕ್ಕೆಲ್ಲಾ ರಾಜ್ಯಗಳ ಬಿಜೆಪಿಯ ಎಲೆಕ್ಷನ್ ಖರ್ಚಿನ ಬಹುಪಾಲನ್ನು ಯಡ್ಡಿಯೇ ನಿಂತು ಪೂರೈಸಿದರು. ತೀರ ಇತ್ತೀಚೆಗೆ ಕೈಕೊಟ್ಟು ಹೋಗಿದ್ದ ಬಿಜೆಪಿ ಶಾಸಕರನ್ನು ಮತ್ತೆ ಖರೀದಿ ಮಾಡಿ ಜಾರ್ಖಂಡ್‌ನಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಂತೆ ಮಾಡಿದ್ದೇ ಯಡ್ಡಿ ಕಳಿಸಿದ ದುಡ್ಡಿನಿಂದ ಎಂಬದು ಬಿಜೆಪಿ ವರಿಷ್ಠರಿಗೆ ಚೆನ್ನಾಗಿ ಗೊತ್ತು.

800 ಕೋಟಿ?

ದೇಶದ ಬೇರೆ ಬೇರೆ ರಾಜ್ಯಗಳ ಬಿಜೆಪಿಯ ಉದ್ಧಾರಕ್ಕಾಗಿ ನಯಾಪೈಸೆಯ ನೆರವನ್ನೂ ಕಲ್ಪಿಸದ ನರೇಂದ್ರ ಮೋದಿಗಿಂತಲೂ ಯಡ್ಡಿಯೇ ಹೈಕಮಾಂಡ್ ಪಾಲಿಗೆ ಆಪದ್ಬಾಂಧವ. ಒಂದು ಮೂಲದ ಪ್ರಕಾರ ಬೇರೆ ಬೇರೆ ರಾಜ್ಯಗಳ ಬಿಜೆಪಿ ಚುನಾವಣಾ ಖರ್ಚಿಗೆಂದು ಕರ್ನಾಟಕದಿಂದ ಯಡ್ಡಿ ಕಳಿಸಿಕೊಟ್ಟ ರೊಕ್ಕದ ಮೊತ್ತವೇ 800 ಕೋಟಿಗೂ ಅಧಿಕ!

ಋಣಕ್ಕೆ ಬದ್ಧ ಹೈಕಮಾಂಡ್‌ಗೆ ಸದ್ಯ ಯಡ್ಡಿಯನ್ನು ಬೆಂಬಲಿಸದೇ ವಿಧಿಯೇ ಇಲ್ಲ. ಆರೆಸ್ಸೆಸ್ ಕೂಡ ಯಡ್ಡಿಯನ್ನೇ ನೆಚ್ಚಿ ಕೂತಿದೆ. ವೈ. ಚ. ಜಯದೇವರಿಂದ ಹಿಡಿದು ಕಲ್ಲಡ್ಕಭಟ್ಟನ ತನಕ ವಿವಿಧ ಆರೆಸ್ಸೆಸ್ ಮುಖಂಡರನ್ನು ಯಡ್ಡಿ ಸಂತೃಪ್ತಿಯಿಟ್ಟಿದ್ದಾರೆ. ಆರೆಸ್ಸೆಸ್ ಕಾರ್ಯಕರ್ತರೇ ಹೇಳುವಂತೆ ಆರೆಸ್ಸೆಸ್ ಮುಖಂಡರ ಶಿಫಾರಸ್ಸಿನ ಮೇರೆಗೆ ಯಡ್ಡಿ 300 ಎಕರೆಗೂ ಅಧಿಕ ಜಮಿನನ್ನು ಡೀನೋಟಿಫೈ ಮಾಡಿಕೊಟ್ಟಿದ್ದಾರೆ. ಯಡ್ಡಿಯ ಆರೆಸ್ಸೆಸ್ ನಿಷ್ಠೆ ಯಾವ ಮಟ್ಟದ್ದೆಂದರೆ, ಸತ್ತೇ ಹೋಗಿದ್ದ ಸಂಘಪರಿವಾರದ ಮುಖವಾಣಿ 'ಹೊಸದಿಗಂತ' ಎಂಬ ಚೆಡ್ಡಿ ದಿನಪತ್ರಿಕೆಗೆ ಮರುಜೀವ ಕೊಡಲು ರಾಜ್ಯದ ತಿಜೋರಿಯಿಂದ ಯಡ್ಡಿ ಕರುಣಿಸಿದ್ದು ಕೇವಲ ನೂರು ಕೋಟಿ ರೂಪಾಯಿಗಳು.

ಹೊಸದಿಗಂತ ಪತ್ರಿಕೆಯ ಮಾಲಿಕತ್ವವಿರುವುದು ಜ್ಞಾನಭಾರತಿ ಟ್ರಸ್ಟ್ ಎಂಬ ಚೆಡ್ಡಿ ಸಂಸ್ಥೆಯ ಹೆಸರಲ್ಲಿ. ಈ ಟ್ರಸ್ಟಿಗೆ ಮುಖ್ಯಸ್ಥನಂತಿರುವವನು ಶಿವಮೊಗ್ಗದ ಹಿರಿಯ ಆರೆಸ್ಸೆಸ್ ನಾಯಕ ಭಾನುಪ್ರಕಾಶ್. ಕಳೆದ ಲೋಕಸಭಾ ಚುನಾವಣೆಯಲ್ಲಿ ಈತನೇ ಬಂಗಾರಪ್ಪ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಬೇಕಿತ್ತು. ಬದಲಿಗೆ ಯಡ್ಡಿ ಮಗ ರಾಘು ನಿಂತ. ಗೆದ್ದೂ ಬಿಟ್ಟ. ಆರೆಸ್ಸೆಸ್ ನಿಷ್ಠ ಭಾನುಪ್ರಕಾಶ್ ಆವತ್ತು ಸೋಲ್ತೆತ್ತದೆ ಯಡ್ಡಿ ಮಗನಿಗಾಗಿ ದುಡಿದ.



ಚಂದ್ರೇಗೌಡ

ಗಣಿಕಳ್ಳರನ್ನು ಛೂಬಿಟ್ಟ

ಇನ್ನು ಯಡ್ಡಿ ತನ್ನ ಆರೆಸ್ಸೆಸ್ ನಿಷ್ಠೆ ತೋರಿಸಲೇಬೇಕಲ್ಲವೆ? ಸತ್ತ ಹೊಸದಿಗಂತಕ್ಕೆ ನೂರು ಕೋಟಿ ಕೊಟ್ಟು ಜೀವ ತುಂಬಿದ್ದಾರೆ. ನಡೆದಷ್ಟೂ ಕಾಲ ಕೋಮು ದ್ವೇಷವನ್ನೇ ಉಸಿರಾಡಿ, ಬ್ರಾಹ್ಮಣ್ಯವನ್ನೇ ರಕ್ತಗತವಾಗಿಸಿಕೊಂಡಿದ್ದ ಹೊಸದಿಗಂತ ಹುಟ್ಟುತ್ತಲೇ ರೋಗಗ್ರಸ್ತವಾಗಿತ್ತು, ಆ ರೋಗದಿಂದಲೇ ಕೊನೆಯುಸಿರೆಳೆದಿತ್ತು, ಇನ್ನು ವಿಜಯಕರ್ನಾಟಕ ವಿಷಭಟ್ಟನ ಕೈಗೆ ಸಿಕ್ಕಮೇಲಂತೂ ಹೊಸದಿಗಂತದ ಅಗತ್ಯವೇ ಇಲ್ಲ ಎಂಬಂತೆ ವಿ.ಕ. ಚೆಡ್ಡಿ ವಿಷ ಕಾರಲಾರಂಭಿಸಿತ್ತು, ಹಾಗಿದ್ದೂ ನೂರು ಕೋಟಿ ಕೊಟ್ಟು ಮತ್ತೆ ಹೊಸದಿಗಂತಕ್ಕೆ ಜೀವಕೊಟ್ಟ ಯಡ್ಡಿಯ ಆರೆಸ್ಸೆಸ್ ನಿಷ್ಠೆಗೆ ವೈ.ಚ. ಜಯದೇವನಂಥವರಾದರೂ ಬೆನ್ನು ತಟ್ಟದಿದ್ದರೆ ಹೇಗೆ?

ಕೇಂದ್ರ ಮಂತ್ರಿಯಾಗಿ ಹುಡ್ಕೊ, ವಿಮಾನ ಖರೀದಿ ಹಗರಣಗಳಲ್ಲಿ ಸಾವಿರಾರು ಕೋಟಿ ದೋಚಿಯೂ ಆರೆಸ್ಸೆಸ್‌ಗೆ ನಯಾಪೈಸೆ ನೆರವಾಗದ ಅನಂತ್‌ಗಿಂತಲೂ ಯಡ್ಡಿಯೇ ಲಾಯಕ್ಕೆಂಬುದು ಆರೆಸ್ಸೆಸ್ ವರಿಷ್ಠರ ನಿರ್ಧಾರವಂತೆ. ಹೀಗಾಗಿ ಯಡ್ಡಿಯನ್ನು ಬೀಳಿಸಿ ತಾನು ಮುಖ್ಯಮಂತ್ರಿಯಾಗುವ ಅನಂತ್ ಹುನ್ನಾರಕ್ಕೆ ಹೈಕಮಾಂಡ್ ಬೆಂಬಲವಾಗಲಿ, ಆರೆಸ್ಸೆಸ್ ಕುಮ್ಮಕ್ಕಾಗಲಿ ಕಷ್ಟವೇ. ಅದಕ್ಕೆ ಯಾವ ಅಂಕೆಗೂ ನಿಲುಕದ ಗಣಿರೆಡ್ಡಿಗಳನ್ನೇ ಮುಂದೆ ಬಿಟ್ಟು ಕಾರ್ಯ ಸಾಧಿಸುವುದು ಅನಂತ್ ದುರಾಲೋಚನೆ.

ಇದಕ್ಕೆ ಜಗದೀಶ್ ಶೆಟ್ಟರ್, ಈಶ್ವರಪ್ಪ ಥರದ ಪರೋಪಜೀವಿಗಳು ಖಂಡಿತಾ ಕೈಜೋಡಿಸುತ್ತಾರೆ. ಒಂದೆಡೆ ಅತೃಪ್ತ ಶಾಸಕರು ಕೊಟ್ಟ ಪೆಟ್ಟು, ಮತ್ತೊಂದೆಡೆ ಕುಮಾರಸ್ವಾಮಿ, ದೇವೇಗೌಡರು ಮಾಡಿದ ಲುಕ್ಸಾನು, ಮಗದೊಂದೆಡೆ ಹುಸಿದು ಕೂತ ಅನಂತ್‌ನ ಕುತಂತ್ರ, ಜೊತೆಗಿದ್ದೇ ಚೆನ್ನಿಗಿರಿಯುವ ಈಶ್ವರಪ್ಪನ ಹುನ್ನಾರ ಮತ್ತು ಯಾವ ಗಳಿಗೆಯಲ್ಲಾದರೂ ಸ್ಫೋಟಿಸಬಹುದಾದ ಗಣಿಕಳ್ಳರ ಷಡ್ಯಂತ್ರಕ್ಕೆ ಯಡ್ಡಿಯ ಪಾಡು ಏನೇನಾಗುತ್ತೋ, ಯಾವ ಕ್ಷಣದಲ್ಲಿ ಯಾವ ಬಾಂಬು ಸಿಡಿಯುತ್ತೋ ಬಲ್ಲವರ್ಯಾರು?

ಅಧಿಕಾರಕ್ಕಾಗಿ ಲೂಟಿ ಮತ್ತು ಲೂಟಿಗಾಗಿ ಅಧಿಕಾರ ಬಿಟ್ಟರೆ ಯಡ್ಡಿಗೆ ಬೇರೆ ಯಾವ ದಾರಿಯುಂಟು? •

ಹುಬ್ಬಳ್ಳಿ ಬೆಂಕಿ ಹಚ್ಚಲು ಹಾಕ್ಯಾಟ!

ಪುಟ್ಟದೊಂದು ನೆಪ ಸಿಕ್ಕರೂ ಸಾಕು ಇಡೀ ಹುಬ್ಬಳ್ಳಿಗೆ ಬೆಂಕಿ ಹಚ್ಚಲು ದುಷ್ಟ ಪಡೆಗಳು ತಯಾರಾಗಿ ನಿಂತಿವೆ. ಇಂಥಾ ಅಡ್ನಾಡಿ ಯುವಕರಿಗೆ ಹಿಂದೂ-ಮುಸ್ಲಿಂ ಮೂಲಭೂತವಾದಿಗಳ ಬೆಂಬಲವಿರುವುದು ಇದೀಗಲೇ ಸಾಬೀತುಗೊಂಡಿರುವ ವಿಚಾರ. ಈ ದಗಲ್ಬಾಜಿಗಳು ಮೊನ್ನೆ ಕೂಡಾ 'ಧರ್ಮಸೂಕ್ಷ್ಮ'ವೊಂದನ್ನು ನೆಪವಾಗಿಸಿಕೊಂಡು ಬೆಂಕಿ ಉಗುಳಲು ತಯಾರಾಗಿದ್ದರು. ಆದರೆ ಹಳೆಯ ಅನುಭವಗಳು ಹುಬ್ಬಳ್ಳಿಗರ ಮನದಲ್ಲಿ ಸುಳಿದಾಡಿ ಶಾಂತಿಯ ಮಳೆ ಸುರಿದಿದೆ. ಹುಬ್ಬಳ್ಳಿ ಬಚಾವಾಗಿದೆ.

ನಡೆದದ್ದೇನೆಂದರೆ, ದಸರಾ ಹಬ್ಬದಂದು ವಾಡಿಕೆಯಂತೆ ಬಮ್ಮಾಪುರ ಓಣಿಯ ದಲಿತರು ಕೂಗಮ್ಮದೇವಿಯ ಮೆರವಣಿಗೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ದೇವಿಯ ಮೂರ್ತಿಗೆ ಹೊಸದಾಗಿ ಪೇಂಟ್ ಬಳಿದು ಶೃಂಗರಿಸಿ ಮೆರವಣಿಗೆ ನಡೆಸುವುದು ಲಾಗಾಯ್ತಿನಿಂದ ನಡೆದುಬಂದ ರೂಢಿ. ಇದರಂತೆ ಅಂದೂ ಸಹ ಬಮ್ಮಾಪುರ ಓಣಿಯಲ್ಲಿ ದೇವಿಯ ಮೆರವಣಿಗೆಗೆ ಚಾಲನೆ ಸಿಕ್ಕಿತ್ತು.

ಹಬ್ಬದ ಗಮ್ಮತ್ತಿನಲ್ಲಿ ತೀರ್ಥ ಸೇವಿಸಿ ಚಿತ್ತಾಗಿದ್ದ ಮಂದಿಯೇ ದೇವಿಯ ಮೆರವಣಿಗೆಯ ಮುಂದಾಳತ್ವ ವಹಿಸಿದರು. ಕಡೆಗೂ ಕೂಗಮ್ಮ ದೇವಿ ಟಾಟಾ ಏಸಿ ವಾಹನದಲ್ಲಿ ಕುಂತು ಮೆರವಣಿಗೆ ಹೊರಟಳು. ಅದರ ಹಿಂದೆಯೇ ರಿಕ್ಷಾದಲ್ಲಿ ಪೂರ್ತಿ ಮತ್ತೇರಿಸಿಕೊಂಡಿದ್ದ ಯುವಕರ ಪಡೆಯೊಂದು ದೇವಿಯ ಮೂರ್ತಿಗೆ ಭಂಡಾರ (ಅರಿಶಿನ) ಎರಚುತ್ತಾ ಸಾಗಿತ್ತು.

ಆದರೆ ಮೆರವಣಿಗೆ ಪಿ.ಬಿ.ರಸ್ತೆಯಲ್ಲಿರುವ ಹಜರತ್ ಸೈಯದ್ ಸಾದತ್ ದರ್ಗಾದ ಬಳಿ ಬರುತ್ತಲೇ ಅಚಾತುರ್ಯವೊಂದು ನಡೆದಿತ್ತು, ಟೈಟಾದ ಯುವಕರ ಟೀಮು ದರ್ಗಾದ ಆವರಣಕ್ಕೆ ಅರಿಶಿನ ಎರಚಿಬಿಟ್ಟಿತ್ತು. ಇದಕ್ಕಾಗೇ ಕಾದು ಕುಂತಂತಿದ್ದ ಮುಸ್ಲಿಂ ಯುವಕರನೇಕರು ತಕ್ಷಣ ದರ್ಗಾದೆದುರು ಜಮಾಯಿಸಿ ಪ್ರತಿಭಟನೆ, ರಸ್ತೆ ತಡೆ ಅಂತೆಲ್ಲ ರಂಪಾಟ ಶುರುವಿಟ್ಟರು.



ಎರಡು ಕಡೆಯ ಅವಿವೇಕಿಗಳು ಅದೆಷ್ಟು ಮತ್ತೇರಿಸಿಕೊಂಡಿದ್ದವೆಂದರೆ, ಮಾಜಿ ಸಚಿವ ಹಿಂಡಸಗೇರಿ ಮತ್ತು ಅಂಜುಮನ್ ಸಂಸ್ಥೆಯ ಅಧ್ಯಕ್ಷ ಮಹ್ಮದ್ ಬಂದು ಸಮಾಧಾನಿಸಿದರೂ ಕೇಳು ಸ್ಥಿತಿಯಲ್ಲಿರಲಿಲ್ಲ, ಎರಡೂ ಕಡೆಯ ಹಿರಿಯರ ಮಾತಿಗೂ ಬೆಲೆ ಸಿಗಲಿಲ್ಲ. ತಕ್ಷಣ ಪೊಲೀಸ್ ಪಡೆ ಎಂಟ್ರಿಕೊಟ್ಟು ಎಲ್ಲರ ಬುಡಕ್ಕೆ ಲಾಠಿ ಬೀಸಿ ಒಂದಷ್ಟು ಮಂದಿಯನ್ನು ಬಂಧಿಸಿದ ಬಳಿಕ ಪರಿಸ್ಥಿತಿ ಹತೋಟಿಗೆ ಬಂತು.

ದೇವಿಯ ಮೆರವಣಿಗೆಯ ಸಂದರ್ಭದಲ್ಲಿ ಯುವಕರು ಮತ್ತಿನಲ್ಲಿ ಹಾಗೆ ಮಾಡಿದರೋ, ಕೆಲ ದುಷ್ಟರೇ ಮಾಡಿಸಿದರೋ ಅದು ಬೇರೆ ಮಾತು. ಇದನ್ನೇ ಮುಂದಿಟ್ಟುಕೊಂಡು ಮುಸ್ಲಿಂ ಯುವಕರು ಬೆಂಕಿ ಹಚ್ಚಲು ಹವಣಿಸುವುದು ಬೇಕಿರಲಿಲ್ಲ, ಯಾಕೆಂದರೆ ಇವೆಲ್ಲಾ ಕೂತು ಮಾತಾಡಿ ಪರಿಹರಿಸಬಹುದಾದ ವಿಚಾರಗಳಷ್ಟೇ.

ಸಂತಸದ ವಿಚಾರವೆಂದರೆ, ಹಿಂದೂ-ಮುಸ್ಲಿಂ ಕಡೆಯಿಂದ ಕೆಲ ಬೆದೆ ಹತ್ತಿಸಿಕೊಂಡವರು ಬೀದಿಗಿಳಿದರೇ ವಿನಃ ಮತ್ಯಾರೂ ತಲೆಕೆಡಿಸಿಕೊಳ್ಳಲಿಲ್ಲ.

ಇದು ಹುಬ್ಬಳ್ಳಿ ಮಂದಿಯ ವಿವೇಕಕ್ಕೆ ಸಾಕ್ಷಿ. ಬಹುಶಃ ಇಂಥ ಮನಸ್ಥಿತಿ ಮಾತ್ರ ದಳ್ಳುರಿಗಳಿಂದ ಹುಬ್ಬಳ್ಳಿಯನ್ನ ಬಚಾವಾಗಿಸಬಲ್ಲುದೆನ್ನಿಸುತ್ತದೆ.

ಒಂದಂತೂ ನಿಜ, ಆರೆಸ್ಸೆಸ್‌ನ ಖದೀಮರು ಹಾಗೂ ಮುಸ್ಲಿಂ ಮೂಲಭೂತವಾದಿಗಳ ನಡುವೆ ಬೆಂಕಿ ಹಚ್ಚಲು ಹಾಕ್ಯಾಟ ನಿರಂತರವಾಗಿ ಮುಂದುವರೆಯುತ್ತಿದೆ. ಸದಾ ಶಾಂತಿಯ ಮಳೆಗರೆದು ಅದನ್ನ ಆರಿಸುವ ಛಾತಿ ಹುಬ್ಬಳ್ಳಿಯ ಮನಸುಗಳಿಗಿದೆ. ಇದೇ ಸದ್ಯದ ಆಶಾದಾಯಕ ಬೆಳವಣಿಗೆ.

• ಹುಬ್ಬಳ್ಳಿಯಾಂವ



ಮಾಚಗೊಂಡನಹಳ್ಳಿ
ಅತಂತ್ರ ಸ್ಥಿತಿಯಲ್ಲಿ ಬಡ ದಲಿತ ಕುಟುಂಬಗಳು

ಚಿಕ್ಕಮಗಳೂರು ತಾಲ್ಲೂಕಿನ ಆಲ್ದೂರು ಬಳಿಯ ಮಾಚಗೊಂಡನಹಳ್ಳಿ ಎಂಬ ಕುಗ್ರಾಮದ ದಲಿತ ಕುಟುಂಬಗಳು ಕಂಗಾಲಾಗಿವೆ. ಇಲ್ಲಿನ ಗ್ರಾಮ ಪಂಚಾಯತಿಯ ಯಡವಟ್ಟು ಅಧ್ಯಕ್ಷ ಮತ್ತು ಕಾರ್ಯದರ್ಶಿ ಅಭಿವೃದ್ಧಿ ಹೆಸರಿನಲ್ಲಿ ಹಲವು ಕುಟುಂಬಗಳ ಎತ್ತಂಗಡಿಗೆ ಮಾರ್ಗಸೂಚಿ ಸಿದ್ಧಪಡಿಸಿದ್ದಾರೆ.

ಚಿಕ್ಕಮಗಳೂರಿನಿಂದ ಸುಮಾರು ಇಪ್ಪತ್ತು ಕಿ.ಮಿ. ದೂರದಲ್ಲಿರುವ ಮಾಚಗೊಂಡನಹಳ್ಳಿ ಮೂಡಿಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದೆ. ಇಲ್ಲಿನ ಸನಂ. 52ರಲ್ಲಿ 23 ದಲಿತ ಕುಟುಂಬಗಳು ಸುಮಾರು ಹದಿನೈದಿಪ್ಪತ್ತು ವರ್ಷಗಳಿಂದ ನೆಲೆಯೂರಿದ್ದಾರೆ. ಭೂ ಮಾಲೀಕರ ಜಮೀನುಗಳಲ್ಲಿ ಕೂಲಿನಾಲಿ ಮಾಡಿ ಬದುಕುತ್ತಿರುವ ಈ ಬಡ ಕುಟುಂಬಗಳ ಬದುಕು ಕಮರಿ ಹೋಗತೊಡಗಿದೆ. ಮುರುಕಲು ಗುಡಿಸಲುಗಳಲ್ಲಿ ವಾಸಿಸುತ್ತಾ ಮೂಲ ಸೌಕರ್ಯ ಮತ್ತು ನಿವೇಶನದ ಹಕ್ಕು ಪತ್ರ ಪಡೆಯುವ ದಾರಿ ದೂರವಾಗಿದೆ.

ಹದಿನೈದರಿಂದ ಇಪ್ಪತ್ತು ವರ್ಷಗಳಿಂದ ಇಲ್ಲೇ ನೆಲೆಗೊಂಡಿರುವ ಜನರಿಗೆ ನಿವೇಶನದ ಹಕ್ಕುಪತ್ರ ನೀಡಿಲ್ಲ, ಕುಡಿಯುವ ನೀರು, ರಸ್ತೆ ಚರಂಡಿ; ವಿದ್ಯುತ್ ಸೌಕರ್ಯ, ಬೀದಿ ದೀಪ ಯಾವುದನ್ನೂ ಒದಗಿಸಿಲ್ಲ. ದೂರದ ಶಾಲೆಯೊಂದರ ಬಳಿಯಿರುವ ಟ್ಯಾಂಕಿಯಿಂದ ನೀರು ತರುವ ಪರಿಸ್ಥಿತಿ ಜನರದ್ದು. ಕಳೆದ ದಶಕದಿಂದಲೂ ಪಂಚಾಯತಿಯು ಇದೇ ದಲಿತ ಕುಟುಂಬಗಳಿಂದ ನಯಾಪೈಸೆ ಬಿಡದೆ ಕಂದಾಯ ವಸೂಲಿ ಮಾಡುತ್ತಿದೆ. ಇವರಿಗೆ ಮತದಾನದ ಗುರುತಿನ ಚೀಟಿ ಮತ್ತು ಪಡಿತರ ಚೀಟಿಯನ್ನು ಮಾತ್ರ ನೀಡಲಾಗಿದೆ.

ಈ ಪಂಚಾಯತಿ ವ್ಯಾಪ್ತಿಯಲ್ಲಿ ಸರಿ ಸುಮಾರು 572 ಮಂದಿ ವಸತಿ ರಹಿತರಿದ್ದಾರೆಂದರೆ ಇಲ್ಲಿನ ಪರಿಸ್ಥಿತಿಯನ್ನು ನೀವೇ ಊಹಿಸಿ. ಈ ವರ್ಷದ ಆರಂಭದಲ್ಲಿ ಮಾಚಗೊಂಡನಹಳ್ಳಿಯ 23 ಕುಟುಂಬಗಳ ಎತ್ತಂಗಡಿಗೆ ಯತ್ನಿಸಲಾಗಿದೆ. ಅಲ್ಲಿ ಕಾಲೇಜು ಕಟ್ಟಡ ಮತ್ತಿತರ ಅಭಿವೃದ್ಧಿ ಕಾರ್ಯ ನಡೆಸುವುದಾಗಿ ನಿರ್ಣಯ ಮಾಡಿದೆ. ಈ ಹಿನ್ನೆಲೆಯಲ್ಲಿ ಚಿಕ್ಕಮಗಳೂರಿನ ವೀಣಾ ಎಂಬ ಕಡು ಭ್ರಷ್ಟ ತಹಸಿಲ್ದಾರ್ ತೋರಿದ ನಿರ್ಲಕ್ಷ್ಯದ ಪರಿಣಾಮವನ್ನು ಬಡ ಕುಟುಂಬಗಳು ಅನುಭವಿಸುವಂತಾಗಿರುವುದು ದುರಂತವೇ ಸರಿ. ಗಮನೀಯ ಅಂಶವೆಂದರೆ, ಸ.ನಂ. 167ರ ಇನ್ನೊಂದು ಬದಿಯಲ್ಲಿನ ಅನೇಕ ಪ್ರಭಾವಿಗಳಿಗೆ ಜಮೀನಿನ ಖಾತೆ ಮಾಡಿಕೊಡಲಾಗಿದೆ. ಆದರೆ ಬಡವರಿಗೆ ಖಾತೆ ಮಾಡಿಕೊಡಲು ಮಾತ್ರ ಈ ಮುತ್ಸಾಳಿರಿಗೆ ಕಾನ ಅಡ್ಡ ಬರುತ್ತದೆ.

ಈ ಪ್ರದೇಶಕ್ಕೆ ಹಿಂದಿನ ಉಸ್ತುವಾರಿ ಸಚಿವ ಕೆ.ಎಸ್. ಈ ಅಥವಾ ಬಳಿಕ ರಾಜಿನಾಮೆ ಕೆ ಹೋದ ರಾಮಚಂದ್ರ ಗೌಡರ ಬರಲಿಲ್ಲ. ಶಾಸಕ ಎಂಪಿ ಕುಮ ಸ್ವಾಮಿ ತೆಪ್ಪಗೆ ಕುಳಿತಿದ್ದಾರೆ. ಜಿ ಕಾರಿ ಚನ್ನಪ್ಪಗೌಡರಿಗೆ ಇನ್ನೂ ಮುಟ್ಟಿಲ್ಲ. ಹಿಂದಿನ ಜಿಲ್ಲಾಧಿಕಾರಿ ನಾರಾಯಣಸ್ವಾಮಿ ಎಂಬ ಮನುಷ್ಯ ಯಾವತ್ತಿಗೂ ಬಡವರ ಬೆನ್ನಿಗೆ ನಿಲ್ಲಲಿಲ್ಲ. ಅನೇಕ ಪ್ರಗ ಸಂಘಟನೆಗಳ ಧ್ವನಿಯೂ ಸದ್ಯದ ಮಟ್ಟಿಗೆ ಅಡಗಿಹೋಗಿದೆ. ಸದಸ್ಯ ಕಾಮ್ರೇಡ್ ಸಾತಿ ಸುಂದರೇಶ್ ಮಾತ್ರ ಬಡ ಕುಟುಂಬ ಬೆನ್ನಿಗೆ ನಿಂತು ಪ್ರತಿಭಟನೆಯಲ್ಲಿ ತೊಡಗಿದ್ದರು. ಈ ಕಾರಣದಿಂದ ಜ ಕೊಂಚ ನಿರಾಳರಾಗಿದ್ದನ್ನು ಬಿಟ್ಟರೆ ಅಧಿಕಾರಿಗಳ ಅಂಧ ದರ್ಬಾ ಮಿತಿಮೀರಿದೆ.

ಈ ಹಿಂದೆ ಮಾಚಗೊಂಡನಹಳ್ಳಿಯ ಬಡ ದಲಿತ ಕುಟುಂಬ ಸತ್ತಿಹಳ್ಳಿ ಗ್ರಾಮ ಪಂಚಾಯತಿ ಎದುರು ಒಂದು ತಿಂಗಳ ಕಾಲ ಧ ನಡೆಸಿದ್ದರು. ಬಳಿಕ ಜಿಲ್ಲಾಧಿಕಾರಿ ಕಚೇರಿ ಎದುರು ಅನೇಕ ಸಲ ಪ್ರತಿ ನಡೆಸಿ ಜಿಲ್ಲಾಡಳಿತದ ಗಮನ ಸೆಳೆದಿದ್ದರು. ಹಿಂದಿನ ಜಿಲ್ಲಾಧಿಕಾರಿ ನಾರಾ ಸ್ವಾಮಿ ಜನರ ಕೂಗು ಹೆಚ್ಚಾದಾಗ ಮಾರ್ಗೋಪಾಯ ಹುಡುಕಿ ಅಭಿವೃದ್ಧಿಯ ನೆಪದಲ್ಲಿ ಸನಂ. 52ರಿಂದ ಎತ್ತಂಗಡಿಯಾಗಲಿ ಸಂತ್ರಸ್ತರಿಗೆ ನಿವೇಶನವನ್ನು ಅದೇ ಗ್ರಾಮದ ಸ.ನಂ. 167ರಲ್ಲಿ ಒದಗಿ ಭರವಸೆ ನೀಡಿದ್ದರು.


ಜನರು ಇನ್ನೇನು ಎಲ್ಲಾ ಸರಿ ಹೋಯಿತು ಎಂದು ನಿಟ್ಟು ಬಿಡುವ ಹೊತ್ತಿಗೆ ಅರಣ್ಯ ಇಲಾಖೆ ಮತ್ತೆ ತಗಾದೆ ತೆಗೆದಿದೆ. ಸ.ನಂ. ಮೀಸಲು ಅರಣ್ಯ ಪ್ರದೇಶವಾಗಿದ್ದು ಜನವಸತಿಗೆ ಅವಕಾಶ ನೀ ಅಸಾಧ್ಯವೆಂದಿದೆ. ಅದಾದ ಬಳಿಕ ಸ.ನಂ. 52 ಮತ್ತು 60ರಲ್ಲಿ ಎ ಎಕರೆ ಜಾಗವನ್ನು ಹಂಚಿಕೆಗೊಳಿಸುವ ಸಂಬಂಧ ಜೂನ್ ತಿಂಗಳ ಸರ್ವೆ ನಡೆಸಲು ಬಂದಿದ್ದ ಅಧಿಕಾರಿಗಳ ತಂಡವನ್ನು ಗ್ರಾಮದ ಭದ್ರ ಹಿತಾಸಕ್ತಿಗಳು ಹಿಮ್ಮೆಟ್ಟಿಸಿದ್ದವು. ಆದರೆ ಜಿಲ್ಲಾಧಿಕಾರಿ ಸ.ನಂ. ಮತ್ತು 60ರಲ್ಲಿ ಎರಡು ಎಕರೆ ಜಾಗವನ್ನು ಮಂಜೂರು ಮಾಡಿ ಆ ಹೊರಡಿಸಿಬಿಟ್ಟರು. ಅಷ್ಟರಲ್ಲಿ ಮತ್ತೆ ಸತ್ತಿಹಳ್ಳಿ ಗ್ರಾಮ ಪಂಚಾಯತಿ ಜಿಲ್ಲಾಧಿಕಾರಿಗಳ ಈ ಆದೇಶವನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲೇ

ಸದ್ಯದ ಪರಿಸ್ಥಿತಿಯಲ್ಲಿ ಪ್ರಕರಣವನ್ನು ನ್ಯಾಯಾಲಯ ಇತ್ಯರ್ಥಗೊಳಿ ತನಕ ಮಾಚಗೊಂಡನಹಳ್ಳಿಯ ಬಡ ದಲಿತ ವರ್ಗದ ಜನರ ಬ ನಿಂತ ನೀರಾಗಲಿರುವುದು ಮಾತ್ರ ಸತ್ಯ. ಪರಿಸ್ಥಿತಿ ಹೀಗಾದರೆ ಬಡ ಗತಿಯೇನು?

• ಅಜೀಜ್ ಕಿರುಗು

2 ಮೂಲಭೂತ ಪ್ರಶ್ನೆಗಳನ್ನು ಕೇಳೋಣವೇ?

ಇಂದು ಕರ್ನಾಟಕದಲ್ಲಿ ನಡೆಯುತ್ತಿರುವುದು ಜನತಂತ್ರದ ವಿಕೃತಿಯ ಅತಿರೇಕವೇ ಇರಬಹುದು. ಆದರೆ ಇದು ನಮ್ಮ ಜನತಂತ್ರದ ಸಂಸ್ಥೆಗಳು, ಇದರ ರೀತಿ-ರಿವಾಜುಗಳು, ನೀತಿ-ನಿಯಮ-ನಿಯಮಾವಳಿಗಳು ಜನಾದೇಶವನ್ನು ಮತ್ತು ಆ ಮೂಲಕ ಜನತೆಯ ಹಿತಾಸಕ್ತಿಯನ್ನು ರಕ್ಷಿಸುವುದರಲ್ಲಿ ಮೂಲಭೂತವಾಗಿ ವಿಫಲವಾಗಿವೆ ಎಂದು ಸಾರುತ್ತಿಲ್ಲವೇ? ಎಷ್ಟೇ ಕಾನೂನುಗಳು, ಪಕ್ಷಾಂತರ ನಿಷೇಧ ಕಾಯಿದೆಗಳು ಜಾರಿಗೆ ಬಂದರೂ ದುಡ್ಡಿದ್ದವರು ಮತ್ತು ಲಾಬಿಗಳು ಓಟನ್ನೇ ಹಾಕದೇ ಹಣವನ್ನು ಚೆಲ್ಲಿ ತಮಗೆ ಬೇಕಾದ ಸರ್ಕಾರಗಳನ್ನು ತರಬಲ್ಲವು ಎಂದಾದರೆ ಇದು ಜನರಿಂದ ಜನರಿಗಾಗಿ ಇರುವ ವ್ಯವಸ್ಥೆ ಎಂಬುದಕ್ಕೇ ಅರ್ಥವಿಲ್ಲ ಎಂದಾಯಿತಲ್ಲವೇ?



ಈಗ ಕರ್ನಾಟಕ ಎದುರಿಸುತ್ತಿರುವ ಬಿಕ್ಕಟ್ಟಿಗೆ ಹಲವು ದಿಢೀರ್ ಪರಿಹಾರಗಳನ್ನು ಪಂಡಿತರು ನೀಡುತ್ತಿದ್ದಾರೆ. ಒಮ್ಮೆ ಒಂದು ಪಕ್ಷದಿಂದ ಚುನಾವಣೆ ಗೆದ್ದವರು ಐದು ವರ್ಷಗಳ ಕಾಲ ಯಾವ ಕಾರಣಕ್ಕೂ ಆ ಪಕ್ಷವನ್ನು ತೊರೆಯದಂತೆ ಪಕ್ಷಾಂತರ ನಿಷೇಧ ಕಾಯಿದೆಗೆ ತಿದ್ದುಪಡಿ ತರುವುದು ಅದರಲ್ಲಿ ಒಂದು. ಆದರೆ ಇದು ಅಧಿಕಾರಕ್ಕೆ ಬಂದ ಪಕ್ಷದ ಆಡಳಿತವನ್ನು ಸಿರಾತುಕಗೊಳಿಸಬಹುದು. ಆದರೆ ಈಗ ಪಕ್ಷಗಳ ಅಧಿಕೃತ ನೀತಿಗಳೇ ಜನವಿರೋಧಿಯಾಗಿರುವಾಗ ಇದು ಸಾಮಾನ್ಯ ಜನರ ಹಿತಾಸಕ್ತಿಯನ್ನು ಯಾವ ಕಾರಣದಿಂದಲೂ ಕಾಪಾಡುವುದಿಲ್ಲ, ಬದಲಿಗೆ ಜನವಿರೋಧಿ ಸಾಂಸ್ಥಿಕ ಸರ್ವಾಧಿಕಾರಕ್ಕೆ ದಾರಿಮಾಡಿಕೊಡುತ್ತದೆ. ಮಧ್ಯಮವರ್ಗದ ಸಿನಿಕತನದಲ್ಲಿ ಹುಟ್ಟುವ ಶಾಶ್ವತ ರಾಷ್ಟ್ರಪತಿ ಆಡಳಿತ ಇತ್ಯಾದಿಗಳು ಮತ್ತೊಂದು ಬಗೆಯವು. ಈ ಬಗೆಯ ಪರಿಹಾರಗಳು ನಮ್ಮ ಪ್ರಭುತ್ವದ ರಚನೆಯ ಬಗ್ಗೆ ಮತ್ತು ಅದರ ವರ್ಗಸ್ವಭಾವದ ಬಗ್ಗೆ ಅಸಹನೆ ಹುಟ್ಟಿಸುವಷ್ಟು ಮುಗ್ಧತೆಯಿಂದ ಕೂಡಿದೆ ಎಂದಷ್ಟೇ ಹೇಳಬಹುದು.

ಇನ್ನು ಸುಲಭವಾಗಿ ಹೇಳಬಹುದಾದ ಮತ್ತೊಂದು ಸಲಹೆ ಈ ಪಕ್ಷಗಳಿಗೆ ಚುನಾವಣೆಯಲ್ಲಿ ಜನರೇ ತಕ್ಕ ಪಾಠ ಕಲಿಸುವುದು. ಇದೊಂದು ರಾಜಮಾರ್ಗವೆಂಬುದೇನೋ ನಿಜ. ಆದರೆ ದುರಂತವೆಂದರೆ ಆ ಹಾದಿಯಲ್ಲಿ ಜನಸಾಮಾನ್ಯರು ಎಗರಲಾರದಷ್ಟು ಕಂದಕ-ಕೊರಕಲುಗಳನ್ನು ಈ ಉಳ್ಳವರ ಪ್ರಜಾತಂತ್ರ ತೋಡಿಬಿಟ್ಟಿದೆ. ಬಿಜೆಪಿ ಪ್ರಧಾನವಾಗಿ ಮತ್ತು ಇತರ ಪಕ್ಷಗಳು ಯಥಾಶಕ್ತಿ ಮಾಡಿರುವ ಅತಿ ಘೋರ ಪಾತಕವೆಂದರೆ ಈ ಚುನಾವಣೆಗಳನ್ನು ಮತ್ತು ಮತದಾರರನ್ನು ಭ್ರಷ್ಟಗೊಳಿಸಿರುವುದು ಮತ್ತು ಚುನಾವಣೆಯೆಂಬ ಅಸ್ತ್ರವನ್ನೂ ಜನರಿಂದ ಅಪಹರಿಸಿರುವುದು!


ಕಳೆದ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಪ್ರತಿ ಕ್ಷೇತ್ರಕ್ಕೆ ಏನಿಲ್ಲವೆಂದರೂ 20-30 ಕೋಟಿಯಷ್ಟು ಹಣ ಹರಿದಿದೆ. ಚುನಾವಣೆ ವೆಚ್ಚ ಇಷ್ಟು ಹೆಚ್ಚಾಗಲು ಕಾರಣ ಬಿಜೆಪಿಯೇ! ಹಣ-ಹೆಂಡ ಪ್ರತಿ ಚುನಾವಣೆಯಲ್ಲೂ ಖರ್ಚಾಗುತ್ತಿತ್ತಾದರೂ ಈ ಬಾರಿ ಪ್ರತಿ ಮತದಾರನಿಗೆ ಬಿಜೆಪಿ 2,000 ರೂ. ನೀಡಿತೆಂದು ಹೇಳಲಾಗಿದೆ. ಹೀಗೆ ಮತದಾರನನ್ನೂ ಬಿಜೆಪಿ ಭ್ರಷ್ಟಗೊಳಿಸಿದಷ್ಟು ಬೇರಾವ ಪಕ್ಷಗಳೂ ಭ್ರಷ್ಟಗೊಳಿಸಿರಲಿಲ್ಲ. ಚುನಾವಣೆಯನ್ನು ಒಂದು ಬಂಡವಾಳ ಹೂಡಿಕೆಯಾಗಿ ಪಕ್ಷಗಳೂ, ಅತಿ ಹೆಚ್ಚು ಬಿಡ್ಡುದಾರರಿಗೆ ಸ್ವಯಂ ಬಿಕರಿಯಾಗುವ ಅವಕಾಶವಾಗಿ ಮತದಾರನೂ ಪರಿಗಣಿಸಿದ ಮೇಲೆ ಚುನಾವಣೆಯು ಜನರ ಅಸ್ತ್ರವಾಗಿ ಹೇಗೆ ಉಳಿಯಲು ಸಾಧ್ಯ? ಅಂಥ ಭ್ರಷ್ಟ ತಳಹದಿಯ ಮೇಲೆ ಕಟ್ಟಲಾದ ಜನತಂತ್ರದ ಸೌಧದಲ್ಲಿ ಜನಪ್ರತಿನಿಧಿಗಳೂ ತಾನೇ ಬಿಕರಿಯಾಗದೆ ಇನ್ನೇನು?

ಇದಕ್ಕೆ ಓಟು ಮಾರಿಕೊಳ್ಳುವ ಜನರೇ ಕಾರಣ ಎಂದು ಅಂತಿಮ ಜನರ ಮೇಲೇ ಎತ್ತಿಹಾಕುವ ರಾಜಕಾರಣಿಗಳೂ, ಪಂಡಿತೋತ್ತಮರೂ ಇದ ಆದರೆ ಇದು ಅಟ್ಟದಿಂದ ಬಿದ್ದವರನ್ನು ದೊಣ್ಣೆ ತೆಗೆದುಕೊಂಡು ಬಾರಿಸಿದ ಏಕೆಂದರೆ ಒಬ್ಬ ರಾಜಕಾರಣಿಯ ಕರ್ತವ್ಯ ಕೇವಲ ಸರ್ಕಾರ ನಡೆಸುವು ಬದಲಿಗೆ ಪ್ರಜೆಗಳನ್ನು ಪ್ರಭುವಿನಂತೆ ನಡೆಸಿಕೊಳ್ಳುವುದು. ಆದರೆ ಪ್ರಜೆಯ ನಿರಂತರವಾಗಿ ಭಿಕ್ಷುಕನನ್ನಾಗಿ, ಬಡವನನ್ನಾಗಿ, ಅವಲಂಬಿತನ್ನಾಗಿ ಉಳಿಸಿರುವ ಹಿಂದೆಯೇ ಒಂದು ಪಟ್ಟಭದ್ರ ಹಿತಾಸಕ್ತಿ ಇದೆ. ಜನರ ಈ ನಿಸ್ಸಹಾ ಹತಾಶ ಪರಿಸ್ಥಿತಿಯೇ ಅವರನ್ನು ತಮ್ಮನ್ನು ತಾವೇ ಮಾರಿಕೊಳ್ಳುವ ಮಾಡುತ್ತದೆ. ಇದು ಹೀಗೇ ಇದ್ದಷ್ಟೂ ಜನರನ್ನು ಮತ್ತು ದೇ ಸಂಪನ್ಮೂಲಗಳನ್ನು ಲೂಟಿ ಮಾಡುವವರಿಗೆ ಅನುಕೂಲ.

ಆದ್ದರಿಂದಲೇ ಒಮ್ಮೆ ಜನತಂತ್ರ ವಿಧಾನ ಸೌಧ ಹೊಕ್ಕಮೇಲೆ ಜನರಿ ಜನತಂತ್ರಕ್ಕೂ ಸಂಬಂಧವೇ ಕಡಿದುಹೋಗುತ್ತದೆ. ಎಲ್ಲಿಯತನಕ ಜನತಂತ್ರ ಪ್ರಜೆಯೇ ನಿಜವಾದ ಘನತೆಯುಳ್ಳ ಪ್ರಭುವಾಗುವುದಿಲ್ಲವೋ ಅಲ್ಲಿಯವ ಯಾವ ಕಾನೂನು-ಕಾಯಿದೆಗಳೂ ಪ್ರಜಾತಂತ್ರದ ಈ ಕ್ರೂರ ಪ್ರಹಸನವ ನಿಲ್ಲಿಸಲು ಸಾಧ್ಯವಿಲ್ಲ.

ಕರ್ನಾಟಕದ ರಾಜಕೀಯ ಬೆಳವಣಿಗೆಗಳು ರಾಜಕೀಯದ ಬಗ್ಗೆ ಅ ಹುಟ್ಟಿಸುತ್ತಿರುವ ಈ ಸಂದರ್ಭದಲ್ಲಿ ಸಿನಿಕತನದಲ್ಲಿ ಕಳೆದುಹೋಗದೆ, ಕಾಸ್ಮೆ ಬದಲಾವಣೆಗಳಲ್ಲಿ ತೃಪ್ತಿಪಟ್ಟುಕೊಳ್ಳದೆ, ಈಗಲಾದರೂ ಈ ಜನತಂತ್ರ ನಿಜ ಜನಸಾಮಾನ್ಯರ ಪ್ರಜಾತಂತ್ರವೇ ಎಂಬ ಮೂಲಭೂತ ಪ್ರಶ್ನೆಗಳನ್ನು ಕೇಳೋ ಮತ್ತು ಈ ಜನತಂತ್ರ ವಾಸ್ತವದಲ್ಲಿ ಉಳ್ಳವರ ಕುತಂತ್ರವೆಂಬುದ ಅರ್ಥಮಾಡಿಕೊಂಡು ನಿಜವಾದ ಜನತಂತ್ರದ ನಿರ್ಮಾಣ ಹೇಗೆಂಬ ಹಾಕಿಕೊಳ್ಳುವ ಧೈರ್ಯ ಮಾಡೋಣ!

ನಸೆಂಬ ದುರೆಯನೇರಿ



ಸಿನಿಮಾ ಲೋಕದಲ್ಲಿ ಗಿರೀಶ್ ಕಾಸರವಳ್ಳಿಯದು . ತಮ್ಮ ಮೊದಲ ಚಿತ್ರದಿಂದಲೇ ಖ್ಯಾತಿ ಪಡೆದ ನಿಮಾ ವ್ಯಾಕರಣ'ದ ಅನ್ವಯವಾಗಿಯೇ ತಮ್ಮ ಾಪಿಸುವಿಕೆಗೆ ಹೆಸರಾದವರು. ಪುಟ್ಟಣ್ಣ ಸಿನಿಮಾವನ್ನು ಮಾಧ್ಯಮವನ್ನಾಗಿ ಮಾಡಿಕೊಂಡರೆ ಕಾಸರವಳ್ಳಿ ಅನ್ವೇಷಣಾ' ಮಾಧ್ಯಮವನ್ನಾಗಿ ಕಂಡುಕೊಂಡರು. ಮುಸ್ಲಿಂ, ದಲಿತ ಬದುಕು ಇವರ ಸಿನಿಮಾಗಳಲ್ಲಿ ಗೊಂಡಿವೆ.

'ಘಟಶ್ರದ್ಧಾ', 'ಹಸೀನಾ', 'ಗುಲಾಬಿ ಟಾಕೀಸ್', ುದುರೆಯನೇರಿ' ಸಿನಿಮಾಗಳು ಈ ಮಾತಿಗೆ ನಿದರ್ಶನ. 'ದ್ವೀಪ', 'ತಾಯಿಸಾಹೇಬ', 'ನಾಯಿ ನೆರಳು', ಸಂವೇದನೆ'ಯ ಭಿನ್ನ ಆಯಾಮವನ್ನು ಬಿಂಬಿಸಿವೆ. ಶಿ' ವ್ಯವಸ್ಥೆಯ ಕ್ರೌರ್ಯ ಕುರಿತದ್ದು. 'ಮನೆ' ಸಾಮಾಜಿಕ ಯಾಮ ಉಳ್ಳದ್ದು. 'ಕ್ರೌರ್ಯ' ಅಮಾನವೀಯತೆಯ ರೂಪಕ ಅಭಿವ್ಯಕ್ತಿ. ವಳ್ಳಿ 'ಸಿನಿಮಾ' ಅನ್ನು ಅದರ ಎಲ್ಲ ಸಾಧ್ಯತೆಗಳ ಶೋಧಕ್ಕೆ ಬಳಸಿದ್ದಾರೆ. ಷಪ ಅವರ ಸಿನಿಮಾಗಳ ಮುಖ್ಯ ಗುಣ. ಒಂದು ಶಾಟ್, ಒಂದು ಗದು, ಕಮ್ಮಿಯಾಗದು. ಆಗತ್ಯಕ್ಕಷ್ಟೇ ಪಾತ್ರ, ಮಾತು. ಕಾಸರವಳ್ಳಿಯವರ ದೋಷವೆಂದರೆ ಅವರ ಸಿನಿಮಾಗಳ 'ನೀಟ್‌ನೆಸ್' ಎಂದು ಅವರ ಸು ಹೊಟ್ಟೆಕಿಚ್ಚಿನಿಂದ ಹೇಳುತ್ತಾರೆ!

.ಸಿನಿಮಾಗಳ 'ವಸ್ತು' ಆಗಿ ಸಾಹಿತ್ಯ ಕೃತಿಗಳನ್ನು ಆರಿಸಿಕೊಳ್ಳುವುದು ವೈಶಿಷ್ಟ್ಯ. ಹಾಗಾಗಿ ಕನ್ನಡದ ಅತ್ಯುತ್ತಮ ಕತೆಗಳು, ಸಾಧಾರಣ ಗಳು ಗಿರೀಶರ ಸಿನಿಮಾಗಳ 'ಕತೆ'ಗಳಾದವು. ನವ್ಯ, ನವೋದಯ, ಬಂಡಾಯ, ಮುಸ್ಲಿಂ ಸಂವೇದನೆಗಳ ಸಾಹಿತ್ಯ ಕೃತಿಗಳು ಗಿರೀಶರ ನೆಲೆ'ಯಾಗಿವೆ. ಹಾಗಾಗಿ ಆಧುನಿಕ ಕನ್ನಡ ಸಾಹಿತ್ಯದೊಡನೆ ಗಿರೀಶ್ ಂವಾದ ಸಾಹಿತ್ಯದಂತೆ ಅವರ ಸಿನಿಮಾ ಬಿಂಬಿತವಾಗಿವೆ. ಕೆಲವು ಲ್ಲಿ ಕತೆಗೆ ಬಹುತೇಕ ನಿಷ್ಠರಾದ ಗಿರೀಶ್ ಮತ್ತೆ ಕೆಲವಕ್ಕೆ ಕೇವಲ ನ್ನೇ ಪಡೆದಿದ್ದಾರೆ.


ತಾನೇ ರಾಷ್ಟ್ರ ಪ್ರಶಸ್ತಿ ಪಡೆದ 'ಕನಸೆಂಬ ಕುದುರೆಯನೇರಿ' ಸಿನಿಮಾ ನುಗಡೋಣಿಯವರ 'ಸವಾರಿ' ಕತೆಯನ್ನು ಆಧರಿಸಿದ್ದು. ನುಗಡೋಣಿ ಅಪರೂಪದ, ಅತ್ಯುತ್ತಮ ಕತೆಗಾರ. ಹೈದರಾಬಾದ್ ಕರ್ನಾಟಕದ ಸಾಂಸ್ಕೃತಿಕ ಚಹರೆಗಳನ್ನು, ಬದುಕಿನ ಕಷ್ಟಗಳನ್ನು, ಹೋರಾಟದ ಆತ್ಯಂತಿಕವಾಗಿ ತಮ್ಮ ಕತೆಗಳಲ್ಲಿ ನೀಡಿದವರು ನುಗಡೋಣಿ. ರೂಪಣೆ, ಕಥನ ಶೈಲಿ, ಅಚ್ಚ ಕನ್ನಡ ನುಗಡೋಣಿಯವರ ಕತೆಗಳ ರ್ಕ್'. ಸಾಮಾಜಿಕ ನಂಬಿಕೆ, ಸಮುದಾಯಗಳ ಆಚರಣೆ, ಮಾನವ ಸಂಬಂಧಗಳು ಅವರ ಕತೆಗಳ ಹೂರಣ. ಜಾಗತೀಕರಣ, ಆಧುನಿಕತೆಗಳ ಪ್ರಭಾವವನ್ನು ದೇಸೀ ನೆಲೆಯಲ್ಲಿ ನೋಡಬಲ್ಲ ಶಕ್ತಿಶಾಲಿ ಕತೆಗಾರರಿವರು.

ಹೆಣದ ಗುದ್ದು ತೋಡುವ 'ಕಾಯಕ', ಸುಡುಗಾಡು ಸಿದ್ಧನ ಆರಾಧನೆ, ಅವಕಾಶವಾದೀ ರಾಜಕಾರಣ, ವಿಘಟಿತ ಕೌಟುಂಬಿಕ ಸಂಬಂಧ ಮತ್ತು ವಿಶಿಷ್ಟ ನಂಬಿಕೆ ಆಧರಿಸಿದ 'ಸವಾರಿ' ಕನ್ನಡದ ಅಪರೂಪದ ಕತೆಗಳಲ್ಲೊಂದು. ಇದರ ನಿರೂಪಣೆ ಅದೆಷ್ಟು ಮೋಹಕವಾಗಿದೆ ಎಂದು ಓದಿಯೇ ಆನಂದಿಸಬೇಕು.

ಇದನ್ನು ಆಧರಿಸಿ ಗಿರೀಶ್ ರೂಪಿಸಿದ ಸಿನಿಮಾ 'ಕನಸೆಂಬ ಕುದುರೆಯನೇರಿ'. ಗಿರೀಶ್ ತಮ್ಮ ಉಳಿದ ಸಿನಿಮಾಗೆ ಹೋಲಿಸಿದಲ್ಲಿ ಇದರಲ್ಲಿ ಭಿನ್ನ ನಿರೂಪಣಾ ಕ್ರಮ (ನಾನ್ ಲೀನಿಯರ್) ಅನುಕರಿಸಿದ್ದಾರೆ. ಗೌಡನ ಸಾವು, ಸಾವಿನ ಸುದ್ದಿಯ ಗೌಪ್ಯ, ವಜ್ರಪ್ಪನ ನಂಬಿಕೆ (ಈರ್ಯ), ಮಗನ ಅವಕಾಶವಾದಿತನ, ಕೃಷಿ ಬದುಕಿನ ಅನಾವರಣಗಳು ಸಿನಿಮಾಕ್ಕೆ ದೇಶೀಯ ಮತ್ತು ಸಮಕಾಲೀನ ಆಯಾಮ ನೀಡಿವೆ. ತಮ್ಮ ಈವರೆಗಿನ ಗ್ರಹಿಕೆಗಳಿಗೆ ಹೊಸತಾದ ಈ 'ವಸ್ತು'ವನ್ನು ಆಯ್ದುಕೊಂಡದ್ದೇ ಒಂದು ಸವಾಲು. ಗಿರೀಶರು ಅದನ್ನು ಸಂವೇದಿಸುವ ಮತ್ತು ಸಂವಹಿಸುವ ಪ್ರಯತ್ನದಲ್ಲಿ ಸಫಲರಾಗಿದ್ದಾರೆ. ದಲಿತ ಬದುಕಿನ ಕಾಠಿಣ್ಯ, ರಮ್ಯತೆಗಳನ್ನು ಸೂಕ್ಷ್ಮವಾಗಿ ದಾಖಲಿಸುವಲ್ಲಿ ಮಿಂಚಿದ್ದಾರೆ.

ವೈಜನಾಥ ಬಿರಾದಾರರ ಅದ್ಭುತ ಅಭಿನಯ, ಸ್ಫಟಿಕದಂತ ಛಾಯಾಗ್ರಹಣ, ಸಹಜ ದೃಶ್ಯಗಳು ಮತ್ತು ಭರವಸೆದಾಯಕ ಅಂತ್ಯದ ಮೂಲಕ ಸಿನಿಮಾ ನೋಡುಗನಿಗೆ ಹೊಸ ಅನುಭವವೊಂದನ್ನು ನೀಡುವಲ್ಲಿ ಸಫಲವಾಗಿದೆ. ಅಲೌಕಿಕವಾದ ಆಚರಣೆ, ಮೂಢನಂಬಿಕೆ ಎನಿಸುವ 'ನಂಬಿಕೆ'ಯ ಎಲ್ಲ ಆಯಾಮ ಬಿಂಬಿತವಾಗುವ ಮೂಲಕ ಈ ಸಿನಿಮಾ ಕನ್ನಡ ಸಿನಿಮಾಗಳಲ್ಲಿಯೇ ಅಪರೂಪದ್ದು ಎನಿಸುತ್ತದೆ. ಉತ್ತರ ಕರ್ನಾಟಕದ ಸಾಂಸ್ಕೃತಿಕ ಚಹರೆಗಳು ಸಿನಿಮಾದಲ್ಲಿಯೂ ಅಚ್ಚೊತ್ತಿವೆ. ಹಿನ್ನೆಲೆ ಸಂಗೀತ ಗಮನಾರ್ಹವಾಗಿದೆ.

'ಚೋಮನದುಡಿ'ಯ 'ವಾಸುದೇವರಾವ್'ಗಾಗಿಯೇ ಚೋಮನ 'ಪಾತ್ರ' ಸೃಷ್ಟಿಯಾಯಿತೇನೋ ಎಂಬಂತೆ, ಇಲ್ಲಿನ ಈರ್ಯ ಪಾತ್ರದಲ್ಲಿ ಬಿರಾದಾರ ಕೂಡ ಆ ಪಾತ್ರದಲ್ಲಿ ತಲ್ಲೀನರಾಗಿ ನಟಿಸಿದ್ದಾರೆ. ಹಾಗೆ ನೋಡಿದರೆ ಅವರು ನಟಿಸಿಯೇ ಇಲ್ಲ ಎನಿಸುವಷ್ಟು ಸಹಜವಾಗಿದೆ ಅವರ ಅಭಿನಯ. ಅದಕ್ಕೆ ಅವರಿಗೆ ರಾಷ್ಟ್ರ ಪ್ರಶಸ್ತಿ ಸಿಗಲೇ ಬೇಕಿತ್ತು!



ಗಿರೀಶರ ಸಿನಿಮಾಗಳು ತೆರೆ ಕಾಣುವುದಿಲ್ಲ, ಜನ ನೋಡುವುದಿಲ್ಲ, ಮಾರುಕಟ್ಟೆ ದೃಷ್ಟಿಯಿಂದ ಭಿನ್ನ ಎಂಬ ಮಾತಿದೆ. ಗಿರೀಶರು ಅದಕ್ಕೆ ಹೊಣೆಯಲ್ಲ, ಭಿನ್ನ ವಸ್ತುವಿನ ಆಯ್ಕೆ, ಅವನ್ನು ಸಿನಿಮಾ ಮಾಧ್ಯಮಕ್ಕೆ ಅಳವಡಿಸುವುದು, ಆ ಮಾಧ್ಯಮದ ಸಾಧ್ಯತೆಗಳನ್ನು ಅನ್ವೇಷಿಸುವುದು ನಿರ್ದೇಶಕನ ಹೊಣೆ. ಅದನ್ನು ಪೂರ್ಣವಾಗಿ ಗಿರೀಶ್ ಸಾಧಿಸಿದ್ದಾರೆ. ಇಲ್ಲಿ ನೋಡುಗರ ಅಭಿರುಚಿಯೂ ಮುಖ್ಯ.


'ಉದ್ದಿಮೆ'ಯಾಗಿರುವ ಸಿನಿಮಾವನ್ನು ನಷ್ಟ ಮಾಡಿಕೊಳ್ಳಲು ಯಾರೂ ಒಪ್ಪರು. ಗಿರೀಶರ ಸಿನಿಮಾಗಳು ಮಿತ 'ಬಜೆಟ್'ನವು. ಅನಗತ್ಯ ವೆಚ್ಚ ಕಾಣದು. ಅಲ್ಲದೆ ಲಾಭ ಮತ್ತು ಮಾರುಕಟ್ಟೆ ಪ್ರಯತ್ನ ಎನ್ನುವುದಕ್ಕಿಂತಲೂ ಸೃಜನಶೀಲತೆಯ ಕಲಾತ್ಮಕ ಯಶಸ್ಸು ಮತ್ತು ಅಭಿವ್ಯಕ್ತಿ ವಿಶೇಷತೆಯಾಗಿ ಗಿರೀಶರ ಸಿನಿಮಾಗಳನ್ನು ಗಮನಿಸಬೇಕು. ಕನ್ನಡ ಸಂಸ್ಕೃತಿಯ ವಿಭಿನ್ನ ಮಜಲುಗಳನ್ನು ಗಿರೀಶ್ ತಮ್ಮ ಸಿನಿಮಾಗಳಲ್ಲಿ ಅನಾವರಣ ಮಾಡಿರುವುದು ಕಡಿಮೆ ಸಾಧನೆಯೇನಲ್ಲ. ಸಿನಿಮಾ ಮಾಧ್ಯಮದ ಮೇಲಿರುವ ಗಿರೀಶರ ಪ್ರೌಢಿಮೆ ಅಸಮಾನ್ಯವಾದುದು. ಅದೇ ಕಾರಣಕ್ಕೆ ಅವರು ಅಷ್ಟೊಂದು ರಾಷ್ಟ್ರ ಪ್ರಶಸ್ತಿ ಪಡೆದಿರುವುದು! ವಸ್ತುವಿನ ಆಯ್ಕೆ, ಅದನ್ನು ತೆರೆಗೆ ಅಳವಡಿಸುವಲ್ಲಿ, ಸೂಕ್ತ ತಂತ್ರಜ್ಞಾನದ ಮೂಲಕ ಅದನ್ನು ಮಂಡಿಸುವಲ್ಲಿ ಗಿರೀಶರದು ಪಳಗಿದ ಕೈ.

• ಡಾ. ಎಸ್. ಪ್ರಸಾದಸ್ವಾಮಿ

ತಾಯಿಯ ಬಂಗಾರ ಅಡವಿಟ್ಟು ತಾಯ್ನೆಲಕ್ಕೆ ಚಿನ್ನ ತಂದವಳು

ವರ ಬದುಕು ಕ್ಷಣಕ್ಷಣವೂ ಕಾಡುವ ಬಡತನ, ೊಂದಿಗೆ ಬಡಿದಾಡುವುದರಲ್ಲೇ ಕಳೆದುಹೋಗಿ . ಇದರ ತೆಕ್ಕೆಗೆ ಸಿಕ್ಕವರು ಅದೆಷ್ಟೇ ಪ್ರತಿಭಾವಂತ ಕನಸು-ಛಲಗಳಿದ್ದರೂ ಅವೆಲ್ಲ ಬಡತನದೊಂದಿ ದಲ್ಲೇ ಕರಗಿಹೋಗುತ್ತವೆ. ಮತ್ತೆ ಕೆಲವರಿರುತ್ತಾರೆ, ಬೆನ್ನಿಗಂಟಿದ ಬಡತನದೊಂದಿಗೆ ಕಾದಾಡುತ್ತಲೇ ಂಡಗುರಿ ತಲುಪಿಬಿಡಬಲ್ಲರು. ಸದ್ಯ ಕಾಮನ್ವೆಲ್ತ್‌ನ ಟದಲ್ಲಿ ಚಿನ್ನ ಗೆದ್ದ ಕನ್ನಡದ ಹುಡುಗಿ ಅಶ್ವಿನಿ ಶೆಟ್ಟಿ ಎರಡನೇ ಗುಂಪಿಗೆ ಸೇರಿದಾಕೆ.

ದ ಹುಡುಗಿ ಅಶ್ವಿನಿಯೀಗ ಕರ್ನಾಟಕದ ಕುವರಿ. ಆಕೆಯ ಮುಖದಲ್ಲೂ ಅಂತಹು ಮಂದಹಾಸವಿದೆ. ಆದರೆ ಅದರ ಹಿಂದೆ ನೋವು-ಹತಾಶೆಗಳ ಕರಿನೆರಳ ಮೆರವಣಿಗೆಯೇ ುದು ಕಟುಸತ್ಯ. ಕರ್ನಾಟಕದ ಕುಂದಾಪುರದಿಂದ ನ ಚಿನ್ನದ ಪದಕ ಗೆಲ್ಲುವವರೆಗಿನ ಬದುಕಿನ ಹಾದಿ ಅಕ್ಷರಶಃ ಳ್ಳುಗಳಿಂದ ಕಿಕ್ಕಿರಿದುದಾಗಿದೆ.



ಉಡುಪಿ ಜಿಲ್ಲೆ ಕುಂದಾಪುರ ಬನ್ನಾಡಿ ಗ್ರಾಮದ ಬಡ ರೈತಾಪಿ ಳ ಮಗಳು. ಈಕೆಯ ತಂದೆ ಶೆಟ್ಟಿ ಅಂಗೈ ಅಗಲದ ಭೂಮಿ ಕೃಷಿ ಮಾಡುತ್ತಾ ಕುಟುಂಬ ನಿರ್ವಹಣೆಗೆ ುತ್ತಿರುವ ಬಡರೈತ. ತನ್ನ ಮಗಳ ಕ್ರೀಡಾ ಕೆಗಳಿಗೆ ಹಣ ನೀಡುವುದಿರಲಿ, ಆಕೆಯ ಓದಿಗೂ ಾಗಿ ಹಣ ಹೊಂದಿಸಲಾಗದ ಪಡಿಪಾಟಲು ಶೆಟ್ಟಿಯವರದ್ದು.

ಕುಟುಂಬದಿಂದ ಬಂದ ಅಶ್ವಿನಿಗೆ ಶಾಲಾದಿನ ಕ್ರೀಡೆಯಲ್ಲಿ ವಿಪರೀತ ಆಸಕ್ತಿ. ಆದರೆ ಕಾವ್ಯ ಆರಂಭದಲ್ಲೇ ಅಡ್ಡಬಂದು ಮನೆಯ ೀಯಿಸುವ ಭಾರ ವಹಿಸಿಕೊಳ್ಳಬೇಕಾಯ್ತು. ಸಾಧಿಸುವ ಪ್ರಾಮಾಣಿಕ ಛಲ ಎಂಥಾ ಲ್ಲೂ ಸುಮ್ಮನಿರಗೊಡುವುದಿಲ್ಲ. ಅದರಂತೆಯೇ ುಗಿ ಹಸುಗಳನ್ನು ಅಟ್ಟಿಸಿಕೊಂಡು ಓಡುತ್ತಲೇ ತನ್ನ ಕನಸಿಗೊಂದು ತೀವ್ರತೆ ತಂದುಕೊಳ್ಳತೊಡಗಿದಳು. ಕೊನೆಗೆ ತನ್ನಿಷ್ಟದ ರಿಲೇಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಳು.

ಅಶ್ವಿನಿಗೆ ಆಟಕ್ಕೆ ಬೇಕಾದ ಎಲ್ಲವೂ ಇದ್ದವು. ಆದರೆ ಆ ಹಾದಿಯಲ್ಲಿ ಮುಂದುವರೆಯಲು ಬೇಕಾದ ಕನಿಷ್ಠ ಸವಲತ್ತುಗಳಿಗೂ ಪಡಿಪಾಟಲುಗಳೇ ಎದುರಾಗುತ್ತಿತ್ತು. ಹೇಳಿಕೇಳಿ ನಮ್ಮ ನೆಲದಲ್ಲಿ ಅಥ್ಲೀಟ್‌ಗಳಿಗೆ ಅಂಥಾ ಪ್ರೋತ್ಸಾಹವಾಗಲಿ, ನೆರವುಗಳಾಗಲೀ ಸಿಗುವುದಿಲ್ಲ. ಕ್ರಿಕೆಟ್, ಟೆನ್ನಿಸ್ ಆಟಗಾರರಿಗೆ ಸಿಗಬಹುದಾದ ಕಾಲುಭಾಗ ಆಸರೆಯೂ ಅಥ್ಲೀಟ್‌ಗಳಿಗೆ ಸಿಗುವುದಿಲ್ಲ. ಇಂಥಾ ಸ್ಥಿತಿಗೆ ಸಿಕ್ಕು ಕಂಗಾಲಾದ ಅಶ್ವಿನಿ ತನ್ನನ್ನು ತಾನು ನಂಬಿದಳು. ಛಲದ ಹಾದಿಯಿಂದ ಹೆಜ್ಜೆ ಕದಲಿಸದೆ ಮುಂದುವರೆದಳು.


ಬಡತನದ ಕ್ರೂರತ್ವ ಅದೆಂಥದ್ದಿರುತ್ತದೋ ನೋಡಿ, ಈ ಹುಡುಗಿ ರಾಷ್ಟ್ರಮಟ್ಟದ ಕ್ರೀಡಾಕೂಟಗಳಿಗೆ ಆಯ್ಕೆಗೊಂಡಾಗ ಹೆತ್ತವರಿರಲಿ, ಖುದ್ದು ಆಕೆಯೇ ಸಂಭ್ರಮಿಸುವಂಥ ಸ್ಥಿತಿಯಲ್ಲಿರಲಿಲ್ಲ. ಯಾಕೆಂದರೆ ಒಂದು ಜೊತೆ ಶೂ ಕೊಳ್ಳಲೂ ತತ್ವಾರಪಡುವಂತಹ ದುಃಸ್ಥಿತಿಯಿತ್ತು. ಇನ್ನು ಪ್ರಯಾಣ ಹಾಗೂ ತರಬೇತಿ ವೆಚ್ಚಕ್ಕಾಗಿ ಎಲ್ಲಿಂದ ಹಣ ಹೊಂದಿಸಲಾದೀತು? ಮಗಳ ಪರಿಸ್ಥಿತಿ ಕಂಡ ತಾಯಿ ತನ್ನ ಚಿನ್ನದ ಬಳೆಗಳನ್ನೇ ಅಡ ಇಟ್ಟು ಸಹಾಯ ಮಾಡಿದ್ದೂ ಇದೆ.

ಇನ್ನು ತಂದೆ ಚಿದಂಬರ ಶೆಟ್ಟಿಯವರಿಗೋ, ಮಗಳ ಬಗ್ಗೆ ಹೆಮ್ಮೆ, ಆಕೆಯ ಸಾಧನೆಯ ಹಾದಿಯಲ್ಲಿ ಆಸರೆಯಾಗಿ ನಿಲ್ಲಬೇಕೆಂಬ ಹಂಬಲ-ಎಲ್ಲವೂ ಇತ್ತು. ಆದರೆ ವರ್ಷದ ಬೆಳೆಯನ್ನೇ ನಂಬಿ ಬದುಕುವ ಅವರಿಗೆ ಯಾವುದಕ್ಕೂ ಹಣ ಹೊಂದಿಸಲಾಗುತ್ತಿರಲಿಲ್ಲ. ಆದರೂ ಸಹ ಬದುಕಿಗೆ ಆಸರೆಯಾಗಿದ್ದ ಒಂದಷ್ಟು ಗದ್ದೆಯನ್ನೇ ಗಿರವಿ ಇಟ್ಟು ಅಶ್ವಿನಿಗೆ ಆಸರೆಯಾಗಿದ್ದರು. ಇದೆಲ್ಲದರ ನಡುವೆ ಮನಸ್ಸಿಲ್ಲದ ಮನಸ್ಸಿನಿಂದಲೇ ಬೆಂಗಳೂರಿನ ಕ್ರೀಡಾ ಹಾಸ್ಟೆಲ್‌ಗೆ ಮಗಳನ್ನು ಸೇರಿಸಿ ಆಕೆಯ ಹಂಬಲಿಕೆಗೆ ಒತ್ತಾಸೆಯಾದರು.

ಹೀಗೆ ಅಶ್ವಿನಿ ನಡೆದುಬಂದ ಹಾದಿಯ ತುಂಬಾ ಗೆಲುವಿನ ಸಂಭ್ರಮವನ್ನೂ ಮರೆಯಾಗಿಸುವಂಥ ನೋವುಗಳೇ ತುಂಬಿವೆ. ಆಕೆಯೇ ಮಾಧ್ಯಮಗಳ ಮುಂದೆ ಹೇಳಿಕೊಂಡ ಪ್ರಕಾರ, ಮೊದಮೊದಲು ಈ ಕ್ರೀಡೆಯ ಸಹವಾಸವೇ ಬೇಡವೆನಿಸುತ್ತಿತ್ತಂತೆ. ಆದರೆ ಗೆಲ್ಲುವ ಕನವರಿಕೆ ಬಿಡಬೇಕಲ್ಲಾ.. ತನ್ನ ಕಷ್ಟ ಇನ್ನು ಮುಂದೆ ಬರುವ ಕ್ರೀಡಾಳುಗಳಿಗೆ ಬಾರದಿರಲೆಂಬ ಅಶ್ವಿನಿಯ ಹಾರೈಕೆ ಇದೆಯಲ್ಲಾ? ಅದು ಆಕೆ ಪಟ್ಟ ಕಷ್ಟಕೋಟಲೆಗಳನ್ನು ಸಾರಿ ಹೇಳುತ್ತದೆ.

ಆದರೀಗ ಚಿತ್ರಣವೇ ಬದಲಾಗಿದೆ. ಆಕೆ ಉಂಡ ಕಷ್ಟ, ತಾಯಿತಂದೆ ಅಡವಿಟ್ಟ ಬಂಗಾರ-ಭೂಮಿಗಳೆಲ್ಲ ಗೆಲುವಾಗಿ ಕಂಗೊಳಿಸಿವೆ. ಕರ್ನಾಟಕದ ಮೂಲೆಯ ಕುಂದಾಪುರದಿಂದೆದ್ದು ಬಂದ ಹುಡುಗಿಯೀಗ ಕರ್ನಾಟಕದ ಹೆಮ್ಮೆಯ ಕುವರಿ. ರಾಜಕೀಯ ರಾಡಿಯಲ್ಲೇ ಮುಳುಗಿದ್ದ ಯಡಿಯೂರಪ್ಪ ಕೂಡಾ ಈಕೆಗೆ ಇನಾಮು ಘೋಷಿಸಿದ್ದಾರೆ. ಆದರೆ ಅದರ ಮೊತ್ತದಿಂದಲೇ ಅಶ್ವಿನಿಯ ಕಣ್ಣಮುಂದಿರುವ

ಹೆತ್ತವರೊಂದಿಗೆ ಅಶ್ವಿನಿ....



ಕನಸುಗಳು ಅರಳಲು ಸಾಧ್ಯವಿಲ್ಲ. ಈ ಬಗ್ಗೆ ಸಂಬಂಧಿಸಿದವರು ಗಮನ ಹರಿಸುವಂತಾಗಲಿ.

ಒಂದು ಗೆಲುವನ್ನು ಸಂಭ್ರಮಿಸುತ್ತಲೇ ಏಷ್ಯನ್ ಕ್ರೀಡಾಕೂಟದಲ್ಲಿ ಸ್ವರ್ಣ ಗೆದ್ದು ದೇಶಕ್ಕೆ ಕೀರ್ತಿ ತರುವ ಕನಸು ಅಶ್ವಿನಿಯದ್ದು. ಬಡತನದ ಬೇಗೆಯಲ್ಲಿ ಬೆಂದಿರುವ ಆಕೆ ಮುಂದಿನ ಹಾದಿಯನ್ನಾದರೂ ಸುಗಮವಾಗಿ ಕ್ರಮಿಸುವಂತೆ ನೋಡಿಕೊಳ್ಳುವ ಜವಾಬ್ದಾರಿ ಕ್ರೀಡಾ ಇಲಾಖೆಯ ಮೇಲಿದೆ. ●

ಛಾಯಾರ ಪುಟಾಣಿ ಕೆಂಪು ಶೂ
ಪ್ರೇಮ, ಅಚ್ಚರಿ...ಸಾವು, ವಿಷಾದ...

ಪುಸ್ತಕ ವಿಮರ್ಶೆ

'ಪುಟಾಣಿ ಕೆಂಪು ಶೂ' ಈಗಾಗಲೇ ಕನ್ನಡ ಕಾವ್ಯಲೋಕದಲ್ಲಿ ಛಾಪು ಮೂಡಿಸಿರುವ ಛಾಯಾ ಭಗವತಿಯವರ ಚೊಚ್ಚಲ ಕವನ ಸಂಕಲನ. ಇವರಿಂದ 1993ರಿಂದ 2008ರವರೆಗೆ ಬರೆಸಿಕೊಂಡ 19 ಕವಿತೆಗಳು ಇಲ್ಲಿವೆ. ಪ್ರೇಮ ಮತ್ತು ಅಚ್ಚರಿ ಛಾಯಾರ ಕಾವ್ಯದ ಮೂಲ ಗುಣವಾದರೂ ವಿಷಾದ ಮತ್ತು ಸಾವು ಅದರ ನೆರಳಿನಂತೆ ಕಾಡುವುದು ಸುಳ್ಳಲ್ಲ.

ಛಾಯಾರ ಕವನಗಳಲ್ಲಿ 'ಸಂಗಾತಿ' ಅಥವಾ 'ಜೊತೆಗಾರ' ಪದೇ ಪದೇ ಬರುತ್ತಾನೆ, ಮತ್ತು ತನ್ನ ಹರಿತ ಕಣ್ಣುಗಳಿಂದ ಕವಿಯ ಭಾವಲಹರಿಯನ್ನು ತೀಕ್ಷ್ಣವಾಗಿ ಇರಿಯುತ್ತಾನೆ. ಆದರೆ ಅವನು ನಿರ್ವಹಿಸುವ ಪಾತ್ರ ಮಾತ್ರ ಕವಿತೆಯಿಂದ ಕವಿತೆಗೆ ಬೇರೆಯಾಗುತ್ತಲೇ ನಡೆಯುತ್ತದೆ. 'ಅಪರೂಪಕ್ಕೊಮ್ಮೆ', 'ಭೂಮಿ ಬಾಯಾರಿಕೆಗೆ' ಮತ್ತು 'ಪ್ರೀತಿ ದೀಪಾವಳಿ' ಕವಿತೆಗಳು ಒಬ್ಬ ಮುಗ್ಧ ಹೆಣ್ಣಿನ ಸಂಗಾತಿಯ ಕುರಿತಾದ ಕಲ್ಪನೆಗಳ ಸಾಕ್ಷಾತ್ಕಾರ ಮಾಡಿಸುತ್ತವೆ. ಈ ಮೂರೂ ಕವನಗಳಿಗೂ ಭಾವಗೀತೆಯ ಲಯವಿದೆ.

"ನಮ್ಮ ಮನೆಯಂಗಳದ ತುಳಸಿ ಕಸ್ತೂರಿಗಳು
ಕಂಪು ಚೆಲ್ಲಿವೆ ಸುತ್ತ ರಂಗವಲ್ಲಿ
ಬಾಲಸೂರ್ಯನ ಹೊನ್ನ ಕಿರಣಗಳ ತಾರುಣ್ಯ
ತುಳುಕಿಹುದು ನೀ ಬರುವ ದಾರಿಯಲ್ಲಿ"
(ಪ್ರೀತಿ ದೀಪಾವಳಿ)

ಇಲ್ಲಿ ಭೂಮಿ ಮಳೆಯ ಹನಿಗಾಗಿ ಕಾದಂತೆ ಹೆಣ್ಣು ಇನಿಯನ ಸ್ನೇಹಸಿಂಚನಕ್ಕಾಗಿ ಕಾಯುತ್ತಾಳೆ. ಇನಿಯನ ಮನೆಯ ಅಂಗಳದ ರಂಗೋಲಿಯ ಗಂಟುಗಳಲ್ಲಿ, ಚಿತ್ರ ಚಿತ್ತಾರಗಳಲ್ಲಿ ತನ್ನನ್ನು ಕಾಣಲು ಹವಣಿಸುತ್ತಾಳೆ.

ಛಾಯಾ ಅವರು ತುಂಬ ಕಡೆ ಇನಿಯನ ಬರುವಿಕೆಯನ್ನು ಮೊದಲ ಮಳೆಗೆ ಹೋಲಿಸುತ್ತಾರೆ. ಮೊದಲಮಳೆ ಬಂದಾಗ ನೆಲವೆಲ್ಲ ತಂಪಾಗಿ ಹುಡಿಮಣ್ಣಿನ ಸುಗಂಧ ಹರಡಿದಂತೆ, ಅಪರೂಪಕ್ಕೊಮ್ಮೆ ಗೆಳೆಯ ಬಂದಾಗ ಎದೆಯ ಕಳವಳವೆಲ್ಲ ಕರಗುವುದನ್ನು, ದೇವರೆದುರಿನ ದೀಪ ಕುಡಿ ಚಾಚಿದಂತೆಲ್ಲ ಬಳುಬಳುಕಿ ಗುಡಿಯನ್ನೆಲ್ಲ ಬೆಳಗುವುದನ್ನು ಹೆರಳು ಬಿಡಿಸಿದಷ್ಟೇ ನಾಜೂಕಾಗಿ ಹೇಳುತ್ತಾರೆ.

'ವಿಪರ್ಯಾಸ' ಮತ್ತು 'ಈಗೇಕೆ ಹೀಗೆ..?' ಕವನಗಳಲ್ಲಿ ಮದುವೆಯ ಮುಂಚಿನ ಮತ್ತು ನಂತರದ ಸಂಗಾತಿಯ ವಾಸ್ತವ ಚಿತ್ರಗಳಿವೆ. ತನ್ನ ಆಯ್ಕೆಯನ್ನೇ ಕೇಳದೇ ಸೀರೆಯನ್ನು ಆಯುವ ಜೊತೆಗಾರನ ನೆರಳಿನಾಚೆ ಕವಿಗೆ, ಬಾಲ್ಯದಲ್ಲಿ ಎಂದೋ ನೋಡಿದ್ದ ಉಡಲು ಸೀರೆಯಿಲ್ಲವೆಂದು ಎದೆಯೊಡೆದೇ ಹುಚ್ಚು ಹತ್ತಿ ಬತ್ತಲೆ ತಿರುಗಿ ಕಡೆಗೆ ಸಾವನ್ನೇ ಸುತ್ತಿಕೊಂಡು ಮಲಗಿದ್ದ ಹರೆಯದ ಹುಡುಗಿ ನೆನಪಾಗುತ್ತಾಳೆ. ಹೆಣ್ಣು ನೋಡಲು ಬಂದಾಗ 'ನಿನ್ನ ಮುಖದಲ್ಲಿ ಕಳೆದುಹೋದ ಗೆಳತಿಯ ನಗೆಯ ನೆರಳಿದೆ' ಎಂದು ಮೆಚ್ಚಿಕೊಂಡ ಹುಡುಗನನ್ನು ಕವಿ ಅಚ್ಚರಿಯಿಂದ ನೋಡುತ್ತಾರೆ. 'ಇವರೆಲ್ಲ ಈಗೇಕೆ ಹೀಗೆ? ಗುರುತೇ ಸಿಗದ ಹಾಗೆ' ಎನ್ನುವಾಗ ಆ 'ಗುರುತಿ'ನೊಂದಿಗೆ ಬೆಸೆದುಕೊಂಡಿರುವ ಜಟಿಲ ತಂತುಗಳು ಕವಿಗೆ ಖೇದವನ್ನುಂಟು ಮಾಡುತ್ತವೆ. ಛಾಯಾರ ಕವನಗಳಲ್ಲಿ ವಚನಗಳ ಛಾಯೆಯನ್ನೂ ಕಾಣಬಹುದು.

"ಆಡುವ ಮಾತೆಲ್ಲ ನೆತ್ತಿಯ ಮೇಲೆ
ಮೊಳೆ ಜಡಿದಂತೆ
ಇಂಗಳದ ಗುಡಿ ಲೇಸು ಅನಿಸುವಂತೆ
ಮಾಡುವ ಹಂಗಿನರಮನೆ."
(ಈಗೇಕೆ ಹೀಗೆ)

'ಬಯಕೆ' ಮತ್ತು 'ಸತ್ತವರು ನೆನಪಾಗುತ್ತಾರೆ' ಕವನಗಳಲ್ಲಿ ಸಾವು ಆಳವಾಗಿ ಬೇರುಬಿಟ್ಟಿದೆ.

"ಅವನ ಮೈ ಮನಸಿನ ಬಿಸುಪಿನ ಸೊಗಸಿನೊಳು
ಕರಗಿ ಸಮರಸವಾಗಬೇಕು" ಎನ್ನುತ್ತಲೇ
"ಓ ಸಾವೇ
ಈ ಪುಟ್ಟ ಬದುಕಿನ
ಮನೆಯ ಬಾಗಿಲನು ತುಸುವೇ
ತಡಮಾಡಿ ತಟ್ಟಲಾರೆಯಾ?"
(ಬಯಕೆ)

ಎನ್ನುತ್ತ ಸಾವಿನ ತೀಕ್ಷ್ಣತೆಯ ಕಟುವಾಸ್ತವಕ್ಕೆ ಮುಖವಾಗುತ್ತಾರೆ.

'ಕವಯಿತ್ರಿ'ಯಲ್ಲಿ ಕವಿ ಇನಿಯನ ಬದುಕಿನ ಗೀತೆಯ ನುಡಿಗಳಾಗಬೇಕು, ಕಡೆಯ ಪಕ್ಷ ಪಲ್ಲವಿಯಾದರೂ ಆಗಬೇಕೆಂದು ಬಯಸುತ್ತಾರೆ. ಇನಿಯನ ಪ್ರೀತಿಯ ಮುನ್ನುಡಿಗಾಗಿ ಸಸ್ಮಾನದ ಮಧ್ಯದಿಂದಾದರೂ ಎದ್ದು ಬಂದೇನು ಎಂದು ಪ್ರಾಮಾಣಿಕವಾಗಿ ಹೇಳುತ್ತಾರೆ.



ಪುಟಾಣಿ ಕೆಂಪು ಶೂ
ಲೇ: ಛಾಯಾ ಭಗವತಿ
ಪುಟ: 56, ಬೆಲೆ : 30 ರೂ.
ಪ್ರ: ಲೋಹಿಯಾ ಪ್ರಕಾಶನ, ಬಳ್ಳಾರಿ

ಛಾಯಾರ ಕವನಗಳು ಸಂಗಾತಿಯ ಹೊರತಾಗಿ ಇನ್ನೆರಡು ತಂತಿಗಳನ್ನೂ ಮೀಟುತ್ತವೆ. ಅವೆಂದರೆ 'ತಾಯಿ' ಮತ್ತು 'ಮಗು'. ಅವರ 'ಅವಳು' . ಕವಿತೆಯಲ್ಲಿ ಮೈತುಂಬ ಬಯಕೆಗಳ ಅರಿಷಿಣ ಬಳಿದುಕೊಂಡು, ಹೃದಯದ ತುಂಬ ಹೊಸತನದ ಹಸಿವು ಕಟ್ಟಿಕೊಂಡು ಗಂಡನ ಮನೆಸೇರಿದ ಅಮ್ಮ ಕತ್ತಲೆಯ ಚಾದರ ಹೊದ್ದು ಬಿದ್ದಲ್ಲೇ ಮುದುಕನಂತೆ ಬಿದ್ದುಕೊಂಡಂತಿದ್ದ ಮನೆಯ ಮೂಲೆಮೂಲೆಯಲ್ಲೂ ಜಡ್ಡಿನ ಜೇಡ ಕೊಡವಿ ಸಡಗರದ ದೀಪ ಮುಡಿಸುತ್ತಾಳೆ, ತನ್ನ ನಗೆಯ ಬೆಳಕಲ್ಲಿ ಮನೆಯೆಲ್ಲ ಮುಗುಳುನಗುವಂತೆ ಮಾಡುತ್ತಾಳೆ.

"ಕಂಗಳಿವು ಬೆಳಕಿರದೇ ಇಂಗಿ ಹೋಗುವ
ಮುನ್ನ
ಒಡಲಿನಿತು ಸೆಲೆಯಿರದೇ ಬತ್ತಿಹೋಗುವ ಮುನ್ನ
ಕರುಳ ಕುಡಿಯಾಗೆನ್ನ ಬಾ ಅಮ್ಮಾ"
(ಬಾ ಅಮ್ಮಾ)

ಎನ್ನುತ್ತ ತಾಯಿಗೂ ಮತ್ತು ತನ್ನ ಮಗುವಿಗೂ ಕೊಂಡಿಯಾಗುತ್ತಾರೆ. ಹಾಗೆಯೇ 'ನನ್ನ ಮಗು' ಕವಿತೆ ಅಪ್ಪಟ ತಾಯಿಯೊಬ್ಬಳ ಉತ್ಕಟ ಲಾಲಿಹಾಡಿನಷ್ಟೇ ಸಹಜವಾಗಿದೆ, ಸೊಗಸಾಗಿದೆ.

ಇನ್ನು 'ಕಲ್ಬುರ್ಗಿಯ ಸಿಟಿ ಬಸ್ಸುಗಳು', 'ಕಿಟಕಿಯ ಪರದೆ' ಮತ್ತು 'ಪುಟಾಣಿ ಕೆಂಪು ಶೂ' ಭಿನ್ನ ಶೈಲಿಯ ಕವನಗಳು. 'ಕಲ್ಬುರ್ಗಿಯ ಸಿಟಿ ಬಸ್ಸುಗಳು' ಕವಿತೆಯಲ್ಲಿ ಬಸ್ಸು ಜೀವಂತಿಕೆಯ ಪ್ರತೀಕವಾಗಿದೆ. ಅಲ್ಲದೇ ಕಲ್ಬುರ್ಗಿಯ ನೆಲದ ಭಾಷೆಯೂ ಕವನದಲ್ಲಿ ಹಾಸುಹೊಕ್ಕಾಗಿದೆ. 'ಕಿಟಕಿಯ ಪರದೆ'ಯ 'ಸರಿಸಿದಾಗೊಂದು ಪ್ರಪಂಚ ಮುಚ್ಚಿದಾಗೊಂದು ಬದುಕು' ಉಪಮೆ ಹಲವು ಅರ್ಥಗಳನ್ನು ಸೂಸುತ್ತದೆ. ಹಾಗೆಯೇ ಅವರ 'ಪುಟಾಣಿ ಕೆಂಪು ಶೂ' ಕವಿತೆಯಲ್ಲಿ ಒಂದು ಶೂ ಕಳೆದುಹೋದಾಗ ಇನ್ನೊಂದು ಶೂ ತನ್ನ ಜೊತೆಗಾರನ ನೆನೆಯುತ್ತ ಕಪಾಟಿನಲ್ಲಿ ಭದ್ರವಾಗಿ ಕೂತಿರುವ ಚಿತ್ರ ಮನಮುಟ್ಟುತ್ತದೆ, ನಮ್ಮ ಮನಸ್ಸಿನಲ್ಲೇ ಬೆಳೆಯುತ್ತದೆ, ನಮ್ಮನ್ನೂ ಬೆಳೆಸುತ್ತದೆ.

• ಕಾವ್ಯಾ ಪಿ.ಕೆ.

ಮಸೀದಿ ಮತ್ತು ಮಂದಿರ ತೀರ್ಪು



ಭಾರತದ ಯಾವುದೇ ಮಂದಿರ ಮಸೀದಿಯ
ಅಗೆದು ಅದರ ಡಿ.ಎನ್.ಎ. ಪರೀಕ್ಷೆ ಮಾಡಿ
ಭಾರತದ ಹಾಲಿ ಇರುವ ಎಲ್ಲಾ ಧರ್ಮ
ಪೂಜಾಸ್ಥಳಗಳಲ್ಲಿ ಶೇಕಡಾ ತೊಂಬತ್ತರಷ್ಟು
ಮತ ಪಂಥಗಳ (ಬಹುತೇಕ ಬೌದ್ಧ ಮತ್ತು ಜ
ಪೂಜಾ ಸ್ಥಳಗಳಾಗಿರುವುದು ಇತಿಹಾಸ.
ಮೂಲದಂತೆ ಇದರ ಮೂಲವನ್ನೂ ಹುಡುಕಹೋ
ಬಾರದು. ಈಗ ನಾವು ನೋಡುತ್ತಿರುವ ಯ
ಪೂಜಾಸ್ಥಳದ ಮೂಲವೂ ಅದೇ ಆಗಿರುವುದಿ
ಸ್ವತಂತ್ರ ಭಾರತಕ್ಕೆ ಈ ಮೂಳೆಗಳ ಪತ್ತೆ ಕಾರ್ಯ ಕೇ
ಹೊರತು ಶುಭವಲ್ಲ, ಮಂದಿರ ಮಸೀದಿ ದೇವ
ಧರ್ಮ ಕುರಿತ ವಿವಾದಗಳನ್ನು ಅಂಗವಿಕಲರನ್ನಾಗಿಯೆ
ಕುಷ್ಠರೋಗಿಗಳನ್ನಾಗಿಯೋ ಮಾಡಿಕೊಂಡು ಅದ
ತೋರಿಸುತ್ತಾ ಓಟು ಭಿಕ್ಷೆ, ಧನ ಭಿಕ್ಷೆ, ಅಧಿಕಾರ ಭ
ಯಾಚಿಸುವ ಅನಾರೋಗ್ಯಕರ ದರಿದ್ರ ಸ್ಥಿತಿಯಿಂ
ನಾವು ಇನ್ನಾದರೂ ಹೊರಬರಬೇಕು.

ತೀರ್ಪಿನ ಬಗ್ಗೆ ಅಸಮಾಧಾನ-ಭಿನ್ನಾಭಿಪ್ರಾ
ಗಳಿರಬಹುದು. ನನಗೂ ಇದೆ- 1949ರಲ್ಲಿ ರಾತ
ರಾತ್ರಿ ರಾಮಲಾಲನ ವಿಗ್ರಹವಿಟ್ಟ ಪ್ರಕರ
ಇರಿಸಿಕೊಂಡ ಆ ದೇವರಿಗೂ ಗೌರವ ತರುವುದಿ
ಪೂಜಿಸುವ ಈ ಭಕ್ತರಿಗೂ ಗೌರವ ತರುವುದಿ
ಇದನ್ನು ಕಾನೂನುಗೊಳಿಸಿದರೆ ಆ ಕಾನೂನು ತನ್ನ
ತಾನು ಗೌರವಿಸಿಕೊಂಡಂತಾಗುವುದಿಲ್ಲ. ಈ ಸೂಕ್ಷ
ಸಮಸ್ಯೆಯನ್ನು ಕಾನೂನು ವ್ಯಾಪ್ತಿಗೆ ತರದೆ ಮಾತುಕತೆ
ಮೂಲಕ ಬಗೆಹರಿಸಿಕೊಂಡಿದ್ದರೆ ಚೆನ್ನಾಗಿತ್ತು.

ಏನೇ ಇದ್ದರೂ ಅದನ್ನು ಸುಪ್ರೀಂ ಕೋರ್ಟ್ ನ್ಯಾಯಾಲ
ದಲ್ಲಿ ಬಗೆ ಹರಿಸಿಕೊಂಡು ಕಾನೂನಿಗೆ ಮ
ಸಂವಿಧಾನಕ್ಕೆ ನಾವೆಲ್ಲರೂ ಬದ್ಧರಾಗೋಣ.

• ದೇವನೂರ ಮಹಾದೇ

ಅವಳದೊಂದು ಗದ್ಯ-ಪದ್ಯ

1

ಒಂದು ಅರೆಬರೆ ಸುಟ್ಟು ಹೋದ
ನೀಲಿ ಕಲರಿನ ಜಂಪರು
ಕೆಂಪು ಕಲರಿನ ಲಂಗ
ಒಂದು ಬಿಳಿಯ ಬಣ್ಣದ ಹುಕ್ಕು ಕಿತ್ತೋದ ಬ್ರಾ
ಅಂದಾಜು ಕಿಮ್ಮತ್ತು ಏನೂ ಇಲ್ಲ

ಒಂದು ಗುರುತು ಹಿಡಿಯಲಾರದಷ್ಟು
ಕರಕಲಾದ ಸೀರೆ
ಒಂದು ಹಿಡಿ ಕೂದಲು
ಅರೆಬರೆ ಸುಟ್ಟದ್ದು ನಾನೇ
ಎಂದು ಹೇಳಿಕೊಂಡು ಬಿದ್ದಿರುವ
ಚಿಮಣಿ ಡಬ್ಬಿ
ಪಾಪಪ್ರಜ್ಞೆಯೇ ಮೈವೆತ್ತು
ಮಲಗಿರುವ ಸಣ್ಣ ಕಡ್ಡಿ ಪೆಟ್ಟಿಗೆ
ದಫ್ತರಿನಲ್ಲಿ ಹೀಗೆ
ಸಿಕ್ಕಿಹಾಕಿಕೊಳ್ಳುವ ಮುನ್ನ
ಸಂತೈಸಬಹುದಿತ್ತು
ಕನಿಷ್ಠ ಪಕ್ಷ ಸುಡುವವರನ್ನಾದರೂ
ತಡೆಯಬಹುದಿತ್ತು ಇಲ್ಲವೆ......
ಸುಡಬಹುದಿತ್ತು
ಬಾಯಿ-ಕೈಕಾಲುಗಳಿದ್ದರೆ
ನ್ಯಾಯ ಕೊಡಿಸಬಹುದಿತ್ತು
ಸಾಕ್ಷಿ-ಪುರಾವೆಗಳ ಹೊರತಾಗಿಯೂ
ಗಾಂಧಿ ಫೋಟೋದ ಮುಂದೆ

2

ಎರಡು ಜಡೆಗಳಿಗೆ ಹಠವಿಡಿದ
ಅವಳು:
ಅಪ್ಪನ ಕಂಗಳಲ್ಲಿ ಈಜಾಡಿ:
ಕಪ್ಪು ಕೋಟು-ಬೂಟುಗಳ ಸಪ್ಪಳಗಳನೆ
ಎದೆಯ ಬಡಿತವಾಗಿಸಿಕೊಂಡ
ಅಪ್ಪನೆದೆಯಲಿ ಅಡಗಿರುವಳೆಂದು
ಕಿಮ್ಮತ್ತಿಲ್ಲದ ಸಾಮಾನುಗಳ ಪರವಿ
ಕುಳಿತ ನ್ಯಾಯಾಲಯಕೆ ಹೇಳುವರಾರು?
ಮದುವೆ ಮತ್ತು ಸಾವುಗಳೆರಡೂ
ಭುವಿಯ ಮೇಲೆಯೇ ನಡೆದವೆಂದು
ಗೋಡೆಯ ಮೇಲಿನ ಗಾಂಧಿಗೆ ತಿಳಿಸುವವರಾರು?

3

ಕಳೆದುಕೊಂಡ ಹೆಂಡತಿಯರ
ಹುಡುಕುತ್ತಾ ಬರುವ 'ರಾಮ'ರೊಬ್ಬರೂ ಇಲ್ಲವಿಲ್ಲಿ!
ನೀಲಿ ಕಲರಿನ ಜಂಪರು
ಕೆಂಪು ಕಲರಿನ ಲಂಗ
ಸುಟ್ಟು ಕರಕಲಾದ ಕೂದಲು
ಗಂಡನರಸುತ್ತ ಸುತ್ತಿದ
'ಅಕ್ಕ' ನಂತೆ ತೋರುವ
ಸೋಜಿಗವ ಕಂಡು ಚಿಮಣಿ ಡಬ್ಬಿ-
ಕಡ್ಡಿಪೆಟ್ಟಿಗೆಗಳೆರಡೂ ತಮ್ಮನ್ನು ತಾವೇ
ಸುಟ್ಟುಕೊಂಡವು.

• ಬಿ. ಶ್ರೀನಿವಾಸ



ಮ್ಮೆಲ್ಲೆಗಳ ಕಾಯದಕಿಂತ ಆಡು ಕುರಿ ಕಾಯದೇ ಸುಲಭ!

ಶಕರನ್ನು ಕಾಯುವಂತಹ ಪರಿಸ್ಥಿತಿ ಂಡಿರುವ ಪಕ್ಷಗಳ ಬಗ್ಗೆ ಚರ್ಚಿಸಿದ ಉಗ್ರಿ ಾಗಿ,

ತ್ರಾನ ದಿವುಸದಲ್ಲಿ ನೂರಾರು ಕುರಿ ಕಾಯಬವುದು . ಆದ್ರೆ ಯಮ್ಮೆಲ್ಲೆಗಳ ಕಾಯದು ಭಾಳ ಕಷ್ಟದ ಂದ.

ಸು ಲು ಸೀ ಮೆ

ಪಟ್ಟೆಪುರಾಣ

ಬಿ. ಚಂದ್ರೇಗೌಡ

ಗಂತಿಯಾ?"

ಮತ್ತೆ, ನೋಡಾಗ್ನೆ ಜಗಳೂರೆಮ್ಮೆಲ್ಲೆ ರಾಮಚಂದ್ರ ಬಿಜೆಪಿ ತೋಳಗಳು ಹಾರಿಸಿಗಂಡು ದಂತೆ."

ಕಂಡ್ರ, ಬಿಜೆಪಿಗಳು ಒಂದಾರಿಸಿಗಂಡೋಗಿದ್ದಕ್ಕೇ ಮುಲ್ಲಾ. ಕುಮಾರಸ್ವಾಮಿ ಹತ್ತದಿನ್ನೈದ ಆರಿಸಿ ಸ್ವವುನಲ್ಲಾ ಅದಕೇನೇಳ್ತಿ" ಎಂದ ಸೀರ.

ಹಾರಿಸಿಗಂಡೋಗಿಲ್ಲ ಕಣೋ, ಅವೇ ಬತೆ."

ಮಾರಸ್ವಾಮಿ ಮುಂದೋದ, ಇವು ಹಿಂದೋದೊ

ಗೂ ಹೇಳಬವುದು. ಯಾಕಂದ್ರೆ ಮೇವು ನು ತಾನೆ ಮುಂದೊಗದು" ಎಂದು ಉಗ್ರಿ

ಗಳಾದ್ರೆ ಅಟ್ಟಿಸಿಗಂಡು ಹಿಂದೋಗಬವುದು. ಸೊಪ್ಪು ತೋರಿಸಿಕಂಡು ಮುಂದೋಗಬೇಕು ಎಂದಳು ಜುಮ್ಮಿ.

ಹಿಂಗಾಗ್ಯದೆ ಕಣೇ. ಕುಮಾರಣ್ಣ ಅಟ್ಟಿಗಂಡೋ ತೋರಿಸಿಕೊಂಡು ಮುಂದೋಗ್ಯವುನೆ. ಅದೇ ಯ್ಯ ತನ್ನ ಕುರಿಮಂದೆ ಹಿಂದೋಗ್ಯವುನೆ."

ಸು ಯಮ್ಮೆಲ್ಲೆಗಳು ಆಡು ಕುರಿ ಲ್ಯವೆಲ್ಲಿಗೆ ನ್ನು" ಎಂದ ಕಾಳಮಾವ.

ಕಣಮಾವ. ಕುಮಾರಸ್ವಾಮಿ ಆರಿಸಿಗಂಡೋದವಾ ಸ್ವಾಪಾನವಾಗಿ ಕಾಯ್ತಾ ಅವುನೆ. ಸಿದ್ದರಾಮಯ್ಯ ಕುರಿಯ ಕಾಯ್ತಾ ಅವುನೆ. ಆದ್ರು ಒಂದು ಹಾರಿಸೇಬುಟ್ರು ನೋಡು."

ಗರೆ ಉಳದವುರ ಕಾಯದು ಬಾಳ ಕಷ್ಟ ಅನ್ನು."

ನೆ ಕಣ ಮಾವ. ಕೋಟ್ಯಾಂತ್ರುಪಾಯಿ ಕೊಡ್ತಿವಿ, ಮಾಡ್ತಿವಿ ಅಂದ್ರೆ ಗತಿಗೆಟ್ಟವು ಹೋಗೇಬುಡ್ತವೆ. ಸುಖ ಪಡಬೇಕು ಅನ್ನಕಂಡು ನುಗ್ಗಿದ್ರೇನು ಮಾಡ್ತೀ. ಯಾಕಂದ್ರೆ ಎಮ್ಮೆಲ್ಲೆಗಳು ಕೆಟ್ಟು ಕ್ಯರ ಹಿಡದವೇ."

"ಜಗಳೂರಿನೋನು ಯಾವ ಪಾರ್ಟೀ?"

"ಆ ಬಡ್ಡೆತ್ತದ್ದು ಕಾಂಗ್ರೆಸ್ಸಂತೆ. ಕಾಸಿನಗಲ ಕುಂಕುಮ ಹಚ್ಚಗಳವಾಗ್ಲೆ ದೇಶಪಾಂಡೆ, ಸಿದ್ದರಾಮಯ್ಯ ನಿಗಾವಯಿಸ ಬೇಕಾಗಿತ್ತು, ಅಂತೂ ಯಾಮಾರಿಸಿಬುಟ್ರು. ಇವುರು ಎಲ್ಲುಡುಕಿದ್ರೂ ಸಿಗತಾಯಿಲವಂತೆ."

"ಜಗಳೂರಲ್ಲಿ ಒಬ್ಬ ಇಮಾಂಸಾಬಿ ಅಂತ ಇದ್ದ. ಯಂಥಾ ವಳ್ಳೆ ಮನುಸ ಅಂತೀ. ಆ ಕಾಲದಲ್ಲಿ ಕಾಂಗ್ರೆಸಿನೋರೆ ಅಂಗಿದ್ರು ಕಂಡ್ರ. ಅಂಥಾ ಜಾಗದಿಂದ ಬಂದೋನು ಯಂಗಿರಬೇಕು?" ಎಂದ ಕಾಳಮಾವ.

"ಆ ರೇಣುಕಾಚಾರಿ ಏನಾದುನ್ಲ?" ಎಂದಳು ಜುಮ್ಮಿ.

"ಥೂ, ಅದರ ಕತೆ ಬ್ಯಾಡ ಕಣೆ. ಯಾರೂ ಮಾತಾಡುಸ್ತಾಯಿಲ್ಲ, ಆದ್ರು ತಾನೆ ಮ್ಯಾಲಬಿದ್ದೋಗಿ ಮಾತಾಡುಸ್ತದೆ. ಈಗಾಗ್ಲೆ ಅವುನು ಯರಡಸತಿ ನಂಬುಕೆ ಕಳಕಂಡಿರದ್ರಿಂದ ಎಡೂರಪ್ಪನೂ ನೆಗ್ಲೆಟ್ ಮಾತಾಡಿಬುಟ್ಟವುನೆ. ಆದ್ರೂ ಯಂಗೋ ಅದೂ ಕಾಲ ಹಾಕ್ತಾ ಅದೆ."

"ಅಷ್ಟಾದ್ರೂ ಎಡೂರಪ್ಪಾಕೆ ಅವುನ್ನ ಇಟಗಂಡವುನೆ."

"ನಾನಾಗ್ಲೆ ಹೇಳಿಲ್ಲವೆ? ಎಡೂರಪ್ಪ ಏನೋ ಮಾಡಬಾರದ್ದ ಮಾಡಿದಾಗ ಈ ರೇಣುಕಾಚಾರಿ ನೋಡಿಬುಟ್ಟಿದ್ದನಂತೆ. ಅದ್ಕೆ ಅವುನ ವಿಷಯದಲ್ಲಿ ಎಡೂರಪ್ಪ ಬಾಯಿ ಬುಡದಿಲ್ಲ."

"ಪಾಪ, ಆ ಎಡೂರಪ್ಪನ ಕಷ್ಟ ನೋಡಿದ್ರೆ ವಟ್ಟೆಲ್ಲ ಉರಿತದೆ ಕಂಡ್ರ."

"ಆದವುನೆ ಮಾಡಿಕಂಡಿದ್ದಲವೆ ಮಾವ? ಅವುನು ಮಟ್ಟ ಮದ್ಲು ಮಂತ್ರಿ ಮಾಡಿದಾಗಲೇ ಯೋಚನೆ ಮಾಡಬೇಕಾ ಗಿತ್ತು, ಕಂಡಾಟ ಆಡಕ್ಯೋದ ರೆಡ್ಡಿಗಳು ಬಲಿಹಾಕಿದ್ರು. ತಿರಗ ಬಾಲ ಬಿಚ್ಚಿದ. ಕುಮಾರಸ್ವಾಮಿ ಕೈ ಹಾಕಿದ. ಇನ್ನ ಮುಂದೆ ಸರಕಾರ ಸರಿಯಾಗಿ ನ್ಯಡಕಂಡೋಗೋ ಯಾವ ಸೂಚನೆನೂ ಇಲ್ಲ ಕಣ ಮಾವ."

"ಕುಮಾರಸ್ವಾಮಿ ಏಟು ಜನ ಹಿಡ ಕಂಡೋಗಿದ್ದನೋ ಅಷ್ಟೇ ಜನವ ಯಡ್ಯೂರಪ್ಪ ಕಾಂಗ್ರೆಸ್ಸಿಂದ ಯಳಕಂಡನಂತೆ ನಿಜವೆ?" ಎಂದ ಸೀರ.

"ನಿಜ ಕಣ ಮಾವ. ಜೆಡಿಎಸ್ ಕ್ವಾಟೆ ವಳಿಕೆ ಯಾರೂ ಅಷ್ಟು ಸುಲಭಾಗಿ ಹೋಗಕ್ಯಾಗದಿಲ್ಲ. ಹೋದ್ರೆ ಮಾರ್‍ಕಂಡೋರು, ತಗಳೋರು ಇಬ್ಬರಿಗೂ ಗೂಸ ಬೀಳ್ತವೆ. ಅದೇ ಕಾಂಗ್ರೆಸ್ಸಿನಲ್ಲಿ ಅಂಗಾಗದಿಲ್ಲ ಅಂತ ತಿಳಕಂಡವುರೆ. ಅದ್ಕೆ ಕಾಂಗ್ರೆಸವು ಹೆದ್ರಿಕಂಡವೆ."

"ನಮ್ಮ ಎಮ್ಮೆಲ್ಲೆಗೇನೋ ಇಪ್ಪತ್ತೆಂಟು ಕೋಟಿ ಕೊಡಕ್ಕೆ ಬಂದಿದ್ರಂತೆ" ಎಂದ ಸೀರ.

"ಊ ಕಣಮಾವ. ಅವುನು ಈಸಗಂಡತ್ಲಗೆ ಪೇಪರ್‍ನೋರ ಕರದು ತೋರಕ್ಕೆ ಮಾಡಿರೊ ಪ್ಲಾನು ಲೀಕಾಯ್ತಂತೆ. ಅದ್ಕೆ ದುಡ್ಡ ಕಳಕಂಡ."

"ಸುಮ್ಮನೀಸಗಂಡು ಯಲ್ಲಾರಿಗೂ ಹಂಚಿಬುಡಬೇಕಾ ಗಿತ್ತು ಕಂಡ್ರ."

"ಅಹಹ ಸೀರ ಮಾವುನ್ನೊಡು, ಆಗ್ಲೆ ಈಸಗಳ್ಯಕ್ಕೆ ತಯಾರಾಗಿದ್ದೊನಂಗೆ ಕಣ್ಣು ಬುಡತಾ ಅವುನೆ."

"ಸುಮ್ಮನೆ ಹಾಕ್ಲಾಸುಕ್ಯಂಗಂದೆ ಕಂಡ್ರ. ಅಂತಾ ದುಡ್ಡು ನಮಿಗ್ಯಾಕ್ಲ, ಈ ಕ್ಷಣ ಸಾವುರುಪಾಯಿ ಸಿಕ್ಕಿದ್ರೆ ಏನು ಮಡನಪ್ಪ ಇದ ಅನ್ನೊ ಜನ ನಾವು ಗೊತ್ತೆ?" ಎಂದು ಸೀರ ಸ್ವಾಭಿಮಾನದಿಂದ ಬೀಗಿದ.

"ವಳ್ಳೆ ಸೀರ ಮಾವ ನೀನು. ಸಾವುರುಪಾಯಿಗೆ ಏನು ಬತ್ತದೆ ಅಂತೀ? ಬೆಂಗಳೂರಲ್ಲಿ ಬೆಳಿಗ್ಗೆ ತಿಂಡಿ ತಿಂದು, ಮಧ್ಯಾನ ಉಂಡು, ತಿರಗ ರಾತ್ರಿಕೆ ಉಂಡ್ರೆ ಒಂದು ಸಾವುರ ಹುಡಿಯಾಗೋಯ್ತದೆ." ಎಂದ ಉಗ್ರಿ.

"ಮೈಸೂರಲ್ಲೇ ಒಂದು ಸವುರ ಖರ್ಚು ಮಾಡಿಕಂಡು ಬಂದೆ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಇದ್ಯಾಕ್ಲ ಕಣ್ಣು ಕ್ಯಂಪುಗಾಗ್ಯದೆ?" ಎಂದಳು ಜುಮ್ಮಿ.

"ಮೂರು ದಿಸದಿಂದ ಮಟನ್ನು, ಡ್ರಿಂಕ್ಸು ಕಣಕ್ಕ, ಜಂಬೂ ಸವಾರಿನೂ ನೋಡಲಿಲ್ಲ, ಅರಮನೆನೂ ನೋಡಲಿಲ್ಲ."



"ಆದ್ಯಾಕ್ ನೋಡ್ಲಿಲ್ಲಾ?"

"ಈ ಸತಿ ದೆಸರ ಡಲ್ಲಾಗಿತ್ತು ಕಣಕ್ಕ. ದಸರ ಚನ್ನಾಗಿ ನ್ಯಡೀಬೇಕಾದ್ರೆ ವಳ್ಳೆ ಸರಕಾರ ಇರಬೇಕು. ವಳ್ಳೆ ಉಸ್ತುವಾರಿ ಮಂತ್ರಿಯಿರಬೇಕು. ಈಗ ಆದ್ಯಾವುದೂ ಇರಲಿಲ್ಲ. ಜ್ವತಿಗೆ ಸರಕಾರ ಬ್ಯಾರೆ ತಲೆ ಮರಿಸಿಗಂಡು ಕುಂತದೆ. ಅದ್ಕೆ ಕಾಮಗಾರಿ ಬದ್ಲಿಗೆ ಬರೀ ಬಿಲ್ಲು ತಯಾರಾಯ್ತಾಯಿದ್ದವಂತೆ. ಊದುಬತ್ತಿ ರಾಮದಾಸ ಉಸ್ತುವಾರಿ ವಯಿಸಿದ್ರೆ ದಸರ ಯಂಗೆ ಕಳೆಗಟ್ಟಬೇಕೂ ಅಂತ?"

"ಊದುಬತ್ತಿ ರಾಮದಾಸ್ನಾರ್ಲ?"

"ಅವುನೆ ಕಣಕ್ಕ ಈಗ ದಸರಾ ಉಸ್ತುವಾರಿ ವಯಿಸಿ ದ್ದೋನು. ಎಡೂರಪ್ಪ ಅವುನ್ನ ಮಂತ್ರಿ ಮಾಡಿದ್ಕೆ ಅಲವೇ ಶಂಕರಲಿಂಗೇಗೌಡ ತಿರುಗಿಬಿದ್ದು ಬಿಪಿ ಏರಿಸಿಗಂಡು ಆಸುಪತ್ರೆ ಸೇರಿದ್ದು?"

"ಶಂಕರಲಿಂಗೇಗೌಡ್ರು ಗಂಡೆ ಬುಡ್ರ. ಬೀದಿಲಿ ನಿಂತಗಂಡು ಎಡೂರಪ್ಪನ್ನ ಬೋದು ಮನೆಬಾಗಲಾಯ್ತದನಂತೆ. ಎಡೂರಪ್ಪ ಬಂದು ಎಷ್ಟು ಕೂಗಿದ್ರೂ ತಗಿಲಿಲವಂತೆ. ಮುಖ್ಯಮಂತ್ರಿ ಮನೆ ಬಾಗಿಲಿಗೆ ಬಂದ್ರೂ ಕದ ತಗಿಲಿಲ್ಲ ಅಂದ್ರೆ ಅವುನೇ ಗಂಡು" ಎಂದು ಸೀರ ಗೌಡನನ್ನು ಕೊಂಡಾಡಿದ.

"ಅವುನೇನಂಥಾ ಕ್ವಾಲಿಟಿ ಇರೊ ಮನ್ಸ ಅಲ್ಲ ಚಿಗಪ್ಪ. ಮೈಸೂರು ಮೇಯರ್ ಆಗಿದ್ದು, ನಾಕು ಸತಿ ಗೆದ್ರೂ ಎಡೂರಪ್ಪ ಊದುಬತ್ತಿ ರಾಮದಾಸನ್ನ ಮಂತ್ರಿ ಮಾಡಿದ ಅಂದ್ರೆ ಶಂಕರಲಿಂಗೇಗೌಡ ವೀಕು, ರಾಮದಾಸ ಸ್ಟ್ರಾಂಗು ಅಂದಂಗಾಯ್ತು. ಇನ್ನೊಂದು ವಿಷಯ ಹೇಳದ್ನೆ ಮರೆತಿದ್ದೆ. ಮೈಸೂರು ಬಸ್ಟಾಂಡು ಕಟ್ಟಿದೊನು ಸಿಕ್ಕಿದ್ರೆ ಮೆಟ್ಟಿನಲ್ಲೆ ವಡಿತಿನಿ ಕಣ್ರೊ."

"ಯಾಕ್ಲ ಅವುನೇನು ಮಾಡಿದ್ದ ನಿನಿಗೆ?"

"ನನಿಗೆ ಪರಸನಲ್ಲಾಗಿ ಏನೂ ಮಾಡಿಲ್ಲ ಕಣಕ್ಕ. ಆದ್ರೆ ಬಸ್ಟಾಂಡು ಕಟ್ಟೊ ಮುನ್ನ ಮೈಸೂರು ಪರಂಪರೆ ಏನು, ಅಲ್ಲಿರೊ ಕಟ್ಟಡ ಯಂಗದೆ ಅಂತ ಯೋಚನೆ ಮಾಡಬೇಕಾ ಗಿತ್ತು ಆ ಪೂಲಿಷ್‌ಫೆಲೊ."

"ಈಗ್ಯಂಗೆ ಕಟ್ಟಿದ್ದಾರೂ?"

"ತಗಡು ಬಡುದು ಬಣ್ಣ ವಡದಂಗೆ ಮಾಡ್ಯವೆ ಕಣಕ್ಕ. ಇಡೀ ಮೈಸೂರಿಗೆ ಬಸ್ಟಾಂಡು ಅವುಲಕ್ಷಣ. ಮುಂದೆ ವಳ್ಳೆ ಸರಕಾರ ಬಂದಾಗ ಕಿತ್ತಾಕ್ಸಿ ಮೈಸೂರಿಗೆ ಲಾಯಕ್ಕಾಗಿರೊ ಬಸ್ಟಾಂಡ್ ಕಟ್ಸಬೇಕು. ಇಲ್ಲ ಅಂದ್ರೆ ಮೈಸೂರಿಗೇ ಅವುಮಾನ."

"ದಸರಾ ನೋಡದು ಬುಟ್ಟು ಬಸ್ಟಾಂಡು ನೋಡಿ ಬಂದು ಬೈತ ಕುಂತಿದ್ದಿಯಲ್ಲಾ?"

"ದಸರದಲ್ಲಿ ಏನದಕ್ಕ? ನಮ್ಮ ಪುಡಸ್ವಾಮಿ ವಳ್ಳೆ ಯರಡು ಟಗರು ತಗಂಬಾ ಅಂತ ದುಡ್ಡು ಕೊಟ್ಟಿದ್ದ. ತಗಂಡು ಲಗೇಜ್ ಆಟೋಗಾಯ್ಕಂಡು ಹೋದೆ. ಮೂರು ದಿನ ಕಾರ್ಡ್ಸ್ ಆಡಿಕಂಡು, ಡ್ರಿಂಕ್ಸ್ ಮಾಡಿಕೊಂಡು, ಮಟನ್ ತಿಂದೆ. ನನಿಗೇನೊ ಅದೇ ಚನ್ನಾಗಿ ಕಾಣ್ತು, ಸಾಮಾನ್ಯವಾಗಿ ಯಾವುದೇ ಸರಕಾರಿ ಕಾರ್ಯಕ್ರಮ ಚನ್ನಾಗಿರದಿಲ್ಲ, ಅಂಗೇ ಮೈಸೂರು ದಸರ ಸಂಪೂರ್ಣ ಸರಕಾರಿ ಕಾರ್ಯಕ್ರಮ ಆಗಿದ್ರಿಂದ ಅಲ್ಲೊಂದು ಕಾಟಾಚಾರ ಎದ್ದುಕಾಣತಿತ್ತು. ಹಿಂದಿನ ವೈಭವ ಇರಲಿಲ್ಲ, ಅದನ್ನೆಲ್ಲ ನೋಡಿ ಬೇಜಾರು ಮಾಡಿಕಳದಕಿಂತ ಪುಡಸ್ವಾಮಿ ಮನೆಲಿ ಉಂಡು, ನಂಟ್ರು ಜೊತೆ ಮಾತಾಡಿ, ಬರದೆ ಚಂದ ಅನ್ನುಸ್ತು, ಅಂಗೇ ಮಾಡಿದೆ ಕಣಕ್ಕ, ಸಾರಿ."

ಧುನಿಕ ವರಸೆ



ಕೆ ಚಿಕ್ಕ ಹುಡುಗಿ. ನಾನು ಅವತ್ತು ಮಾತಾಡುತ್ತಿದ್ದುದು ಈ ಕಾಯಿಯ ತರಹದವರ ಕೆಟ್ಟ ಮನಸ್ಸು ಈಗ ಸಾಂಕ್ರಾಮಿಕ ಮವಾಗ ಇಲ್ಲಿ ಬರೆಯುತ್ತಿದ್ದೇನೆ. ಹಿಂದೆ ರಾಜಕಾರಣಿಗಳು, ಗಳು, ವ್ಯಾಪಾರಿಗಳು, ಸತ್ಯಸಂಧರಾಗಿ ಬದುಕಲು ುತ್ತಿದ್ದರು. ಕೆಟ್ಟದು ಮಾಡಿದರೂ ಅದನ್ನು ಗುಟ್ಟಾಗಿ ಮಾಡಿ ನುಭವಿಸುತ್ತಿದ್ದರು. ಒಮ್ಮೆ ಬೆಂಗಳೂರಲ್ಲಿ ಒಂದು ದೊಡ್ಡ ದೇವಸ್ಥಾನ ಸಜ್ಜನ್ ರಾವ್ ಎಂಬ ವರ್ತಕರಿಗೆ ಬೇಸರವಾಯಿತು; ದೇವರಿಲ್ಲ, ಮು ಆಡಂಬರ, ಕಪ್ಪು ಹಣದವರ ಅಬ್ಬರ ಇತ್ಯಾದಿಯಾಗಿ ಅವರು ದ್ದ ದೇವಸ್ಥಾನದ ಬಗ್ಗೆ ಅನೇಕರು ಮಾತಾಡಿಕೊಳ್ಳುವುದನ್ನು ನೋಡಿ ುದ ಸಜ್ಜನ ರಾವ್ ತಮ್ಮ ಗೆಳೆಯರೊಬ್ಬರಲ್ಲಿ ತಮ್ಮ ಅಳಲು ಹೇಳಿಕೊಂಡರು. ಯರು ಅವರಿಗೆ ದೇವರಿದ್ದಾನೆಯೆ, ಇಲ್ಲವೆ ಎಂಬ ಸಂದಿಗ್ಧ ವಿಷಯಕ್ಕಿಂದ ಾದ ಜನರ ಶ್ರದ್ಧೆಯ ಬಗ್ಗೆ ಮಾತಾಡಿ ಅವರ ಬೇಸರ ಹೋಗಲಾಡಿಸಿದರು. ವರಿಲ್ಲ ಎಂದು ಹೇಳುವವರ ಸಂಖ್ಯೆ ಹೆಚ್ಚಾಗಿದೆ; ಹಾಗೆಯೇ ಮೋಸ ುದು ತಪ್ಪಲ್ಲ ಎಂಬ ಆತ್ಮಹತ್ಯಾತ್ಮಕ ನಂಬಿಕೆ ಬೆಳೆಯುತ್ತಿದೆ. ಅವತ್ತು ನನ್ನೆದುರು ಕೂತಿದ್ದ ಬಾಲಕಿಗೆ ನಾನು


"ವಂಚನೆ ತಪ್ಪು, ಮೋಸ, ಅಪ್ರಾಮಾಣಿಕತೆಯ ಮೂಲಕ ಯಶಸ್ಸು ಗಳಿಸಲೆತ್ನಿಸುವುದು ತಪ್ಪು."

ಲ್ಲ ನಿಮ್ಮ ಕಾಲಕ್ಕಾಯಿತು. ಈಗ ನಡಿಯೋಲ್ಲ, ಮೋಸ ಮಾಡದಿದ್ರೆ ಯಾರೂ ಮುಂದೆ ಬರೋದಕ್ಕೆ " ಎಂದು ನಕ್ಕಳು ಆ ಚಿಕ್ಕ ಹುಡುಗಿ.

ೕಸದಲ್ಲಿ ನಿನಗೆ ಅಪಾರ ನಂಬಿಕೆ ಇರೋಹಾಗೆ ಕಾಣುತ್ತೆ" ಅಂದೆ.

ದು," ಅಂದಳು.

ಶ್ಯಾಗಿ ನಾನು ನಿನ್ನನ್ನು ಬೈದು ಪ್ರಯೋಜನವಿಲ್ಲ, ನನ್ನ ಅನುಭವ ಹೇಳ್ತೀನೆ. ನಾನು ಮೋಸ ಮಾಡುವುದಕ್ಕಿಂತ ನನಗೆ ತೊಳಲಾಟವಾಗೋದು ನಾನೇ ಮೋಸಹೋದಾಗ. **When I am cheated.** ನಾನು ನಂಬಿದ ುದಾಗ ನನಗೆ ವಂಚನೆ ಮಾಡಿದಾಗ, ಅಪರಿಚಿತನೊಬ್ಬ ಹಿಗ್ಗಿ, ಬೀಳಿಸಿದಾಗ ಮೋಸಗಾರನ ಬಗ್ಗೆ ಎಷ್ಟು ಅಷ್ಟೇ ನನ್ನ ಬಗ್ಗೆ, ಸಿಟ್ಟಿರುತ್ತೆ, ಅಂದರೆ, ನನಗೆ ಮನುಷ್ಯರು ಅರ್ಥವಾಗದೆ ಕೆಟ್ಟ ಸಹಾಯಕರನ್ನು ಇಟ್ಟುಕೊಂಡು ಯಶಸ್ಸು ಗಳಿಸುವ ಭ್ರಮೆ ನನ್ನಲ್ಲಿದ್ದುದರಿಂದ ಹೀಗಾಯಿತು; ನಾವೆಲ್ಲರೂ ಮೋಸದ ಬಗ್ಗೆ ಕಟ್ಟುನಿಟ್ಟಾದ ನಿಲುವು ತೆಗೆದುಕೊಳ್ಳದೆ ಇರುವುದರಿಂದ ಒಬ್ಬ ವ್ಯಾಪಾರಿ, ಉತ್ಪಾದಕ, ಕಾರ್ಮಿಕ, ವೈದ್ಯ ನಮಗೆ ಮೋಸ ಮಾಡಿ ತೊಳಲಾಡುವಂತೆ ಮಾಡುತ್ತಾನೆ. ಈಗ ನೀನು ಹೇಳು, ನನಗೆ ವಂಚಿಸಿಕೊಳ್ಳಲು ಇಷ್ಟವಿದೆಯಾ?"



"ಇಲ್ಲ. ಎಚ್ಚರ ವಹಿಸಿ ಮೋಸ ಮಾಡಲ್ಪಡದಂತೆ ನೋಡಿಕೊಳ್ತೇನೆ."

"ಆದಕ್ಕೇ ಹೇಳೋದು... ಪ್ರಾಣಿಗಳ ಪ್ರಪಂಚಕ್ಕೂ ಮನುಷ್ಯ ಪ್ರಪಂಚಕ್ಕೂ ಏನು ವ್ಯತ್ಯಾಸವೆಂದರೆ, ಮನುಷ್ಯನಿಗೆ ವಿವೇಕ ಇರುತ್ತದೆ; ಯಾವುದು ತಪ್ಪು, ಯಾವುದು ಸರಿ ಎಂಬ ಬಗ್ಗೆ ಅಸ್ಪಷ್ಟ ತಿಳಿವಳಿಕೆಯಾದರೂ ಇರುತ್ತೆ. ಹಾಗೆಯೇ ಕಳವು ಮಾಡುವಂತೆಯೇ, ಕಳ್ಳತನಕ್ಕೊಳಗಾದವನಿಗೆ ಅವಮಾನವಾಗುತ್ತದೆ. ಹಾಗೆಯೇ ಎಲ್ಲರೂ ಇನ್ನೊಂದು ವಿಷಯ ಯೋಚಿಸಬೇಕು; ಎಲ್ಲರೂ ಕಳ್ಳರಾದರೆ ಬರುಬರುತ್ತಾ ಕದಿಯಲು ವಸ್ತುಗಳೇ ಉಳಿದಿರುವುದಿಲ್ಲ. ನೀನಿವತ್ತು ವಂಚನೆ ಆಧುನಿಕ ಶೈಲಿ ಅಂತ ತಿಳಿದಿರಬಹುದು. ಹಾಗೇನಲ್ಲ. ಮನುಷ್ಯನಿಗೆ ಪ್ರಜ್ಞೆ ಬಂದಾಗಿನಿಂದ ಕಳ್ಳತನ ಮಾಡಲು, ಮಾಡಿದ್ದರಿಂದ ಪಾಪಪ್ರಜ್ಞೆ ಮೋಸ ಮಾಡಿಸಿಕೊಂಡದ್ದರಿಂದ ಅವಮಾನ ಅನುಭವಿಸುತ್ತಲೇ ಬಂದಿದ್ದಾನೆ. ದಡ್ಡರಿಗೆ ದೇವರ ಭಯ ಇದ್ದು, ಶಾಣ್ಯಾ ಆದವರಿಗೆ ತಿಳಿವಳಿಕೆಯ ಆಧಾರ ಕೊಡಲಾಗಿದೆ...."

"ಅದೆಲ್ಲ ನನಗೆ ಗೊತ್ತಾಗೋಲ್ಲ, ನೀವು ಹೇಳುವ ರೀತಿಯ ಪ್ರಾಮಾಣಿಕತೆಯಿಂದ ನೊಂದು ನಾಶವಾದವರನ್ನು ಬಲ್ಲೆ" ಅಂದಳು ಹುಡುಗಿ.

"ಭ್ರಷ್ಟತೆಯನ್ನೇ ತಗೋ" ಎಂದು ಅವಳಿಗೆ ಹೇಳಿದೆ – "ಭ್ರಷ್ಟತೆ, ವಂಚನೆ, ಆತ್ಮವಂಚನೆ ಇವೆಲ್ಲ ಬೇರೆಬೇರೆ ಮಾತುಗಳೇನಲ್ಲ, ಒಂದಾನೊಂದು ಕಾಲದಲ್ಲಿ ಅಧ್ಯಾಪಕರಿಗೆ ಭ್ರಷ್ಟತೆಯ ಮಾರ್ಗಗಳೇ ಇರಲಿಲ್ಲ, ಹಾಗೆಯೇ ಅವನಿಗೆ ಅಧಿಕಾರಿಗಿರುವ ಪವರ್, ಅಧಿಕಾರ ಇರಲಿಲ್ಲ, ಇವತ್ತಿನ ಅಧಿಕಾರಿ ಭ್ರಷ್ಟನಾಗಲು ಅವಕಾಶವಿರುವಾಗಲೇ ಪ್ರಾಮಾಣಿಕನಾಗಿರಲು ಬೇಕಾದ ಸವಲತ್ತು ಅವನಿಗೆ ಇರುತ್ತವೆ. ಇದನ್ನು ವಿವರಿಸಬೇಕಾಗಿಲ್ಲ." ಅಂದೆ.


ಆಕೆ ನನ್ನ ಮಾತುಗಳನ್ನು ನಂಬಿದಂತೆ ಕಾಣಲಿಲ್ಲ, ನನಗೆ ಸಿಟ್ಟು ಏರತೊಡಗಿತ್ತು, ಸುಮ್ಮನೇ ಇದ್ದು ಹೇಳಿದೆ, "ಇನ್ನೊಬ್ಬರಿಗೆ ಆದ ಅನ್ಯಾಯ ನಮಗೂ ಆಗಬಹುದು ಎಂದು ತಿಳಿಯಲಾರದಷ್ಟು ನೀವೆಲ್ಲ ಕ್ಷುದ್ರರಾಗಿದ್ದಾಗ ಯಾವ ಮಾತೂ ಕೇಳಿಸುವುದಿಲ್ಲ, ಈಗ ಹೋಗು" ಅಂದೆ.

–ಜುಲೈ 13, 1993

ಭ್ರಷ್ಟಾನುಭ್ರಷ್ಟ ದೇವರು!

ಅಣಕ

ಎಚ್.ಎಲ್. ಕೇಶವಮೂರ್ತಿ



ಅಕ್ಟೋಬರ್ 11

ಮುಖ್ಯಮಂತ್ರಿ ವಿಶ್ವಾಸಮತಯಾಚನೆ.

ವಿಧಾನಸಭೆಯಲ್ಲಿ ಗಲಭೆ, ಗದ್ದಲ.

ರಾಜ್ಯ ಮಾನ ವಿಧಾನಸಭೆಯಲ್ಲಿ ಹರಾಜಿಗಿತ್ತು!

ಇಡೀ ಕರ್ನಾಟಕ ನಾಚಿ ತಲೆತಗ್ಗಿಸಿತು!

ರಾಷ್ಟ್ರೀಯ ಚಾನೆಲ್‌ಗಳಲ್ಲಿ ಈ ಅಸಹ್ಯ ನಡವಳಿಕೆ ಕುರಿತ ಚರ್ಚೆ. ಒಟ್ಟಾರೆ ಅಭಿಪ್ರಾಯ-disgrace!

ಕರ್ನಾಟಕ ರಾಜ್ಯಕ್ಕೆ ದೇಶದ ಬಳುವಳಿ!

ಇದಕ್ಕೆ ಕಾರಣ ಯಾರು?

ಅಕ್ಟೋಬರ್ 14

ವಿಧಾನಸಭಾಧ್ಯಕ್ಷರ 'ಧ್ವನಿ ಗ್ರಹಣ' ಶಕ್ತಿಯ ಬಗ್ಗೆ ರಾಜ್ಯಪಾಲರಿಗೆ ಅಪನಂಬಿಕೆ. ಮತ್ತೆ ಬಹುಮತ ಸಾಬೀತುಪಡಿಸಲು ಸೂಚನೆ. ಅವತ್ತು ಆ ದಿನ ವಿಧಾನಸಭೆ ಘನತೆ, ಗೌರವದಿಂದ ಕೂಡಿತ್ತು.

ಸಶಸ್ತ್ರ ಪೊಲೀಸರು ಇರಲಿಲ್ಲ. ವಿಧಾನಪರಿಷತ್ ಸದಸ್ಯರಿಗೂ ಪ್ರವೇಶ ನಿಷೇಧ. ಮಾಧ್ಯಮದವರಿಗೂ ಪ್ರವೇಶ. ಟಿವಿಗಳಲ್ಲಿ ನೇರ ಪ್ರಸಾರಕ್ಕೆ ಅನುಮತಿ. ಪ್ರಜಾತಂತ್ರ ವ್ಯವಸ್ಥೆ ಮಾದರಿಯಾಗಬಹುದಾದಂತ ಸನ್ನಿವೇಶ. ಆದರೆ.... ರಾಷ್ಟ್ರೀಯ ಚಾನೆಲ್‌ಗಳು ಇತ್ತ ಗಮನ ಹರಿಸಲೇ ಇಲ್ಲ!

ಟಿಆರ್‌ಪಿ ಮೇಲೇ ಅವರ ದೃಷ್ಟಿ. ಜನತಂತ್ರ ವ್ಯವಸ್ಥೆ ಕುಸಿದಾಗ ಅದು ಏರುತ್ತೆ. ಅದು ಮಾತ್ರ ಅವರಿಗೆ ಸುದ್ದಿ!

ರಾಷ್ಟ್ರೀಯ ಚಾನೆಲ್‌ಗಳ ಈ ನಡವಳಿಕೆ-disgrace.

ಅಕ್ಟೋಬರ್ 10

ಬೆಳಗ್ಗೆ ಕೃಷ್ಣಾದಲ್ಲಿ ಸಭೆ. ಶಾಸಕರದ್ದಲ್ಲ, ಅದೇನಿದ್ದರೂ ರೆಸಾರ್ಟಿನಲ್ಲಿ! ಪೊಲೀಸ್ ಅಧಿಕಾರಿಗಳದ್ದು, ಮುಖ್ಯಮಂತ್ರಿ ಅಧ್ಯಕ್ಷತೆ. ಉದ್ದೇಶ: ಅಹಿತ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಲು!

ಅಹಿತಕರ ಘಟನೆ ನಡೆಯುತ್ತದೆ ಎಂದು ತಿಳಿದದ್ದು ಹೇಗೆ?

ಪೊಲೀಸರ ದಿವ್ಯ ದೃಷ್ಟಿಯಿಂದ!

ಹದಿನಾರು ವಿಧಾನಸಭೆ ಸದಸ್ಯರ ಸದಸ್ಯತ್ವ ರದ್ದಾದಾಗ ಗಲಭೆ ನಡೆದೇ ನಡೆಯುತ್ತದೆ ಎಂಬುದು ಅವರ ತರ್ಕ!

ವಿಚಾರಣೆಯೇ ನಡೆದಿಲ್ಲ, ಸಭಾಧ್ಯಕ್ಷರಿಂದ ಅಧಿಕೃತ ಆದೇಶವೂ ಹೊರಬಂದಿಲ್ಲ. ಇವೆಲ್ಲದರ ಮುನ್ನವೇ ವಜಾ ಸಂಗತಿ ಹೊಳೆದಿತ್ತು. ಏನು ದಿವ್ಯದೃಷ್ಟಿ!

ಆಡಳಿತಪಕ್ಷ ಇತರೆ ಪಕ್ಷಗಳಿಗಿಂತ ಭಿನ್ನ ತಾನೆ. 11 ರಂದು ಅದು ಸಾಕ್ಷಾತ್ಕಾರವಾಯಿತು! ಅದು ಹೀಗೆ....

ಬೆಳಗ್ಗೆ ಸಭಾಂಗಣದ ಬಾಗಿಲು ಮುಚ್ಚಿದರು. ವಿಪಕ್ಷಗಳಿಗೆ ಪ್ರವೇಶ ನಿರಾಕರಿಸಿದರು. ವಿದ್ಯುನ್ಮಾನ ಮಾಧ್ಯಮಗಳಿಗೂ ಇದೇ ಗತಿ ಆಯಿತು. ಶಂಕರ ಬಿದರಿಯವರೇ ಬಾಗಿಲು ಕಾಯಲು ನಿಂತರು! ಬೇಸತ್ತ ಸದಸ್ಯರು, ಮಾಧ್ಯಮದವರು ಒಮ್ಮೆಗೇ ಬಾಗಿಲು ತಳ್ಳಿ ಒಳನುಗ್ಗಿದರು. ಅವರ ಜೊತೆಯೇ ಸಶಸ್ತ್ರ ಪೊಲೀಸರೂ ಸೇರಿಕೊಂಡರು. ಗಲಭೆ ಗದ್ದಲ. ಭಾಜಪ ಬಯಸಿದ್ದೂ ಅದೆ. ಆದದ್ದೂ ಅದೇ. 'ಧ್ವನಿಮತ'ದಿಂದ ಬಹುಮತ ಪಡೆದರು ಮುಖ್ಯಮಂತ್ರಿ!

ಪೊಲೀಸರು ಹಾಜರಿದ್ದದ್ದು ಗಲಭೆ ನಿಯಂತ್ರಿಸಲು ಅಲ್ಲ; ಅದನ್ನು ಪರಾಕಾಷ್ಠೆಗೇರಿಸಲು! ಇದಕ್ಕೆ ಸಾಕ್ಷಿಯಾಗಿತ್ತು ಅವತ್ತಿನ ಘಟನೆ.

14 ರಂದು ವಿಧಾನಸಭೆ ನಡೆಸಿದ ರೀತಿಯಲ್ಲೇ 11 ರಂದೂ ನಡೆಸಬಹುದಿತ್ತಲ್ಲಾ?

ನಡೆಸಬಹುದಿತ್ತು, ಆದರೆ.... 11 ರಂದು ಮುಖ್ಯಮಂತ್ರಿಗೆ ಬಹುಮತ ಇರಲಿಲ್ಲ. ಹದಿನಾಲ್ಕರಂದು ಅದು ಇತ್ತು!

****

ಅಕ್ಟೋಬರ್ 4

ಬೆಳಗ್ಗೆ 11 ಗಂಟೆಗೆ ವಿಧಾನಸಭೆ ಅಧಿವೇಶನ.

ಮುಖ್ಯಮಂತ್ರಿ ಪೂರ್ವ ಸಿದ್ಧತೆ ಏನು?

ದೇವಾಲಯಗಳಿಗೆ ಹೋಗಿ ವಿಶೇಷ ಪೂಜೆ ಸಲ್ಲಿಸುವುದು!

ಕಾರ್ಯಕರ್ತರು?


ಅವರೂ ದೇವರ ಬಿಡಲಿಲ್ಲ.

ಹರೀಶ ಅನ್ನೋ ಒಬ್ಬ ಎರಡು ದಿವಸ ಸತತವಾಗಿ ಹೋಮ ಮಾಡಿಸಿದನಂತೆ. ಅದೆಂತಹ ಹೋಮವೋ ಗೊತ್ತಿಲ್ಲ.

ಈ ಪೂಜಾ ಕೈಂಕರ್ಯದಿಂದ ದೇವರು ಸಂಪ್ರೀತನಾದ. ಯಡ್ಯೂರಪ್ಪನವರಿಗೆ ಜಯ ಲಭಿಸುವಂತೆ ಮಾಡಿದ!

ವಿಜಯದಿಂದ ಭಾಜಪ ಪುಳಕಿತವಾಯಿತು. ಹೋಮಹವನ ಮಾಡಿದ ಮಠಗಳೂ, ಪ್ರಸಾದವನ್ನು ಕಳುಹಿಸಿದ ದೇವಾಲಯಗಳೂ ಆನಂದತುಂದಿಲಿತವಾದುವು. ಹರೀಶ ಅನ್ನೋ ಮಹಾಶಯ ಲಾಡುಗಳನ್ನು ಹಂಚಿ ಸಂಭ್ರಮಿಸಿದ!

ಯಾರು ಈ ಹರೀಶ ಅನ್ನೊ ಅನಾಮಧೇಯ ವ್ಯಕ್ತಿ ಅಂದರೆ ಯಡ್ಯೂರಪ್ಪ ವಿರುದ್ಧ ಬಂಡಾಯದ ಬಾವುಟ ಹಾರಿಸಿ ಚೆನ್ನೈಗೆ ಹಾರಿದ್ದ ಶಾಸಕ ಮಹಾಶಯರಲ್ಲೊಬ್ಬರಂತೆ! ನಂತರ ಮನಸ್ಸು ಬದಲಿಸಿ ವಾಪಸ್ಸು ಬಂದವರಂತೆ! ಇಂತಹ ಮಹಾನುಭಾವರು ಅತಿಯಾದ ಸಂತೋಷ ತೋರಬೇಕಾದ್ದು ನ್ಯಾಯವೇ ಆಗಿದೆ!



ಪೂಜೆ, ಯಜ್ಞ ಮಾಡಿ ಯಡ್ಯೂರಪ್ಪ ಗೆದ್ದರು!

ಇದು ಅತಿಭ್ರಷ್ಟ ಸರ್ಕಾರ ಅನ್ನೋದು ಜನಜನಿತ. ಇಂತಹ ಭ್ರಷ್ಟರಿಗೇ ದೇವರು ಬೆಂಬಲವಾಗಿದ್ದಾನೆ ಅಂದರೆ... ಇಲ್ಲಿ ದೇವರು ಅನ್ನೋನೇ ಇಲ್ಲ! ಅಥವಾ ಅವನು ಭ್ರಷ್ಟಾನುಭ್ರಷ್ಟ ಇರಬೇಕು!

ವಿನೂತನ ಚಳವಳಿ

ಬಂಗಾರಪ್ಪ ಮುಖ್ಯಮಂತ್ರಿ ಆಗಿದ್ದಾಗ ನಡೆದ ಘ... ನಂಜುಂಡಸ್ವಾಮಿ ರೈತಸಂಘದ ಅಧ್ಯಕ್ಷರಾಗಿದ್ದ... ಸರ್ಕಾರದ ನೀತಿ ರೈತ ವಿರೋಧಿ ಆಗಿತ್ತು; ವಿರೋಧಿ ಆಗಿತ್ತು.

ರೈತರು ಕೆರಳಿ ಕೆಂಡವಾಗಿದ್ದರು.

ತಮ್ಮ ಅಂತರಾಳದ ನೋವು ಸರ್ಕಾರದ ಮೇ... ರೋಷ ಅರಿವಾಗುವಂತೆ ಮಾಡಿ ಚುರುಕು ಮು... ವುದು ಹೇಗೆ?

ನಂಜುಂಡಸ್ವಾಮಿ ಸೂಚಿಸಿದ್ದು-'ನಗು ಚಳವಳಿ'

ರೈತರು ವಿಧಾನಸೌಧದ ಎದುರು ಸೇರಿದರು.

'ಬಂಗಾರಪ್ಪನ್ನ ನೋಡು' ಒಬ್ಬನ ಘೋಷಣೆ.

'ಹಹಹಾ.... ಓಹೊಹೋ' ಎಲ್ಲರ ಅಪಹಾ... ನಗು.

'ಅವನ ದರ್ಬಾರ್ ನೋಡು.'

'ಹಹಹಾ... ಓಹೊಹೋ!

ಹೀಗೇ ಮುಂದುವರೆಯಿತು.

ಈ ವಿನೂತನ ಚಳವಳಿ ವಿಧಾನಸೌಧವನ್ನೇ ತಲ್ಲಣಗೊಳಿಸಿತ್ತು!

ಇದು ಮೊದಲ ಹಂತ.

ಮುಂದಿನ ಹಂತವಾಗಿ 'ಥೂ ಥೂ ಚಳವಳಿ!' ರೈತರು ಸಾಮೂಹಿಕವಾಗಿ ವಿಧಾನಸೌಧಕ್ಕೆ ಕ್ಯಾಕರಿಸಿ ಉಗಿಯುವುದು!

ಕಾರಣಾಂತರಗಳಿಂದ ಇದು ಕಾರ್ಯಗತಗೊಳ್ಳಲಿಲ್ಲ.

ಬಂಗಾರಪ್ಪ ಸರ್ಕಾರವನ್ನೇ ... ರೀತಿ ಅಪಹಾಸ್ಯಕ್ಕೆ ಗುರಿ ಮಾಡಿರುವಾಗ... ಈಗಿನ ಸರ್ಕಾರದ ವಿರುದ್ಧ ಯಾವ ಚಳವಳಿ ಹಮ್ಮಿಕೊಳ್ಳಬಹುದು.

'ನೋಡು ನೋಡು ಯಡ್ಡಿ ... ಅಭಿವೃದ್ಧಿ ನೋಡು

....

'ನೋಡು ನೋಡು ಅಶೋಕನ ಧಿಮಾಕು ನೋಡು'

....

'ನೋಡು ನೋಡು ನಸುಗು... ಆಚಾರಿ ನೋಡು'

....

'ನೋಡು ನೋಡು ಮಂತ್ರಿಗಳ ಮಂಗಾಟ ನೋಡು'

....

ಹೀಗೇ ಮುಂದುವರೆಸಬಹುದು ಆದರೆ....

.... ಗೆ ಭರ್ತಿ ಮಾಡಬೇಕಲ್ಲ ಅದನ್ನ ಯಾವುದರಿ... ತುಂಬಿಸೋದು? 'ಹಹಾಹಾ... ಓಹೊಹೋ... ಇಂದಾನೋ? 'ಥೂ..... ಥೂ' ಇಂದಾನೊ? ಅಥ್ವಾ...

ಕರ್ನಾಟಕ ರಾಜಕಾರಣಿಗಳ ಭ್ರಷ್ಟಾಚಾರಕ್ಕೆ ಮಿತಿಯೇ ಇಲ್ಲವೇ?

ಹೊಗಳಿಕೆ ತೆಗಳಿಕೆ

ಚಿಲಿ ದೇಶದಲ್ಲಿ ಭೂತಾಯಿ 33 ಮಕ್ಕಳನ್ನು ಹಡೆದ ಅದ್ಭುತದ ಆಳ-ಅಗಲ ತಮ್ಮ ಈ ವಾರದ ಸಂಚಿಕೆ ಓದಿದಾಗಲೇ ಅರ್ಥವಾಗಿದ್ದು, ತಾವೆಂದಂತೆ ಭಾರತೀಯ ಮಾಧ್ಯಮಗಳು ಈ ವಿಷಯಕ್ಕೆ ಸ್ವಲ್ಪವೂ ಪ್ರಾಮುಖ್ಯತೆ ಕೊಡದೇ ಕ್ರಿಕೆಟ್, ರಾಜಕೀಯಕ್ಕೆ ಆದ್ಯತೆ ಕೊಟ್ಟಿದ್ದು ನಮಗೆ ಮಾನವೀಯ ವಿಷಯಗಳು ಗೌಣ ಎಂಬುದಕ್ಕೆ ಸಾಕ್ಷಿ. ಇಷ್ಟೇ ಏಕೆ, ಜಗತ್ತಿನಲ್ಲೆಲ್ಲಾ ತಾವೇ ಅತೀಹೆಚ್ಚು ಸುಸಂಸ್ಕೃತರು, ಅತಿಹೆಚ್ಚು ಮಾನವೀಯತೆ ಉಳ್ಳವರು ಎಂದು ಭಾರತೀಯ ವಿದ್ವಾಂತರು ಹೇಳಿಕೊಳ್ಳುತ್ತಾರೆ. ಆದರೆ ನಿಜದಲ್ಲಿ ಹಾಗಿಲ್ಲ ಎಂಬುದಕ್ಕೆ ನಮ್ಮದೇ ಸಾಕ್ಷಿಗಳೆಂದರೆ-ಉತ್ತರ ಕರ್ನಾಟಕದ ನೆರೆಸಂತ್ರಸ್ತರಿಗೆ ಪರಿಹಾರದಲ್ಲಿ ಆದ ದುರ್ಗತಿ, ಭ್ರಷ್ಟಾಚಾರ ಹಾಗೂ ಅಮಾನವೀಯ ಜಾತಿ ವ್ಯವಸ್ಥೆಗಳನ್ನು ಇಂದಿಗೂ ನಾವು ಪೋಷಿಸಿಕೊಂಡು ಬಂದಿರುವುದು. ಹಾಗಿರುವಾಗ ಚಿಲಿ ದೇಶದ 33 ಜನರ ಜೀವನ್ಮರಣದ ಪ್ರಶ್ನೆ ನಮಗೆ ಯಾವ ಲೆಕ್ಕ!

ಕರ್ನಾಟಕದಲ್ಲಿ ವಿಶ್ವಾಸಮತದ ಪ್ರಹಸನ ನಡೆಯುತ್ತಿದ್ದ ವೇಳೆ ನಾನು ಕಾರ್ಯನಿಮಿತ್ತ ಮುಂಬೈಗೆ ಹೋಗಿದ್ದೆ. ಅಲ್ಲಿ ನನ್ನ ಹಳೆಯ ಷೇರ್-ಬ್ರೋಕರ್ ಮಿತ್ರ ಸಿಕ್ಕಿದ್ದನು. ಕರ್ನಾಟಕದ ರಾಜಕೀಯದ ವಿಷಯ ಬಂದಾಗ ಆ ಬ್ರೋಕರ್ ಹೇಳಿದ್ದು-ಕರ್ನಾಟಕದಿಂದ ದಂಡಿಯಾಗಿ ರಾಜಕಾರಣಿಗಳ ಕಳ್ಳಹಣ ಮುಂಬೈ ಷೇರ್ ಮಾರ್ಕೆಟ್‌ಗೆ ಲಗ್ಗೆ ಇಟ್ಟಿರುವುದೇ, ಹಿಂದಿನ ಒಂದು ವರ್ಷದಲ್ಲಿ ಷೇರ್ ಇಂಡೆಕ್ಸ್ 14,000 ದಿಂದ 20,000 ಕ್ಕೆ ಏರಲು ಮುಖ್ಯ ಕಾರಣಗಳಲ್ಲೊಂದು. ಹಾಗಾಗಿ ಕರ್ನಾಟಕದಲ್ಲಿ ಮಧ್ಯಂತರ ಚುನಾವಣೆ ಏನಾದರೂ ಡಿಕ್ಲೇರ್ ಆದರೆ, ಚುನಾವಣೆ ಖರ್ಚಿಗಾಗಿ ಇಷ್ಟೊಂದು ಬೃಹತ್ ಹೂಡಿಕೆಯನ್ನು ಹಿಂತೆಗೆಯುವುದು ಅನಿವಾರ್ಯವಾದರೆ, ಷೇರ್ ಮಾರ್ಕೆಟ್ ಕನಿಷ್ಠ 3000 ಪಾಯಿಂಟ್ ಉರುಳುವುದು ಖಂಡಿತ ಎನ್ನುತ್ತಾನೆ ಆ ಮುಂಬೈ ಬ್ರೋಕರ್. ಇದರಿಂದ ಅರಿವಾಗುತ್ತದೆ, ತಾವೆಂದಂತೆ ಯಡ್ಡಿ ಮತ್ತೂ ಕಂಪನಿ ರೂ. 10 ಸಾವಿರ ಕೋಟಿಗೂ ಮಿಕ್ಕಿ ಕಳ್ಳ ಹಣ ತಮ್ಮ ಮಾರ್ವಾಡಿ ಬ್ರೋಕರ್ (ಸೊಸೆಯನ್ನು ಕೊಂದ ಲೆಹರ್ ಸಿಂಗ್) ಮೂಲಕ ಮುಂಬೈ ಷೇರ್ ಮಾರ್ಕೆಟ್‌ನಲ್ಲಿ ಹೂಡಿದ್ದು ನಿಜ.

ನನ್ನ ಲಿಂಗಾಯತ ಸಹೋದ್ಯೋಗಿಯೊಬ್ಬನ ತರ್ಕಪೂರ್ಣ ವಾದವೇನೆಂದರೆ, ಯಡ್ಡಿಯ ಸರ್ಕಾರವನ್ನು ರಾಷ್ಟ್ರಪತಿ ವಜಾ ಮಾಡಿದ್ದರೆ ಲಿಂಗಾಯತ ಮತದಾರರೆಲ್ಲಾ ಕಾಂಗ್ರೆಸ್ ವಿರುದ್ಧ ತಿರುಗಿ ಬೀಳುತ್ತಿದ್ದರೆಂಬ ಕಾಂಗ್ರೆಸ್ ನೇತಾರರ ಲೆಕ್ಕಾಚಾರವೇ ತಪ್ಪು. ತಮ್ಮ ಸಮಾಜಕ್ಕೆ ಯಾವುದೇ ರೀತಿಯಲ್ಲಿ ಉಪಕಾರ ಮಾಡದವನನ್ನು, ಅವನು ಕೇವಲ ತಮ್ಮ ಜಾತಿಯವನೆಂದು ಯಾರೂ ಅಭಿಮಾನ ತೋರಿಸುವುದಿಲ್ಲ. ಕಳೆದ ವರ್ಷದ ಉತ್ತರ ಕರ್ನಾಟಕದ ನೆರೆಸಂತ್ರಸ್ತರಲ್ಲಿ 40% ಸಂತ್ರಸ್ತರು ಲಿಂಗಾಯತರೇ ಆಗಿದ್ದರು. ಆಗ ಈ ಯಡ್ಡಿ ತನ್ನ ಜಾತಿಯ ಅಭಿಮಾನ ತೋರಿ ಅವರಿಗೇನಾದರೂ ಸಹಾಯ ಮಾಡಿದರೇ? ಬದುಕಿಗೆ ದಾರಿ ತೋರಿದರೇ? ಇಲ್ಲ! ಹಾಗಿರುವಾಗ ಈ ನೆರೆಸಂತ್ರಸ್ತರೇಕೆ ಮುಂದಿನ ಚುನಾವಣೆಯಲ್ಲಿ ಯಡ್ಡಿಯ ಬಗ್ಗೆ ಜಾತಿ ಅಭಿಮಾನ ತೋರುತ್ತಾರೆ? ಅಭಿಮಾನವೆಂದರೆ ಅದೇನು ವನ್-ವೇ-ಟ್ರಾಫಿಕ್ಕೇ?

ಕಿತ್ತೂರು ಚೆನ್ನಮ್ಮ ಲಿಂಗಾಯತಳಾಗಿದ್ದರೂ ಅವಳಿಗೆ ಮೋಸ ಮಾಡಿ ಬ್ರಿಟಿಷರಿಗೆ ಸಹಾಯ ಮಾಡಿದ ಹೇಡಿ ಮಲ್ಲಪ್ಪ ಸೆಟ್ಟಿ ಸಹ ಲಿಂಗಾಯತನೇ (ಬಣಜಿಗ) ಆಗಿದ್ದ. ಈಗಿನ ಯಡ್ಡಿ ಸಹ ಬಣಜಿಗ. ಬೆಳಗಾವಿ ಜಿಲ್ಲೆಯ ಉಳಿದ ಲಿಂಗಾಯತರು ಬಣಜಿಗರನ್ನು ಈಗಲೂ ನಂಬುವುದಿಲ್ಲ ಎಂದ ಮಾತ್ರಕ್ಕೆ ಕರ್ನಾಟಕದ ಉಳಿದ ಜಿಲ್ಲೆಗಳಲ್ಲಿ ಬಣಜಿಗರನ... ಉಳಿದ ಲಿಂಗಾಯತರು ದ್ವೇಷಿಸುತ್ತಾರೆಯೇ? ಇಲ್ಲ. ಇದೇ ರೀತಿ ಜಾತಿಯ ಅಭಿಮಾ... ಅಥವಾ ಪೂರ್ವಗ್ರಹಗಳು ಸಾಮೂಹಿಕವಲ್ಲ, ಶಾಶ್ವತವಲ್ಲ. ಅವು ವ್ಯಕ್ತಿಗನುಗುಣವಾ... ಪ್ರದೇಶಕ್ಕನುಗುಣವಾಗಿ, ಸಂದರ್ಭಕ್ಕನುಗುಣವಾಗಿ ಬದಲಾಗುತ್ತಾ ಹೋಗುತ್ತವೆ ಎನ್ನುವುದ... ನನ್ನ ಸಹೋದ್ಯೋಗಿಯ ವಾದ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂ...

ಗೌರಿ ಲಂಕೇಶರ 'ಭೂತಾಯಿ 33 ಮಕ್ಕಳನ್ನು ಹಡೆದಾಗ' ಸಂಪಾದಕೀ... ಲೇಖನ ಬಹಳ ಅದ್ಭುತವಾಗಿತ್ತು. 33 ಮಕ್ಕಳನ್ನು ಹಡೆದ ಭೂತಾಯಿಗೆ ನಾ... ಋಣಿಯಾಗಿರಬೇಕು. ಮನುಷ್ಯನ ಕ್ರಿಯಾಶೀಲತೆಗೆ ಕೊನೆಯಿಲ್ಲ, ಮನುಷ್ಯನಿಗೆ ಸೋಲ... ಎಂಬುವುದು ಇಲ್ಲವೆ ಇಲ್ಲ, ಸೋಲು ಎಂದು ಭಾವಿಸುವ ಕ್ಷಣಗಳೆಲ್ಲ ಕಲಿಯು... ಸಂದರ್ಭಗಳೆ ಆಗಿರುತ್ತವೆ. ಲೇಖನ ಮಾನವೀಯತೆಗೆ ಸಾಕ್ಷಿಯಾಗಿದೆ.

- ಎಸ್.ಎನ್. ಅಮೃತ್ ಕುಮಾರ್, ಈ-ಮೇಲ್ ಮೂಲ...

ದಯವಿಟ್ಟು ಈ ಕೆಲಸಕ್ಕೆ ಬಾರದ ಸಿನಿಮಾ ಬಗ್ಗೆ ಎರಡೆರಡು ಪುಟ ವೇಸ್... ಮಾಡಬೇಡಿ. ಅದರ ಬದಲು ಈ ರಾಜಕೀಯ ಶನಿಯ ಬಗ್ಗೆ ಜನರನ್ನು ಜಾಗೃತಗೊಳಿಸಲ... ಆ ಎರಡು ಪುಟಗಳನ್ನು ಬಳಸಿಕೊಳ್ಳಬಹುದಿತ್ತು. ಪುನೀತ್ ಗೆಲ್ಲಲಿ, ಸುದೀಪ್ ಗೆಲ್ಲಲಿ... ಜನಸಾಮಾನ್ಯನಿಗೇನು ಅದರಿಂದ? ಸಿನಿಮಾ ಮಾಧ್ಯಮದಿಂದ ಜನ ಹಾಳಾಗಿರೋದ... ಸಾಕು. ಅದಕ್ಕಿಂತ ಜನರನ್ನ ಹೇಗೆ ಸಿನಿಮಾ ಹಾಳು ಮಾಡುತ್ತದೆ ಅಂತ ವಾರಕ್ಕೊಂದ... ಲೇಖನ ಪ್ರಕಟಿಸಿ.

- ರಂಗಸ್ವಾಮಿ, ಮೈಸೂರು, ಎಸ್ಸೆಮ್ಮೆಸ್ ಮೂಲ...

'ಜಾಕಿ' ಆಟದಲ್ಲಿ ಪುನೀತ್-ಸೂರಿ ಜಾಕ್ ಪಾಟ್ ಲೇಖನ ಚೆನ್ನಾಗಿದೆ. ವಜ್ರೇಶ್ವ... ಕಂಬೈನ್ಸ್‌ನವರ ಚಿಂತನೆ ವ್ಯಾವಹಾರಿಕವಾಗಿದೆ. ನಾಯಕಿ ಭಾವನ-ಪುನೀತ್ ಜೋ... ಯಶಸ್ವಿಯಾಗಲಿ.


- ಅಮೃತ ಚಿಕ್ಕಬಳ್ಳಾಪುರ, ಈ ಮೇಲ್ ಮೂಲ...

ನಾಲ್ಕು ಗೆಲುವು ಹತ್ತು ಹೊಸ ಹುಮ್ಮಸ್ಸು

...ಗರದ ನಿರ್ಮಾಪಕರ ಮತ್ತು ಹಂಚಿಕೆದಾರರ ...ಈಗ ಒಂದಿಷ್ಟು ನಗು ಕಾಣಿಸುತ್ತಿದೆ. ಇದಕ್ಕೆ ...ಟಿಗೆ ಕೆಲವು ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಬಾರಿಸಿರುವುದು. ಒಂದೆಡೆ ಹಳೇ ...ರ ಚಿತ್ರ ಗೆದ್ದಿದ್ದರೆ, ಇನ್ನೊಂದೆಡೆ ಹೊಸ ಚಿತ್ರಗಳನ್ನೂ ಪ್ರೇಕ್ಷಕರು ಸ್ವಾಗತಿಸಿರುವುದು ...ದ ಬೆಳವಣಿಗೆ. ಇದು ಉದ್ಯಮ ಚೇತರಿಸಲು ...ಗಿದೆ ಎನ್ನುತ್ತಾರೆ ನಿರ್ಮಾಪಕರು.


...ಚಿತ್ರ ಜಾಕ್‌ಪಾಟ್

...ತದ, ಗಾಂಧಿನಗರದಲ್ಲಿ ...ಯ ಚೇತೋಹಾರಿ ...ಕಾಣಿಸುತ್ತಿದೆ. ಇದಕ್ಕೆ ...' ಅತ್ಯಂತ ದುಬಾರಿ ...ರ್ಮಾಣವಾಗಿದ್ದರಿಂದ ...ದ ಬಂಡವಾಳ ವಾಪಸ್ಸು ...ಎಂಬ ಸಂಶಯ ...ದ್ದೇ ಇತ್ತು. ಈಗ ...ಈ ಚಿತ್ರವನ್ನು ...ಹಂಚಿಕೆದಾರರೆಲ್ಲಾ ಹಣ ಗ್ಯಾರಂಟಿಯಾಗಿದೆ.




...ಂತ ಮೊದಲು ಗಾಂಧಿನಗರದ ಜನ ಭಟ್ಟರ 'ಪಂಚರಂಗಿ' ಚಿತ್ರದ ಬಗ್ಗೆಯೂ ...ಯ ಡೌಟ್ ವ್ಯಕ್ತಪಡಿಸಿದ್ದರು. ಅಮೂಲ್ ...ದುವ ದಿಗಂತ್ ಎಂಬ ನಾಯಕ ಎಷ್ಟರಮಟ್ಟಿಗೆ ...ಕರ್ಷಿಸುತ್ತಾನೋ ಎಂಬ ಸಂಶಯವಂತೂ ...ದಲ್ಲಿತ್ತು. ಆತ ಫುಲ್‌ಲೆನ್ತ್ ಹೀರೋಆಗಿ ...ಮು ಕಷ್ಟದ ವಿಷಯ ಎಂದೇ ಆತನ ಬಗ್ಗೆ ...ಬಂದಿತ್ತು. ಆದರೆ 'ಪಂಚರಂಗಿ' ತೆರೆಕಂಡಿದ್ದೇ ...ಗರದ ಚಿತ್ರ ಬ್ರಹ್ಮರ ಟೀಕೆಗಳಿಗೆ ಉತ್ತರವೆಂಬಂತೆ ...ಹೌಸ್‌ಫುಲ್ ಪ್ರದರ್ಶನ ಕಂಡಿತು. ದಿಗಂತ್‌ಗೆ ...ಬಸೆಗಳ ಸುರಿಮಳೆಯಾದವು. ಈಗ ಫುಲ್‌ಲೆನ್ತ್ ಹೀರೋ ಆಗುವ ಅವಕಾಶಗಳು ಆತನನ್ನು ಹುಡುಕಿಕೊಂಡು ಬರುತ್ತಿವೆ. 'ಪಂಚರಂಗಿ' ಚಿತ್ರ ಬಿಡುಗಡೆಯಾದ ಸಂದರ್ಭದಲ್ಲಿ ಬೇರೆ ಯಾವುದೇ ದೊಡ್ಡ ಚಿತ್ರ ತೆರೆ ಕಾಣದಿದ್ದೂ ಆ ಚಿತ್ರಕ್ಕೆ ಲಾಭವಾಯಿತು ಎಂಬುದು ಕೂಡಾ ನಿಜ. ಈ ಚಿತ್ರದ ಬಾಕ್ಸಾಫೀಸ್ ಕಲೆಕ್ಷನ್ ಈಗ ಹೊಸ ನಾಯಕ-ನಾಯಕಿಯರಾದ ದಿಗಂತ್-ನಿಧಿ ಸುಬ್ಬಯ್ಯರಿಗೆ ತಾರಾಮೌಲ್ಯ ತಂದುಕೊಟ್ಟಿದೆ.

ಇದೇರೀತಿ ಸಾರ್ವಜನಿಕರ ಅಪನಂಬಿಕೆಗೆ ಒಳಗಾಗಿದ್ದ ಮತ್ತೊಂದು ಚಿತ್ರವೆಂದರೆ ಶಶಾಂಕ್ ನಿರ್ದೇಶನದ 'ಕೃಷ್ಣನ್ ಲವ್ ಸ್ಟೋರಿ'. ಈ ಚಿತ್ರದಲ್ಲಿ ಅಜಯ್ ಮತ್ತು ರಾಧಿಕಾ ಪಂಡಿತ್ ನಾಯಕ-ನಾಯಕಿಯರು. ಗಾಂಧಿನಗರದ ಹಂಚಿಕೆದಾರರ ದೃಷ್ಟಿಯಲ್ಲಿ ಇವರಿಬ್ಬರೂ ಥಿಯೇಟರ್‌ಗೆ ಜನರನ್ನು ಆಕರ್ಷಿಸುವ ದೊಡ್ಡ ತಾರೆಯರಲ್ಲ. ಹೀಗಾಗಿ ಈ ಚಿತ್ರದ ಯಶಸ್ಸಿನ ಬಗ್ಗೆ ಅನೇಕರಿಗೆ ಡೌಟ್‌ಗಳಿದ್ದವು. ಆದರೆ 'ಕೃಷ್ಣನ್ ಲವ್ ಸ್ಟೋರಿ' ಎಲ್ಲರ ನಿರೀಕ್ಷೆ ಮತ್ತು ಸಂಶಯವನ್ನು ಹುಸಿಗೊಳಿಸಿ ಭರ್ಜರಿ ಯಶಸ್ಸು ಗಳಿಸಿತು. ಅಷ್ಟೇ ಅಲ್ಲ, 'ಕೃಷ್ಣ' ಭರ್ಜರಿಯಾಗಿ ಸೆಂಚುರಿಯನ್ನು ಬಾರಿಸಿಬಿಟ್ಟ. ನಾಯಕ ಅಜಯ್ ಮತ್ತು ನಾಯಕಿ ರಾಧಿಕಾ ಪಂಡಿತ್‌ರ ಕಾಲ್‌ಶೀಟ್‌ಗಾಗಿ ಈಗ ನಿರ್ದೇಶಕರು ಓಡಾಡುತ್ತಿದ್ದಾರೆ.



ಗಾಂಧಿನಗರದಲ್ಲಿ ಹೀಗೆ ಜಯಭೇರಿ ಬಾರಿಸುವ ಚಿತ್ರಗಳಿಗೆ ಮುನ್ನುಡಿ ಬರೆದದ್ದು ವಾಸು ನಿರ್ದೇಶನದ 'ಆಪ್ತರಕ್ಷಕ'. ಸಾಹಸ ಸಿಂಹ ವಿಷ್ಣುವರ್ಧನ್ ನಟಿಸಿದ ಕೊನೆಯ ಚಿತ್ರವಾದ 'ಆಪ್ತರಕ್ಷಕ' ಬಗ್ಗೆ ಇಡೀ ಉದ್ಯಮ ಮಾತ್ರವಲ್ಲ, ಕರ್ನಾಟಕದ ಜನತೆ ಕೂಡಾ ದೊಡ್ಡ ನಿರೀಕ್ಷೆಯನ್ನಿಟ್ಟುಕೊಂಡಿತ್ತು. ಈ ಚಿತ್ರ ಕೂಡಾ ವಿಷ್ಣು-ವಾಸು ಜೋಡಿಯ 'ಆಪ್ತಮಿತ್ರ'ದ ರೀತಿಯಲ್ಲೇ ಜಯಭೇರಿ ಬಾರಿಸಬಹುದು ಎಂಬ ಲೆಕ್ಕಾಚಾರ ಇದ್ದರೂ ಕೂಡಾ ನಿರ್ಮಾಪಕನ ಮುಖದಲ್ಲಿ ಆತಂಕ ಇದ್ದೇ ಇತ್ತು. ಇದಕ್ಕೆ ಕಾರಣ 'ಆಪ್ತಮಿತ್ರ'ಕ್ಕಿಂತಲೂ 'ಆಪ್ತರಕ್ಷಕ' ಚಿತ್ರ ದುಬಾರಿ ವೆಚ್ಚದಲ್ಲಿ ನಿರ್ಮಿಸಲ್ಪಟ್ಟಿತ್ತು. ಹೀಗಾಗಿ ಚಿತ್ರ ಕೊಂಡುಕೊಳ್ಳಲು ಹಂಚಿಕೆದಾರರು ಸ್ವಲ್ಪ ಹಿಂದೆಮುಂದೆ ನೋಡುತ್ತಿದ್ದರು. ಆದರೆ 'ಆಪ್ತರಕ್ಷಕ' ಇಪ್ಪತ್ತೈದು ವಾರಗಳ ಕಾಲ ತುಂಬಿದ ಪ್ರದರ್ಶನ ಕಂಡು ಬಾಕ್ಸಾಫೀಸ್‌ನಲ್ಲಿ ಹಣವನ್ನು ಕೊಳ್ಳೆಹೊಡೆಯಿತು. ಇತ್ತೀಚಿನ ವರ್ಷಗಳಲ್ಲಿ ಚಿತ್ರವೊಂದು ಈ ರೀತಿ ರಾಜ್ಯಾದ್ಯಂತ ಯಶಸ್ಸು ಕಂಡಿದ್ದೇ ಇಲ್ಲ.

ಹೀಗೆ ಈ ನಾಲ್ಕು ಚಿತ್ರಗಳ ಯಶಸ್ಸು ಗಾಂಧಿನಗರದಲ್ಲಿ ಬಿಗುವಾಗಿದ್ದ ವಾತಾವರಣವನ್ನು ಬದಲಾಯಿಸಿದೆ. ಒಂದು ವಿಶೇಷವೆಂದರೆ ಈ ನಾಲ್ಕೂ ಚಿತ್ರಗಳ ನಿರ್ದೇಶಕರುಗಳು ಗಾಂಧಿನಗರದಲ್ಲಿ ಸ್ವಲ್ಪ ಸೆನ್ಸಿಟಿವ್ ಎಂದೆನಿಸಿಕೊಂಡವರು. ಹೀಗಾಗಿ ಯೋಗರಾಜ್ ಭಟ್, ಸೂರಿ, ವಾಸು, ಮತ್ತು ಶಶಾಂಕ್ ನೇರವಾಗಿ ತಮ್ಮ ಚಿತ್ರಗಳ ಯಶಸ್ಸಿಗೆ ಕಾರಣರಾಗುತ್ತಾರೆ. ಇದರ ಅರ್ಥ ಇನ್ನೂ ನಮ್ಮಲ್ಲಿ ಪ್ರೇಕ್ಷಕರು 'ಚಿತ್ರದ ನಿರ್ದೇಶಕರು ಯಾರು?' ಎಂದು ನೋಡಿಕೊಂಡೇ ಸಿನಿಮಾಕ್ಕೆ ಬರುತ್ತಾರೆ ಎಂದಾಯ್ತು.



ಮತ್ತೊಂದು ಸಂತೋಷದ ವಿಷಯವೆಂದರೆ ಅಜಯ್, ರಾಧಿಕಾ ಪಂಡಿತ್, ದಿಗಂತ್ ಮತ್ತು ನಿಧಿ ಸುಬ್ಬಯ್ಯ ಮೊದಲಾದಂತಹ ಹೊಸ ತಲೆಮಾರಿನ ಕಲಾವಿದರನ್ನು ಪ್ರೇಕ್ಷಕರು ಅಪ್ಪಿಕೊಂಡಿರುವುದು. ಅಂದರೆ ಸ್ಟಾರ್ ನಟನಟಿಯರಿಗೆ ಕೋಟಿಕೋಟಿ ಸಂಭಾವನೆ ನೀಡಿ ಚಿತ್ರ ಮಾಡಿ ಕೈಸುಟ್ಟುಕೊಳ್ಳುವ ಬದಲು ಇಂತಹ ಹೊಸ ಕಲಾವಿದರನ್ನು ಹಾಕಿಕೊಂಡು ಸಿನಿಮಾ ಮಾಡಿ ಗೆಲ್ಲುವುದು ಕೂಡಾ ಸಾಧ್ಯ ಎಂಬ ಅಂಶ ಎದ್ದುಕಾಣಿಸುತ್ತಿದೆ.

ಅದೆಲ್ಲಾ ಲೆಕ್ಕಾಚಾರ ಏನೇ ಆಗಿದ್ದರೂ ಅಂತಿಮವಾಗಿ ಗೆಲುವು ಎಂಬುದಷ್ಟೇ ಮುಖ್ಯವಾಗುತ್ತದೆ. ಆ ನಿಟ್ಟಿನಲ್ಲಿ ಈ ನಾಲ್ಕು ಸಿನಿಮಾಗಳ ಗೆಲುವು ಮುಂದಿನ ದಿನಗಳಲ್ಲಿ ಕನಸುಗಳನ್ನು ಮಾರುವ ಗಾಂಧಿನಗರದ ಜನರಲ್ಲಿ ಇನ್ನಷ್ಟು ಉತ್ಸಾಹ-ಹುಮ್ಮಸ್ಸು ಸೃಷ್ಟಿಸಲಿ.

• ಶೆಣೈ


...ೇಂಬರ್ ಡಬಲ್‌ಗೇಮ್ ಚೆಲ್ಲಾಟ

...ಚಿತ್ರರಂಗದಲ್ಲಿ ಹೊಸ ಸಮಸ್ಯೆಯೊಂದು ತಲೆಯೆತ್ತಿದೆ. ಈ ಬಗ್ಗೆ ...ಧ್ಯಕ್ಷ ಬಸಂತಕುಮಾರ್ ಪಾಟೀಲ್ ಮತ್ತು ನಿರ್ಮಾಪಕ ಸಂಘದ ...ಎನ್.ಚಂದ್ರು ತಲೆಕೆಡಿಸಿಕೊಂಡಿದ್ದಾರೆ.


...ಏನೆಂದರೆ ಈಗಾಗಲೇ ಛೇಂಬರ್ ಸಾರಿರುವ ಪರಭಾಷಾ ...ದ್ಧದ ಹೋರಾಟ ದಿನದಿಂದ ದಿನಕ್ಕೆ ನಿಶಕ್ತಗೊಳ್ಳುತ್ತಿದೆ. ಈ ...ಬಗ್ಗೆ ಕನ್ನಡ ಚಿತ್ರೋದ್ಯಮದಲ್ಲೇ ಭಿನ್ನಾಭಿಪ್ರಾಯಗಳು ಮೂಡುತ್ತಿವೆ. ...ಟ್ಟೊಬ್ಬ ನಿರ್ಮಾಪಕರೂ ತಮ್ಮ ಜಾಣ್ಮೆಯನ್ನು ...ೇಂಬರ್ ಕಾನೂನನ್ನು ಮುರಿಯುತ್ತಿದ್ದಾರೆ. ಈ ...ಭಾಷಾ ಚಿತ್ರಗಳ ವಿರುದ್ಧದ ಸಮರಕ್ಕೆ ಬೆಂಬಲ ...ಕ್ತಿಗಳೇ ಈಗ ಈ ಹೋರಾಟದ ಬಗ್ಗೆ ಅಪಸ್ವರ ...ಸಿದ್ದಾರೆ.

...ಬಸಂತಕುಮಾರ್ ಪಾಟೀಲ್ ಮತ್ತು ...ದ್ರು ಪಾಲಿಗೆ ಈ ಹೋರಾಟ ಈಗ ನುಂಗಲಾರದ ...ಆದ್ದರಿಂದ ಈ ಹೋರಾಟವನ್ನು ಯಾವ ರೀತಿ ...ಸಬೇಕು ಎಂಬುದರ ಬಗ್ಗೆ ಚಂದ್ರು ಉದ್ಯಮದ ...ರ ವೈಯಕ್ತಿಕ ಅಭಿಪ್ರಾಯಗಳನ್ನು ಸಂಗ್ರಹಿಸಲು ...ರೆ.

...ಈ ಗೊಂದಲಕ್ಕೆ ಕಾರಣ ಪುನೀತ್ ರಾಜ್‌ಕುಮಾರ್ ...ಕಿ' ಮತ್ತು ರಜನಿಕಾಂತ್ ನಟಿಸಿದ 'ಎಂದಿರನ್'




...ಗೊತ್ತಿರುವಂತೆ ರಿಲಾಯನ್ಸ್ ಸಂಸ್ಥೆ ನಿರ್ಮಾಣದ 'ಕೈಟ್ಸ್' ...ರಣ' ಚಿತ್ರಗಳನ್ನು ಛೇಂಬರ್ ನಿಗದಿಪಡಿಸಿದ್ದಕ್ಕಿಂತಲೂ ಹೆಚ್ಚು ...ಗಳಲ್ಲಿ ಬಿಡುಗಡೆ ಮಾಡಿದ್ದಕ್ಕೆ ಬಸಂತಕುಮಾರ್ ಪಾಟೀಲ್ ...ಡ ಆ ಥಿಯೇಟರ್‌ಗಳ ಮೇಲೆ ದಾಳಿ ಮಾಡಿ ಆ ಚಿತ್ರಗಳ ...ವಶಪಡಿಸಿಕೊಂಡಿದ್ದರು. ಆದರೆ ಅದೇ ಬಸಂತ ಮತ್ತವರ ...ನಿಕಾಂತ್ ನಟಿಸಿದ 'ಎಂದಿರನ್' ಚಿತ್ರ ಕೂಡ ಛೇಂಬರ್ ...ಹೆಚ್ಚು ಥಿಯೇಟರ್‌ಗಳಲ್ಲಿ ಬಿಡುಗಡೆಯಾದಾಗ ಕಣ್ಮುಚ್ಚಿ ...ಮಾತ್ರವಲ್ಲ, ಛೇಂಬರ್‌ನ ಯಾವೊಬ್ಬ ಪದಾಧಿ ...ಎಂದಿರನ್' ವಿರುದ್ಧ ತುಟಿಪಿಟಿಕ್ ಎನ್ನಲಿಲ್ಲ. ...ಚಲನಚಿತ್ರ ವಾಣಿಜ್ಯ ಮಂಡಳಿಯು ಪರಭಾಷಾ ...ರುದ್ಧದ ಸಮರದಲ್ಲಿ ಒಂದು ಕಣ್ಣಿಗೆ ಸುಣ್ಣ ...ಕಣ್ಣಿಗೆ ಬೆಣ್ಣೆ ಮೆತ್ತುತ್ತಿರುವುದು ಮೇಲ್ನೋಟಕ್ಕೆ ...ೋಚರಿಸುತ್ತದೆ. ಈ ಹಿನ್ನೆಲೆಯಲ್ಲಿ ರಿಲಾಯನ್ಸ್ ...ಛೇಂಬರ್ ವಿರುದ್ಧ ಕೋರ್ಟ್‌ನಲ್ಲಿ 25 ಕೋಟಿ ...ವೆಯನ್ನು ಹೂಡಿದೆ.



...ಂದೆ ರಿಲಾಯನ್ಸ್ ಒಡೆತನದ ಯಾವುದೇ ...ಕನ್ನಡ ಚಿತ್ರಗಳ ನಿರ್ಮಾಪಕರು ತಮ್ಮ ಸಿನಿಮಾಗಳನ್ನು ...ಎಂದು ಛೇಂಬರ್ ಒಂದು ನಿರ್ಧಾರವನ್ನು ಕೈಗೊಂಡಿತ್ತು ...ಛೇಂಬರ್ ಅಧ್ಯಕ್ಷ ಪಾಟೀಲರು 'ವಿಪ್' ಅನ್ನೂ ಹೊರಡಿಸಿದ್ದರು. ...ಜಾಕಿ' ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ಮತ್ತು ...ರು ಪಾಟೀಲರ 'ವಿಪ್' ಅನ್ನು ಮುರಿದು 'ಜಾಕಿ'ಯನ್ನು ...ಒಡೆತನದ ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡಿದ್ದಾರೆ.


ಇದರ ಬಗ್ಗೆ ಪ್ರಶ್ನಿಸಿದಾಗ "ಇದು ತಿಳಿಯದೇ ಆದ ಪ್ರಮಾದ. ಈಗ ಆ ಥಿಯೇಟರ್‌ಗಳಿಂದ ಆ ಚಿತ್ರಗಳನ್ನು ಹಿಂತೆಗೆದುಕೊಳ್ಳಲಾಗಿದೆ" ಎಂದು ನಿರ್ಮಾಪಕರ ಸಂಘದ ಅಧ್ಯಕ್ಷ ಚಂದ್ರು ಈಗ ಸ್ಪಷ್ಟೀಕರಣ ನೀಡಿದ್ದಾರೆ. ರಾಘವೇಂದ್ರ ರಾಜ್‌ಕುಮಾರ್ ಕೂಡಾ ಅದೇ ಮಾತನ್ನು ಹೇಳಿದ್ದಾರೆ. ಆದರೆ ಉದ್ಯಮದ ಕೆಲವು ನಿರ್ಮಾಪಕರ ಪ್ರಕಾರ ರಿಲಾಯನ್ಸ್ ಮಾಲೀಕತ್ವದ ಎಲ್ಲಾ ಥಿಯೇಟರ್‌ಗಳಿಂದ 'ಜಾಕಿ'ಯನ್ನು ಹಿಂದೆ ಪಡೆದಿಲ್ಲವಂತೆ.

ಆದ್ದರಿಂದ ಇನ್ನು ಮುಂದೆ ನಮ್ಮ ಚಿತ್ರಗಳಿಗೂ ರಿಲಾಯನ್ಸ್ ಒಡೆತನದ ಥಿಯೇಟರ್‌ಗಳಲ್ಲಿ ರಿಲೀಜ್ ಮಾಡಲು ಅವಕಾಶ ನೀಡಬೇಕೆಂದು ಇತರೆ ನಿರ್ಮಾಪಕರು ಈಗ ಪಾಟೀಲರು ಮತ್ತು ಚಂದ್ರು ಮುಂದೆ ಹಕ್ಕೊತ್ತಾಯ ಮಾಡಿದ್ದಾರೆ. "ಮೊದಲೇ ಕರ್ನಾಟಕದಲ್ಲಿ ಥಿಯೇಟರ್‌ಗಳ ಸಂಖ್ಯೆಯೇ ಕಡಿಮೆ ಇರುವುದರಿಂದ ಇಂತಿಂತಹ ಥಿಯೇಟರ್‌ಗಳಲ್ಲಿ ನಿಮ್ಮ ಚಿತ್ರ ಬಿಡುಗಡೆ ಮಾಡಬೇಡಿ ಎಂದು ಹೇಳುವುದು ಸರಿಯಲ್ಲ" ಎಂದು ಛೇಂಬರ್ ವಿರುದ್ಧ ನಿರ್ಮಾಪಕರು ತಿರುಗಿ ಬಿದ್ದಿದ್ದಾರೆ.



ರಿಲಾಯನ್ಸ್ ಚಿತ್ರಮಂದಿರಗಳನ್ನು ನಿರ್ಬಂಧಿಸಿದರು ಬಗ್ಗೆ ರಾಘವೇಂದ್ರ ರಾಜ್‌ಕುಮಾರ್ "ರಿಲಾಯನ್ಸ್‌ನವರದ್ದು ದೊಡ್ಡ ಸಂಸ್ಥೆ. ಪ್ರಪಂಚಾದ್ಯಂತ ಅವರ ಥಿಯೇಟರ್‌ಗಳ ನೆಟ್‌ವರ್ಕ್ ಇದೆ. ಇದನ್ನು ನಾವು ನಿರ್ಬಂಧಿಸಿದರೆ ವಿಶ್ವಾದ್ಯಂತ ಕನ್ನಡ ಚಿತ್ರವನ್ನು ಬಿಡುಗಡೆ ಮಾಡುವ ಅವಕಾಶವನ್ನು ನಾವೇ ಕಳೆದುಕೊಂಡಂತಾಗುತ್ತದೆ. ಆದ್ದರಿಂದ ಈ ಸಮಸ್ಯೆಯನ್ನು ಛೇಂಬರ್ ಪುನರ್ ಪರಿಶೀಲಿಸಿ ಹೋರಾಟದ ಸ್ವರೂಪವನ್ನು ಬದಲಿಸಬೇಕಾಗುತ್ತದೆ" ಎಂದು ಹೇಳುತ್ತಾರೆ.

ಪರಭಾಷಾ ಚಿತ್ರಗಳ ವಿರುದ್ಧದ ಕನ್ನಡ ಚಿತ್ರರಂಗದ ಈ ಹೋರಾಟವನ್ನು ಇತರೆ ಭಾಷಾ ಸಿನಿಮಾಗಳ ನಿರ್ಮಾಪಕರೆಲ್ಲ 'ಹಿಟ್ಲರ್ ಪ್ರವೃತ್ತಿಯ ಹೋರಾಟ' ಎಂದೇ ಜರಿಯುತ್ತಿದ್ದಾರೆ. ಪ್ರಾದೇಶಿಕ ಚಿತ್ರಗಳಾದ ತಮಿಳು, ತೆಲುಗು, ಮಲೆಯಾಳಂ ಚಿತ್ರರಂಗದವರು ಇಂತಹ ಯಾವುದೇ ಹೋರಾಟವನ್ನು ಮಾಡುತ್ತಿಲ್ಲದಿರುವುದನ್ನು ಹಿಂದಿ ಚಿತ್ರರಂಗದವರು ಉದಾಹರಿಸುತ್ತಾರೆ. ಆದರೆ ಕನ್ನಡ ಚಿತ್ರರಂಗ ಮಾತ್ರ ಹಿಂದಿ ಚಿತ್ರಗಳನ್ನೂ ದ್ವೇಷಿಸುತ್ತದೆ, ತಮಿಳು-ತೆಲುಗನ್ನು ಚಿತ್ರಗಳ ವಿರುದ್ಧವೂ ದನಿ ಎತ್ತುತ್ತದೆ. ಇದಕ್ಕೆ ನಮ್ಮವರು ಕೊಡುವ ಕಾರಣ "ನಮ್ಮ ಮಾರುಕಟ್ಟೆ ಚಿಕ್ಕದು. ಬೆಂಗಳೂರು ಕಾಸ್ಮೋಪಾಲಿಟನ್ ನಗರವಾಗಿದೆ, ಇತ್ಯಾದಿ, ಇತ್ಯಾದಿ" ಎಲ್ಲವೂ ಹಾಸ್ಯಾಸ್ಪದವಾಗಿವೆ.



ಕನ್ನಡ ಚಿತ್ರರಂಗ ಕರ್ನಾಟಕದಲ್ಲಿ ಬೇರೂರಬೇಕೆಂಬ ಏಕೈಕ ಕಾರಣಕ್ಕೆ ಪರಭಾಷಾ ಚಿತ್ರಗಳ ಬಿಡುಗಡೆ ಬಗ್ಗೆ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಕೆಲವು ನಿರ್ಬಂಧಗಳನ್ನು ಹೇರಿದೆ. ಆದರೆ ಈ ನಿರ್ಬಂಧಗಳೆಲ್ಲವೂ ಪ್ರಜಾಸತ್ತಾತ್ಮಕವಾಗಿಲ್ಲವೆ. ಈಗ ಈ ಕಾರಣದಿಂದಲೇ ಪರಭಾಷಾ ಚಿತ್ರೋದ್ಯಮದವರೆಲ್ಲರೂ ಒಟ್ಟು ಸೇರಿ ಕನ್ನಡ ಚಿತ್ರರಂಗದ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಅಂದಹಾಗೆ, ಪರಭಾಷಾ ಚಿತ್ರಗಳ ಮೇಲೆ ಕೆಲವು ನಿರ್ಬಂಧಗಳನ್ನು ಹಾಕಿದ ಮಾತ್ರಕ್ಕೆ ಕನ್ನಡ ಚಿತ್ರೋದ್ಯಮ ಬೆಳೆಯುತ್ತಿದೆ ಎಂಬ ಛೇಂಬರ್ ವಾದ ನಗೆಬರಿಸುತ್ತದೆ. ಈ ನಿರ್ಬಂಧವನ್ನು ಕಳೆದ ಹಲವಾರು ವರ್ಷಗಳಿಂದ ಹೇರಲಾಗಿದ್ದರೂ ಈ ಅವಧಿಯಲ್ಲಿ ನಮ್ಮ ಕನ್ನಡದ ಎಷ್ಟು ಚಿತ್ರಗಳು ಜಯಭೇರಿ ಬಾರಿಸಿವೆ ಎಂಬ ಪ್ರಶ್ನೆಗೆ ಪಾಟೀಲರೇ ಉತ್ತರಿಸಬೇಕು.

ಒಂದೆಡೆ ಕರ್ನಾಟಕಕ್ಕೆ ವಿದೇಶಿ ಸಂಸ್ಥೆಗಳನ್ನು ದಿನಕ್ಕೊಂದರಂತೆ ನಮ್ಮ ಸರ್ಕಾರವೇ ಸ್ವಾಗತಿಸುತ್ತಿದೆ.

ಮತ್ತೊಂದೆಡೆ ಆಂಧ್ರ ಶೈಲಿಯ ಹೋಟೆಲ್‌ಗಳು ಗಲ್ಲಿ ಗಲ್ಲಿಯಲ್ಲಿ ತಲೆಎತ್ತುತ್ತಿವೆ. ಅವುಗಳ ಅಕ್ಕಪಕ್ಕದಲ್ಲೇ ಚೈನಿಸ್ ಹೋಟೇಲ್‌ಗಳು, ಪೀಜಾ ಹಟ್‌ಗಳೂ ವ್ಯಾಪಾರ ಮಾಡುತ್ತಿವೆ. ಅವುಗಳ ಆಗಮನದಿಂದ ನಮಗೆ ವ್ಯಾಪಾರ ಕಡಿಮೆಯಾಗಿದೆ ಎಂದು ಉಡುಪಿ ಹೋಟೆಲ್ ಮಾಲೀಕರು ಮುಷ್ಕರ ಹೂಡಿಲ್ಲವಲ್ಲ? ಹಾಗೆಯೇ ಹಾಲಿವುಡ್ ಚಿತ್ರರಂಗದ ಮಾರುಕಟ್ಟೆಗೆ ಹೋಲಿಸಿದರೆ ಬಾಲಿವುಡ್ ಚಿತ್ರರಂಗದ ಮಾರುಕಟ್ಟೆ ಏನೇನೂ ಅಲ್ಲ, ಈ ಕಾರಣಕ್ಕಾಗಿ ಹಿಂದಿಯವರು ಇಂಗ್ಲಿಷ್ ಚಿತ್ರಗಳ ಮೇಲೆ ನಿರ್ಬಂಧವನ್ನು ಹೇರಿಲ್ಲವಲ್ಲ? ಬಿಲಿಯನ್‌ಗಳ ಡಾಲರ್ ವೆಚ್ಚದಲ್ಲಿ ನಿರ್ಮಾಣವಾದ ಹಾಲಿವುಡ್ ಚಿತ್ರಗಳು ಏಕಕಾಲದಲ್ಲಿ ಬಿಡುಗಡೆಯಾಗಲು ಹಿಂದಿಯವರಾಗಲೀ, ತಮಿಳಿನವರಾಗಲೀ ಖ್ಯಾತೆ ತೆಗೆದಿಲ್ಲವಲ್ಲ?

ಹಾಗಾದರೆ ಕನ್ನಡದವರಾದ ನಮಗೆ ಮಾತ್ರ ಯಾಕೆ ಇಂತಹ ಬುದ್ಧಿ ಬಂತು?

ನಿಜ ಕನ್ನಡದ ಸಿನಿಮಾಗಳ ಮಾರುಕಟ್ಟೆ ತುಂಬಾ ಸೀಮಿತವಾದುದು. ಚಿತ್ರ ನಿರ್ಮಾಣದಲ್ಲಿ ನಾವು ಪರಭಾಷಾ ಚಿತ್ರಗಳ ಜೊತೆಗೆ ಪೈಪೋಟಿಗಿಳಿಯಲು ಸಾಧ್ಯವಿಲ್ಲ. ಹಾಗೆಂದ ಮಾತ್ರಕ್ಕೆ ನಾವು ಅವರನ್ನು ನಿರ್ಬಂಧಿಸುವುದು ಕೂಡಾ ಸರಿಯಲ್ಲ. ವಾಸ್ತವವಾಗಿ ಸಿನಿಮಾ ಎಂಬುದು ಒಂದು ಕನಸಿನ ಲೋಕ. ಇಲ್ಲಿ ಕನಸುಗಳನ್ನು ಕಂಡು ಅದನ್ನು ಮಾರಾಟಕ್ಕಿಡುತ್ತಾರೆ. ನಮ್ಮ ಪ್ರಶ್ನೆ ಇಷ್ಟೇ: ಕನಸು ಕಾಣಲು ಬಂಡವಾಳ ಬೇಕೆ? ಕ್ರಿಯಾಶೀಲತೆಯನ್ನು ವೆಚ್ಚದ ಪರಿಧಿಯೊಳಗೆ ಸೇರಿಸುವುದು ಎಷ್ಟು ಸರಿ? ನಾವು ಕನ್ನಡಿಗರು ಕ್ರಿಯಾಶೀಲ ಶೂನ್ಯರಾಗುತ್ತಿದ್ದೇವೆ. ಪರಭಾಷಾ ಚಿತ್ರಗಳ ಮೇಲೆ ನಿರ್ಬಂಧ ಹೂಡುವ ನಾವೇ ಅವೇ ಚಿತ್ರಗಳನ್ನು ರಿಮೇಕ್ ಹೆಸರಲ್ಲಿ ಭಟ್ಟಿ ಇಳಿಸುತ್ತೇವೆ. ಈ ಇಬ್ಬಗೆಯ ನೀತಿಯಿಂದಾಗಿ ಕನ್ನಡ ಚಿತ್ರರಂಗ ದಿನದಿಂದ ದಿನಕ್ಕೆ ನಿಶಕ್ತಿ ಹೊಂದುತ್ತಿದೆ. ಹೀಗಾಗಿ ಬೇರೆ ಭಾಷೆಯ ಚಿತ್ರಗಳನ್ನು ನಿರ್ಬಂಧಿಸುವುದರ ಬದಲಿಗೆ ನಾವು ದೊಡ್ಡ ದೊಡ್ಡ ಕನಸುಗಳನ್ನು ಕಂಡು, ದೊಡ್ಡ ದೊಡ್ಡ ಸಿನಿಮಾವನ್ನು ಮಾಡುವತ್ತ ಚಿತ್ತ ಹರಿಸಬೇಕಾಗಿದೆ. ಇದೊಂದೇ ಈ ಸಮಸ್ಯೆ ಬಗೆಹರಿಸಲು ನಮ್ಮಲ್ಲಿರುವ ಮಂತ್ರ.

• ಸದಾಶಿವ ಶೆಣೈ

shenoylankesh@gmail.com

ಸ್ನೇಕ್ ಮಲ್ಲಿಕಾಳ ಕಿಸ್ಸ್ ಪ್ಲಸ್ ಹಿಸ್ಸ್

ಹಾವಿನ ಜೊತೆ ಸರಸ-ಆಹಾ ಎಂಥಾ ಹರುಷ

ತುಟಿಗೆ ತುಟಿ ಬೆಸೆದು ಹೊಸ ಹೀರೋಗಳನ್ನು ಚಿಂದಿ ಚಿತ್ರಾನ್ನ ಮಾಡಿದ ಹೆಗ್ಗಳಿಕೆ(ಕಿಸ್‌ಗಳಿಕೆ)ಯ ಮಲ್ಲಿಕಾ ಶೆರಾವತ್ ಇಲ್ಲಿಯವರೆಗೆ ಸ್ಕ್ರೀನ್ ಮೇಲೆ ಅನುಭವಿಸಿದ ರಸಮಯವಾದ ಕಿಸ್ ಮತ್ತು ಮೈನವಿರೇಳಿಸುವ ಆಲಿಂಗನ ಯಾವುದು ಗೊತ್ತೇ?









ಬಹುಶಃ ನೀವು ಆಕೆಯ ಹತ್ತಾರು ಚಿತ್ರಗಳನ್ನು ನೆನೆಸಿಕೊಳ್ಳುತ್ತಿದ್ದೀರೇನೋ? ಮಹೇಶ್ ಭಟ್‌ರ 'ಮರ್ಡರ್' ಚಿತ್ರದಲ್ಲಿ ಕಿಸ್ಸರ್ ಬಾಯ್ ಎಂದೇ ಹೆಸರಾಗಿರುವ ಎಮ್ರಾನ್ ಹಶ್ಮಿ ಜೊತೆ ಪಲ್ಲಂಗದಲ್ಲಿ, ಸ್ವಿಮ್ಮಿಂಗ್ ಪೂಲ್‌ನಲ್ಲಿ, ಗಗನಚುಂಬಿ ಕಟ್ಟಡದ ತುತ್ತತುದಿಯಲ್ಲಿ ಹೀಗೆ ಎಲ್ಲೆಂದರಲ್ಲಿ ಸರಣಿ ಕಿಸ್‌ಗಳನ್ನು ಅನುಭವಿಸಿ ಯುವ ಪ್ರೇಕ್ಷಕರ ನರನಾಡಿಗಳಲ್ಲಿ ರೋಮರೋಮಾಂಚನ ಉಂಟುಮಾಡಿದ ಮಲ್ಲಿಕಾ ನೆನಪಾಗುತ್ತಿದ್ದಾಳೆಯೇ? ಉಹುಂ. ಇದು ಅವಳ ಬೆಸ್ಟ್ ಕಿಸ್ ಅಲ್ಲವೇ ಅಲ್ಲವಂತೆ. ಹಾಗಾದರೆ 'ದಿ ಮಿಥ್' ಚಿತ್ರದಲ್ಲಿ ಜಾಕಿಚಾನ್ ಜೊತೆ ಲಿಪ್‌ಲಾಕ್‌ನಲ್ಲಿ ಪಾಲ್ಗೊಂಡಿದ್ದು ಅವಳ ಅಮೋಘ ಕಿಸ್ ಅನುಭವವಿರಬಹುದೇ? ಉಹುಂ, ಇದೂ ಅಲ್ಲವಂತೆ. ಮತ್ಯಾವುದಪ್ಪಾ ಅಂದರೆ, ತೆರೆಗೆ ಬರಲು ಸಿದ್ಧವಾಗಿರುವ 'ಹಿಸ್ಸ್' ಸಿನಿಮಾದಲ್ಲಿನ ಪ್ರಣಯ ದೃಶ್ಯವೊಂದು ಇಲ್ಲೀವರೆಗಿನ ಅವಳಿಗೆ ನೀಡಿರುವ ಅತೀ ರೋಚಕ ಅನುಭವ ನೀಡಿದ ದೃಶ್ಯವಂತೆ. ಇಲ್ಲಿ 'ನಾಗಕನ್ಯೆ' ಮಲ್ಲಿಕಾ ಕಿಸ್ ಮಾಡಿರುವುದು ಘಟಾನುಘಟಿ ಸಿಕ್ಸ್‌ಪ್ಯಾಕ್ ಹೀರೋಗಳನಲ್ಲ, ಎಳಸು ಚಾಕೊಲೇಟ್ ಹೀರೋಗಳನ್ನೂ ಅಲ್ಲ. ಆಕೆ ಮನಸೋ ಇಚ್ಛೆ ಚುಂಬಿಸಿ ಮಜಾ ತೆಗೆದುಕೊಂಡಿರುವುದು ಒಂದು ಬಲಿಷ್ಠ ಹಾವಿನ ಜೊತೆ! ಇದನ್ನು ಆಕೆಯೇ ಹೇಳಿಕೊಂಡಿದ್ದಾಳೆ.

ಕೇರಳದಲ್ಲಿ ಚಿತ್ರೀಕರಣಗೊಂಡ 'ಹಿಸ್ಸ್' ಚಿತ್ರದ ದೃಶ್ಯವೊಂದರಲ್ಲಿ ಮಲ್ಲಿಕಾ ಹಾವಿನೊಂದಿಗೆ ಸರಸವಾಡುತ್ತಾಳೆ. ಸುರಿಯುವ ಮಳೆಯಲ್ಲಿ, ರಾಡಿಯೆದ್ದ ಕೆಸರಿನ ಹೊಂಡದಲ್ಲಿ ಹಾವೊಂದನ್ನು ಮನಸಾರೆ ರಮಿಸುವ ರೋಮಾಂಚಕ ದೃಶ್ಯದಲ್ಲಿ ಮಲ್ಲಿಕಾ ಹಾವಿಗೆ ರಸಭರಿತ ಮುತ್ತು ಕೊಡುತ್ತಾಳೆ, ಜಗತ್ತನ್ನೇ ಮರೆತವಳಂತೆ ಆ ಹಾವಿನ ಮುಖ, ಮುಸುಡಿಯನ್ನೆಲ್ಲಾ ನೆಕ್ಕಿನೇವರಿಸುತ್ತಾಳೆ.

ಮನುಷ್ಯರನ್ನು ಚುಂಬಿಸುವುದಕ್ಕೂ, ಹಾವನ್ನು ಚುಂಬಿಸುವುದಕ್ಕೂ ಏನು ವ್ಯತ್ಯಾಸ ಎಂದು ಕೇಳಿದರೆ, ಮತ್ತೆ ಆ ಹಾವಿನ ಕಿಸ್ ಮೂಡ್‌ಗೆ ಜಾರುವ ಮಲ್ಲಿಕಾ "ವಾವ್ ವಾವ್, ಅದು ಜೀವಮಾನದಲ್ಲಿ ಒಮ್ಮೆ ಮಾತ್ರ ಒದಗುವ ಅವಕಾಶ. ನನ್ನ ಪ್ರಿಯಕರ ಎಂಬಂತೆಯೇ ನಾನು ಹಾವನ್ನು ಮುದ್ದಿಸಿದೆ, ಆತನನ್ನು ಚುಂಬಿಸಿದಂತೆ ಚುಂಬಿಸಿದೆ, ಮನಸಾರೆ ನೆಕ್ಕಿದೆ. ನೀವು ನಂಬುತ್ತೀರೋ ಇಲ್ಲವ್ರೋ ಇಲ್ಲೀವರೆಗೆ ನಾನು ತೆರೆಯ ಮೇಲೆ ಅನುಭವಿಸಿದ ಎಲ್ಲ ಕಿಸ್ಸುಗಳನ್ನೂ ಈ ಕಿಸ್‌ನ ಮುಂದೆ ನಿವಾಳಿಸಿ ಬಿಸಾಡಬೇಕು" ಎನ್ನುವ ಆಕೆ ಮುಂದುವರೆದು "ಹಾವು ಮೊದಲೇ ಹೆದರಿದ್ದರಿಂದ ನನ್ನನ್ನು ಘಾಸಿಗೊಳಿಸಲಿಲ್ಲ. ಎಷ್ಟೆಂದರೂ ಹಾವಿಗಿಂತ ವಿಶಕಾರಿ ನಾನೇ ಅಲ್ಲವೇ?" ಎಂದು ತನ್ನ ನುಣುಪಾದ ಬೆನ್ನನ್ನು ತಾನೇ ಒಮ್ಮೆ ತಟ್ಟಿಕೊಳ್ಳುತ್ತಾಳೆ.

ಸ್ನೇಕ್ ಶೆರಾವತ್

ನಾಗಕನ್ಯೆಯರ ಸೇಡಿನ ಕತೆಯನ್ನಾಧರಿಸಿ ಈವರೆಗೆ ಹಿಂದಿಯಲ್ಲಿ 'ನಾಗಿನ್', 'ನಾಗೀನಾ', 'ಜಾನಿ ದುಶ್ಮನ್' ತರಹದ ಮೂರ್ನಾಲ್ಕು ಚಿತ್ರಗಳು ಬಂದುಹೋಗಿವೆ. ಅದರಲ್ಲೂ 'ನಾಗಿನ್' ಚಿತ್ರದಲ್ಲಿ ಶ್ರೀದೇವಿಯ ನಟನೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ, ಯಾಕೆಂದರೆ ನಾಗಕನ್ಯೆಯಾಗಿ ಆಕೆಯ ಅಭಿನಯ, ಕಣ್ಣುಗಳ ಚಲನೆ, ಸರ್ಪನೃತ್ಯಗಳ ಝಲಕ್ ಪ್ರೇಕ್ಷಕನನ್ನು ಮೋಡಿ ಮಾಡಿದ್ದವು.

ಜೆನ್ನಿಫರ್ ಲಿಂಚ್ ನಿರ್ದೇಶನದ 'ಹಿಸ್' ಚಿತ್ರದಲ್ಲಿ ಮಲ್ಲಿಕಾ ಎಂಬ ಅರೆನಗ್ನ ಸುಂದರಿ ಸರ್ಪಸುಂದರಿಯಾಗಿ ರೂಪಾಂತರಗೊಳ್ಳುತ್ತಿರುವುದರಿಂದ ಈಗ ಎಲ್ಲರ ಚಿತ್ತ ಮಲ್ಲಿಕಾಳತ್ತ ನೆಟ್ಟಿದೆ. ಈ ಸ್ನೇಕ್‌ವುಮನ್ ಪಾತ್ರದಲ್ಲಿ ನಟಿಸುವ ಮುನ್ನ ಹಾವುಗಳ ಬಗೆಗಿನ ಪುರಾಣಗಳ ಕಥೆಯನ್ನು ಮಲ್ಲಿಕಾ ಓದಿಕೊಂಡಿದ್ದಳಂತೆ. ಈ ಪಾತ್ರದಲ್ಲಿ ನಟಿಸಲು ಮಲ್ಲಿಕಾ ಸಿಕ್ಕಾಪಟ್ಟೆ ಎಫರ್ಟ್ ಹಾಕಿದಳಂತೆ. ದಿನವೊಂದಕ್ಕೆ ಆಕೆಯ ಮೇಕಪ್‌ಗೇ ಆರು ಗಂಟೆಗಳ ದೀರ್ಘ ಸಮಯ ಬೇಕಿತ್ತಂತೆ. ಹೀಗಾಗಿ ಎಷ್ಟೋ ಬಾರಿ ನಿಸರ್ಗದ ಕರೆಗಳಿಗೂ ಮಲ್ಲಿಕಾ ಸ್ಪಂದಿಸಲು ಆಗುತ್ತಿರಲಿಲ್ಲವಂತೆ. ಡೆಡಿಕೇಷನ್ ಎಂದರೆ ಇದೇ ಅಲ್ಲವೇ?

'ಹಿಸ್' ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಮಲ್ಲಿಕಾ ಶೆರಾವತ್ ಮೈಬಣ್ಣವನ್ನೇ ಹೋಲುವ ಟೂಪೀಸ್ ಬಿಕಿನಿ ಧರಿಸಬೇಕಿತ್ತು, ಹೆಚ್ಚೂ ಕಮ್ಮಿ ಬೆತ್ತಲೆಯಾಗಿಯೇ ಕಾಣುವಂಥ, ದೇಹದ ಬಹುಭಾಗ ಕಾಣುವಂತಿದ್ದ ಆ ಕಾಸ್ಟ್ಯೂಮ್ ಧರಿಸಿ, ಮರವೊಂದರ ಮೇಲೆ ಮಲ್ಲಿಕಾ ಮೈಚೆಲ್ಲಿ ಮಲಗಿದ್ದರು. ಇನ್ನೇನು ನಿರ್ದೇಶಕ ಆಕ್ಷನ್ ಅನ್ನಬೇಕು, ಅಷ್ಟರಲ್ಲಿ ಅದೆಲ್ಲೋ ಇದ್ದ ಮಲ್ಲಿಕಾಳ ಅಣ್ಣ ವಿಕ್ರಂ ಲಂಬಾ ಕಟ್‌ಕಟ್ ಎನ್ನುತ್ತಾ ಓಡಿಬಂದನಂತೆ. 'ಯಾವ ಕಾರಣಕ್ಕೂ ನನ್ನ ತಂಗಿಯನ್ನು ಈ ಅವಸ್ಥೆಯಲ್ಲಿ ನಟಿಸಲು ಬಿಡೊಲ್ಲ' ಎಂದು ವರಾತ ತೆಗೆದನಂತೆ. ಆತನ ಅರಚಾಟವನ್ನು ಸಹಿಸಲಾರದೆ ಅಂದು ಚಿತ್ರೀಕರಣವನ್ನೇ ನಿಲ್ಲಿಸಬೇಕಾಯಿತಂತೆ. ನಿಜಕ್ಕೂ ಅದು ತಂಗಿಯ ಮೇಲಿನ ಕಾಳಜಿಯಾ ಅಥವಾ 'ಕೊಟ್ಟ ಕಾಸಿಗಷ್ಟೇ ಪ್ರದರ್ಶನ ಮಾಡಿಸ ಬೇಕು' ಎಂಬುದು ವಿಕ್ರಂ ಲಂಬಾನ ರೂಲ್ಸಾ ಅನ್ನೋದೇ ಡೌಟು. ಆದರೆ ಮಲ್ಲಿಕಾ "ಯಾವ ಸಹೋದರನೂ ತೆರೆಯ ಮೇಲೆ ತನ್ನ ಸಹೋದರಿಯನ್ನು ಆ ರೀತಿ ನೋಡಲು ಬಯಸುವುದಿಲ್ಲ. ಆದರೆ ಅದಕ್ಕೆಲ್ಲಾ ಕೇರ್ ಮಾಡುತ್ತಾ ಕೂರಲು ನನ್ನಿಂದ ಸಾಧ್ಯವಿಲ್ಲ. ಹಾಗೆಲ್ಲಾ ಲಘು-ಬಿಗು ನೋಡುತ್ತಾ ಕೂತರೆ ಈ ರಂಗೀನ್ ದುನಿಯಾದಲ್ಲಿ ನಿಲ್ಲುವುದಕ್ಕೂ ಆಗುವುದಿಲ್ಲ" ಎಂದು ಹೇಳುತ್ತಾಳೆ.

ಗಾಸಿಪ್ ಗೊಂಬೆ

ಅದೇನು ಸೋಜಿಗವ್ರೋ, ವಿಪರ್ಯಾಸವ್ರೋ ಗೊತ್ತಿಲ್ಲ, ಪೂರಾ ಮೈಚಳಿ ಬಿಟ್ಟು ನಟಿಸುವ, ಕ್ಯಾಬರೆ ಕುಣಿತಗಳಲ್ಲಿ, ಐಟಂ ಸಾಂಗುಗಳಲ್ಲಿ ಮಾದಕವಾಗಿ ಕಾಣಿಸಿಕೊಳ್ಳುವ ಬಹಳಷ್ಟು ನಟಿಯರು ತುಂಬು ಕುಟುಂಬದಿಂದ ಬಂದ ಅಥವಾ ಬದುಕಿನ ಕಷ್ಟಕ್ಕೆ ಮೈಯೊಡ್ಡಿದವರೇ ಆಗಿದ್ದಾರೆ.

ಮಲ್ಲಿಕಾ ಶೆರಾವತ್ ಕೂಡಾ ಹರಿಯಾಣದ ರೈತ ಕುಟುಂಬದಿಂದ ಬಂದ ಹೆಣ್ಣುಮಗಳು. ಈಕೆಯ ಮೂಲ ಹೆಸರು ರೀಮಾ ಲಂಬಾ. ಸಿಟಿ ಹುಡುಗಿಯರು ಮೋಜಿಗಾಗಿ ಕಾರು ಬೈಕುಗಳಲ್ಲಿ ಲಾಂಗ್ ರೈಡ್ ಮಾಡುವಂತೆ, ಹಳ್ಳಿಯಲ್ಲಿ ಬೆಳೆದ ಈ ಕ್ರೇಜಿ ಹುಡುಗಿ ಮಲ್ಲಿಕಾ ಲೈಫ್ ಎಂಜಾಯ್ ಮಾಡಲು ಹೊಲ ಊಳಲು ಬಳಸುವ ಟ್ರಾಕ್ಟರ್ ಓಡಿಸುತ್ತಿದ್ದಳಂತೆ.

'ಮರ್ಡರ್' ಮುತ್ತು!



ಮೊದಲ ಚಿತ್ರ 'ಖ್ವಾಹಿಷ್'ನಲ್ಲೇ ತನ್ನ ಬೋಲ್ಡ್ ಸ್ವಭಾವವನ್ನು ಬಿಚ್ಚಿಟ್ಟ ಮಲ್ಲಿಕಾಗೆ ಬ್ರೇಕ್ ಸಿಕ್ಕಿದ್ದು ಮಹೇಶ್ ಭಟ್ ಬ್ಯಾನರ್‌ನ ಅನುರಾಗ್ ಬಸು ನಿರ್ದೇಶನದ 'ಮರ್ಡರ್' ಚಿತ್ರದಲ್ಲಿ. ಈ ಚಿತ್ರದಲ್ಲಿ ಅತೃಪ್ತ ಗೃಹಿಣಿಯಾಗಿ, ವಿವಾಹೇತರ ಲೈಂಗಿಕ ಸಂಬಂಧದಲ್ಲಿ ... ಪಾತ್ರದಲ್ಲಿ ಮಲ್ಲಿಕಾ ತೋರಿದ ತೊಳಲಾಟ, ಕಾಮಪ್ರಚೋದಕ ನೋಟಗಳು, ... ಯುವ ಪ್ರೇಕ್ಷಕರ ದೇಹಕ್ಕೆ ಕರೆಂಟು ಶಾಕ್ ನೀಡಿದ್ದವು. ಕಿಸ್ಸರ್ ಬಾಯ್ ... ಹಶ್ಮಿ ಜೊತೆ ಮಲ್ಲಿಕಾ 'ಅನುಭವಿಸಿ'ದ 17 ಕಿಸ್ಸುಗಳು ಇಂದಿಗೂ ... ಕಿಸ್‌ಗಳು ಎಂದೇ ಹೆಸರಾಗಿವೆ.

ಸಿನಿಮಾಗಳಲ್ಲಿ ಅವಕಾಶಗಳು ಸಿಗುವುದಕ್ಕೂ ಮುನ್ನ ಮಲ್ಲಿಕಾ ... ಮ್ಯೂಸಿಕ್ ವಿಡಿಯೋ ಆಲ್ಬಂಗಳಲ್ಲಿ ಬಾಂಗ್ರಾ ನೃತ್ಯ ಮಾಡಿಕೊಂಡಿದ್ದಳು. ... ಸ್ವಲ್ಪ ಕಾಲ ಗಗನಸಖಿಯಾಗಿಯೂ ಕೆಲಸ ಮಾಡಿದಳು. ಮಲ್ಲಿಕಾ ಸಿನಿಮಾ... ಬರುವುದು ಆಕೆಯ ತಂದೆಗೆ ಒಂದಿಷ್ಟೂ ಇಷ್ಟವಿರಲಿಲ್ಲ. ಆದರೆ ... ಪ್ರತಿರೋಧವನ್ನು ಧಿಕ್ಕರಿಸಿದ ಮಲ್ಲಿಕಾ ತಾನು ನಟಿಯಾಗಿಯೇ ತೀರಬೇಕು ... ಪಣ ತೊಟ್ಟು ಮನೆ ತೊರೆದು ಮುಂಬೈಗೆ ಬಂದವಳು. ಸಿನಿಮಾಕ್ಕೆ ... ಮುನ್ನ ಮಲ್ಲಿಕಾಗೆ ಜೆಟ್ ಏರ್‌ವೇಸ್ ಪೈಲಟ್ ಕರಣ್ ಸಿಂಗ್‌ಗಿಲ್ ಎಂಬಾತನ... ಮದುವೆಯಾಗಿತ್ತು, ಸಿನಿಮಾದ ಸೆಳೆತಕ್ಕೆ ಬಿದ್ದ ಮಲ್ಲಿಕಾ ತನ್ನ ಗಂಡನಿಗೆ ಡೈ... ನೀಡಿ ಬಂದಳು ಎಂಬ ಸುದ್ದಿಯೂ ಇದೆ.

ಮಲ್ಲಿಕಾಳ ಸುತ್ತ ಗಿರಕಿ ಹೊಡೆಯುವ ಗಾಸಿಪ್ಪುಗಳು, ಅಪವಾದಗಳು ... ಇದ್ದರೂ ಈಕೆ 'ಗಂಡೆದೆ'ಯ ಹೆಣ್ಣು ಅನ್ನೋದು ಮಾತ್ರ ನಿಜ. ಸಾಮಾ... ಬಾಲಿವುಡ್ ನಟಿಯರೆಂದರೆ, ಮೆಟ್ರೋ ಸಿಟಿಗಳಿಂದ ಬಂದವರೋ, ಮಾಡೆಲಿಂ... ಮಿಂಚಿದವರೋ ಅಥವಾ 'ಗಾಡ್‌ಫಾದರ್'ಗಳ ಕೃಪಾಕಟಾಕ್ಷ ಹೊಂದಿದ... ಆಗಿರುತ್ತಾರೆ. ಆದರೆ, ಯಾವುದೇ ಸಿನಿಮಾ ಹಿನ್ನೆಲೆಯಿಲ್ಲದ ಈ ಹಳ್ಳಿ ... ಬೆಳೆದುಬಂದ ದಾರಿಯೇ ಒಂದು ಅಚ್ಚರಿ.

ಮಲ್ಲಿಕಾ ಶೆರಾವತ್‌ಳನ್ನು ಅಮೆರಿಕಾದ ಸೆಕ್ಸ್ ಸಿಂಬಲ್ ಪಮೇಲಾ ಆಂಡರ... ಹೋಲಿಕೆ ಮಾಡಲಾಗುತ್ತಿದೆ. "ಜನರು ನನ್ನನ್ನು ಬುರ್ಖಾದಲ್ಲಿ ಇಷ್ಟಪಡಲ್ಲ... ಸೆಕ್ಸಿಯಾಗಿ ಇರುವುದು ನನಗೆ ಹೆಮ್ಮೆ ಮತ್ತು ನನ್ನ ದೇಹಸಿರಿಯಿಂದ ನೋ... ಮನಸ್ಸಿಗೆ ತೃಪ್ತಿಯಾಗುತ್ತಿರುವಾಗ ನಾನೇಕೆ ಗೌರಮ್ಮನಂತಿರಬೇಕು. ನಾನ... ಸಾವಿತ್ರಿಯಂತೂ ಅಲ್ಲ" ಎಂದು ಬೋಲ್ಡ್ ಆಗಿ ಮಾತಾಡುವ ಮಲ್ಲಿಕಾ ... ನಟಿಯಲ್ಲದಿದ್ದರೂ ಅದೃಷ್ಟವಂತೆಯಂತೂ ಹೌದು.

ಇಡೀ ಪ್ರಪಂಚದಲ್ಲಿ ಹೆಸರು ಮಾಡಿರುವ ನಟ ಜಾಕಿಚಾನ್ ಜೊತೆ ... ಚಿತ್ರದಲ್ಲಿ ನಟಿಸಿದ್ದಲ್ಲದೆ ಅದರಲ್ಲೆ ಚಾನ್‌ಗೆ ಮುತ್ತು ಕೊಟ್ಟು ಪ್ರಚಾರ ಪಡೆ... ಹಾಗೆಯೇ ದಕ್ಷಿಣ ಭಾರತದ ಅದ್ಭುತ ನಟ ಕಮಲ್ ಹಾಸನ್ ಜೊತೆ 'ದಶಾವತಾರಂ'ನಲ್ಲಿ ಲೇಡಿ ಬಾಂಡ್ ಪಾತ್ರದಲ್ಲಿ ಕಾಣಿಸಿಕೊಂಡು ಎಲ್ಲರನ್ನೂ ಬೆಚ್ಚಿ ಬೀಳಿಸಿದ್ದಳು. 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದಲ್ಲಿ ಕನ್ನಡದ 'ಕರಿಯ' ಪ್ರೇಮ್ ಜೊತೆ ಬೆಂಗಳೂರಿನ ರಸ್ತೆಗಳಲ್ಲಿ ಸ್ಟೆಪ್ ಹಾಕಿದ್ದಳು. ಮಾತ್ರವಲ್ಲ ಇಂಟರ್‌ನ್ಯಾಷನಲ್ ರಸಿಕ ಪತ್ರಿಕೆ 'ಪ್ಲೇಬಾಯ್'ನ ಮುಖಪುಟದಲ್ಲಿ ಕಾಣಿಸಿಕೊಂಡ ಭಾರತದ ಮೊದಲ ಮಾದಕ ಮಹಿಳೆ ಎಂಬ ಹೆಗ್ಗಳಿಕೆ ಕೂಡಾ ಮಲ್ಲಿಕಾಳದ್ದೇ. ವರ್ಷಕ್ಕೆ ಮುನ್ನ ಕೌಬಾಯ್ ಸನ್ಯಾಸಿ ರಾಘವೇಶ್ವರನ ಸನ್ನಿಧಾನಕ್ಕೆ ಲಗ್ಗೆಯಿಟ್ಟವಳು ಇದೇ ಮಲ್ಲಿಕಾ..!



• ಅರುಣ್.ಜಿ
arunodayagc@gmail.com

ಶೆರಾವತ್‌ಳ ಸಿಲ್ಕು ಲುಕ್ಕು!

ದಕ್ಷಿಣ ಭಾರತದ ಪ್ರತಿಯೊಬ್ಬ ಚಿತ್ರರಸಿಕನಿಗೂ ಗೊತ್ತಿರುವಾಕೆ ಸಿಲ್ಕ್ ಸ್ಮಿತಾ. 80ರ ದಶಕದಲ್ಲಿ ಬೆಳ್ಳಿತೆರೆಗೆ ಲಗ್ಗೆಯಿಟ್ಟ ಸಿಲ್ಕ್, ನಾಯಕಿಯಾಗಿ, ಡ್ಯಾನ್ಸರ್‌ಆಗಿ, ಲೇಡಿ ಡಾನ್ ಆಗಿ.... ಮಾಡಿದ ಪಾತ್ರಗಳು, ಸೃಷ್ಟಿಸಿದ ಕ್ರೇಜ್ ಒಂದೇ ಎರಡೇ! ಇವತ್ತಿಗೂ ಆಕೆಯನ್ನು ನೆನೆಸಿಕೊಂಡರೆ ಪ್ರೇಕ್ಷಕ ಅಬ್ಬಬ್ಬಾ ಎಂದು ನಿಟ್ಟುಸಿರುಬಿಡುತ್ತಾನೆ. ಇಂಥ ಸಿಲ್ಕ್ ಸ್ಮಿತಾ ತನ್ನ ಅಭಿಮಾನಿಗಳನ್ನು ಎಷ್ಟೇ ರಂಜಿಸಿರಬಹುದು. ಆದರೆ ಆಕೆಯ ಖಾಸಗೀ ಜೀವನವಂತೂ ಬರೀ ದುಃಖ ದುಮ್ಮಾನಗಳಿಂದ ಕೂಡಿದ ದುರಂತಗಾಥೆಯೇ ಆಗಿತ್ತು. ಆಂದ್ರ ಪ್ರದೇಶದ ಸಣ್ಣ ಗ್ರಾಮವೊಂದರಲ್ಲಿ ಹುಟ್ಟಿದ ಈಕೆ ಜನಪ್ರಿಯತೆಯ ಉತ್ತುಂಗಕ್ಕೇರಿದರೂ ಕಡೆಗೆ ಎಲ್ಲ ರೀತಿಯ ಸಂಕಷ್ಟಗಳಿಗೆ ಸಿಲುಕಿ 1996ರಲ್ಲಿ ಆತ್ಮಹತ್ಯೆಗೆ ಶರಣಾದಳು.

ಇಂಥ ಸಿಲ್ಕ್‌ಸ್ಮಿತಾ ಜೀವನಗಾಥೆಯನ್ನು ಆಧರಿಸಿ ಬಾಲಿವುಡ್‌ನಲ್ಲಿ ಸಿನಿಮಾ ಆರಂಭವಾಗಿದೆ. ಬಾಲಾಜಿ ಫಿಲಂಸ್‌ನ ಏಕ್ತಾ ಕಪೂರ್ ಈ ಚಿತ್ರವನ್ನು ನಿರ್ಮಿಸುತ್ತಿದ್ದು ಸಿಲ್ಕ್ ಪಾತ್ರದಲ್ಲಿ ಮಲ್ಲಿಕಾ ಶೆರಾವತ್ ಕಾಣಿಸಿಕೊಳ್ಳುತ್ತಿದ್ದಾಳೆ. ಪಡ್ಡೆಗಳ ಕನಸಿನ ಕನ್ಯೆಯಾಗಿರುವ ಮಲ್ಲಿಕಾ ಶೆರಾವತ್ ಸಿಲ್ಕ್ ಸ್ಮಿತಾ ಪಾತ್ರದಲ್ಲಿ ನಟಿಸಿ ಪ್ರೇಕ್ಷಕರ ಮೈಯನ್ನು ನಡುಗಿಸುವುದಂತೂ ನಿಜ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore